


ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ನವೆಂಬರ್ 21, 2007 ರೂ.10/-



ಲಿಂಗಾಯತರ ಕೈಚಳಕ!

ಯಡ್ಡಿ
ಎಂಥ
ಲಿಂಗಾಯತ?

ಬಳ್ಳಾರಿ: ರಾಜಕಾರಣಿಗಳ ದರ್ದಿಗೆ ಮೂವರು ಬಲಿ



ವಿಠಲ ಹೆಗ್ಡೆ ದಲಿತರ ದೌರ್ಜನ್ಯ ಮಾಡಿದರೇ?



ಬೆತ್ತನಗೆರೆ ಸೀನನ ಎನ್‌ಕೌಂಟರ್ ಮಿಸ್?

ಪವಳಿ ಕದ್ದ ವಿಮಾನ ಇಂಗ್ಲೆಂಡಿನಲ್ಲಿ ಪತ್ತೆ



ಜೈವಿಕ ಇಂಧನದ ರಾಜಕೀಯ: 'ಹಸಿರುಮನೆ'ಯೇ ಹೊತ್ತಿ ಉರಿಯುವಾಗಲೂ ಲಾಭ ಮಾಡಬಯಸುವವರು

ಜಗತ್ತಿನ ಶ್ರೀಮಂತ ರಾಷ್ಟ್ರಗಳು ಲಾಭದ ದುರಾಸೆಗೆ ಭೂ ತಾಯಿಯನ್ನು ಬಗೆದುಬಗೆದು ಬರಿದು ಮಾಡುತ್ತಿದ್ದಂತೆ ಪ್ರಕೃತಿ ಇದೀ ಮನುಕುಲದ ಮೇಲೆ ಸೇಡು ತೀರಿಸಿ ಕೊಳ್ಳುತ್ತಿದೆ. ಶ್ರೀಮಂತ ರಾಷ್ಟ್ರಗಳು ಅದರಲ್ಲೂ ವಿಶೇಷವಾಗಿ ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳು ತೈಲ, ಅದಿರು ಇತ್ಯಾದಿಗಳ ದುರಾಸೆಗೆ ಇದೀ ಭೂಮಿಯನ್ನು ಬಗೆದು ತೈಲದ ಅದಿರು ತೆಗೆದು ಅದರಿಂದ ತಮ್ಮ ಶ್ರೀಮಂತ ಜನತೆಯ ಐಶಾರಾಮಿ ಬದುಕಿಗೆ ಇಂಧನವನ್ನು ಒದಗಿಸುತ್ತಿದ್ದಂತೆ ಭೂಗೋಳಕ್ಕೆ ಕವಚದಂತಿದ್ದ ಓಝೋನ್ ಪದರ ತೂತಾ ಗುತ್ತಿದೆ. ಮತ್ತು ಇದರಿಂದಾಗಿ ಜಗತ್ತಿನ ತಾಪಮಾನ ಹೆಚ್ಚಾಗುತ್ತಿದೆ. ಇದರಿಂದಾಗಿ ಹಲವಾರು ಶ್ರೀಮಂತ ದೇಶಗಳ ಭೂಭಾಗವೇ ಮುಳು ಗುವ ಹಂತಕ್ಕೆ ಬಂದಿದೆ. ಅಷ್ಟು ಮಾತ್ರವಲ್ಲ, ತಾಪಮಾನದ ಹೆಚ್ಚಳವು ಸಾಗರದ ತಾಪಮಾನವನ್ನೂ ಹೆಚ್ಚಿಸು ತ್ತಿದೆ. ಇದರಿಂದ ಮೀನು ಗಳ ಜೀವನ ವೃತ್ತವೇ ಅಪಾಯಕ್ಕೆ ಸಿಲುಕಿ ಇದೀ ಜಗತ್ತಿನ ಮೀನು ಗಾರರ ಬದುಕು ಬೀದಿಪಾಲಾಗು ತ್ತಿದೆ. ಅದೇ ರೀತಿ ಇದೀ ಜಗತ್ತಿನ ಹವಾಮಾನದಲ್ಲೇ ವೈಪರೀತ್ಯ ಉಂಟಾಗುತ್ತಿರು ವುದರಿಂದ ತಾಪ ಮಾನ ಹೆಚ್ಚಳದಿಂದ ಬೆಳೆಗಳ ಮೇಲೂ ತೀವ್ರ ಪರಿಣಾಮ ಬೀರು ತ್ತಿದೆ. ಇದರಿಂದ ಉತ್ಪಾದಕತೆ ತೀವ್ರ ವಾಗಿ ಕುಸಿಯುವ ಅಪಾಯ ಏದೆ.



ಜಗತ್ತಿನ ಜನತೆಯ ಮೇಲೆ ಆಗುವ ಅಪಾಯದ ಬಗ್ಗೆ ಕಾಳಜಿಯಿಂದಲ್ಲವಾದರೂ, ತಾವೂ ಸಹ ಇದೇ ಜಗತ್ತಿನಲ್ಲಿ ವಾಸಿಸಲೇಬೇಕಾದ ಅನಿವಾರ್ಯತೆಯಿಂದಾಗಿ ಈಗ ಶ್ರೀಮಂತ ರಾಷ್ಟ್ರಗಳು ಸಹ "ಹಸಿರುಮನೆ" ಅಪಾಯದ - ಅಂದರೆ ಜಗತ್ತಿನ ತಾಪಮಾನ ಏರಿಕೆಯ - ಬಗ್ಗೆ ಕ್ರಮ ತೆಗೆದುಕೊಳ್ಳಲು ಮುಂದಾಗಿವೆ. ಇದಿ ಜಗತ್ತಿಗೆ ಬಂದೊದ ಗಿರುವ ಈ ಅಪಾಯವು, ಈಗಲಾ ದರೂ ಶ್ರೀಮಂತ ರಾಷ್ಟ್ರಗಳು ಲಾಭದ ದುರಾಸೆಯಿಂದಾಚೆಗೆ ಹೊರಬಂದು ಇದೀ ಜಗತ್ತಿನ ಒಳಿತಿನ ಬಗ್ಗೆ ಯೋಚಿಸುವಂತೆ ಮಾಡುತ್ತದೆ ಎಂದು ಭಾವಿಸಿದ ಬಡದೇಶಗಳ ಆಸೆ ಇಲ್ಲಿಯೂ ಸುಳ್ಳಾಗಿದೆ.

ಲಾಭದ ಆಸಕ್ತಿಯಿಲ್ಲದೆ ಉಸಿರನ್ನೂ ಆಡದ ಜಗತ್ತಿನ ಬಂಡವಾಳಶಾಹಿ ವ್ಯವಸ್ಥೆ ಜಗತ್ತಿನ ತಾಪಮಾನದ ಏರಿಕೆ ಸೃಷ್ಟಿಸಿರುವ ಆತಂಕವನ್ನೂ ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತಿದೆ. ಮತ್ತೊಮ್ಮೆ ಈ ಸಾಮ್ರಾಜ್ಯಶಾಹಿ ಕುತಂತ್ರದ ಬಲಿಪಶುಗಳು ಬಡದೇಶಗಳ ಬಡಜನತೆ ಮತ್ತು ಬಡ ರೈತಾಪಿಯೇ ಆಗಲಿದ್ದಾರೆ.

ಜಗತ್ತಿನ ತಾಪಮಾನದ ಏರಿಕೆಯನ್ನು ತಡೆಗಟ್ಟ ಬೇಕೆಂದರೆ CO_2 ಅನಿಲವನ್ನು ಹೆಚ್ಚಾಗಿ ಹೊರ ಬಿಡುವ ಪೆಟ್ರೊಲಿಯಂ ತೈಲದ ಬಳಕೆ ತೀವ್ರಗತಿ ಯಲ್ಲಿ ಕಡಿಮೆಯಾಗಬೇಕು. ಅದನ್ನು ಅತಿ ಹೆಚ್ಚಾಗಿ ಬಳಸುವವರು ಅಮೆರಿಕದಂಥ ಶ್ರೀಮಂತ ರಾಷ್ಟ್ರಗಳೇ. ಆದರೆ ತೈಲವಿಲ್ಲದೆ ಅವರ ನಿತ್ಯ ಜೀವನದ ಮತ್ತು ಆರ್ಥಿಕತೆಯ ಚಕ್ರ ಚಲಿಸುವುದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಈಗ ಅನಿವಾರ್ಯವಾಗಿ ಪೆಟ್ರೋಲಿಯಂ ತೈಲದ ಬಳಕೆ ಕಡಿಮೆ ಮಾಡಲೇ ಬೇಕಿರುವುದರಿಂದ ಪರ್ಯಾಯ ಇಂಧನ ಮೂಲಗಳ ಅನ್ವೇಷಣೆ ಬಿರುಸಿನಿಂದ ಸಾಗಿದೆ. ಅದರಲ್ಲಿ ಅತ್ಯಂತ ಪ್ರಮುಖವಾಗಿ ಮೂಡಿ ಬಂದಿರುವುದು ಜೈವಿಕ ಇಂಧನ.

ಜೈವಿಕ ಇಂಧನವೆಂದರೆ ಏನು? ಬಡರಾಷ್ಟ್ರಗಳ ರೈತಾಪಿ ಬೆಳೆಯುವ ಜೋಳ, ಕಬ್ಬು ಇನ್ನಿತ್ಯಾದಿ ಆಹಾರಧಾನ್ಯಗಳನ್ನು ಬಳಸಿ ಪಡೆದುಕೊಳ್ಳುವ ಇಂಧನವೇ ಜೈವಿಕ ಇಂಧನ. ಈಗ ಅಮೆರಿಕದಲ್ಲಿ ಮುಂದಿನ ಇಪ್ಪತ್ತು ವರ್ಷಗಳಲ್ಲಿ ತಾವು ಬಳಸುವ ಇಂಧನದ ಶೇ.30 ಭಾಗವನ್ನು ಜೈವಿಕ ಇಂಧನದ ಮೂಲದಿಂದ ಪಡೆದುಕೊಳ್ಳತಕ್ಕದ್ದು ಎಂದು ಆದೇಶಿಸಲಾಗಿದೆ. ಆ ಕಾರಣದಿಂದಲೇ ಇಂದು ಅಮೆರಿಕದಲ್ಲಿ ಬೆಳೆಯಲಾಗುತ್ತಿರುವ ಜೋಳದಲ್ಲಿ ಶೇ.30 ಭಾಗ ಜೈವಿಕ ಇಂಧನ ತಯಾರಿಗೆ ಬಳಕೆಯಾಗುತ್ತಿದೆ. ಆದರೆ ಅದು ಇಂದಿನ ಅಮೆರಿಕದ ಅಗತ್ಯದ ಶೇ.10ರಷ್ಟನ್ನೂ ಪೂರೈಸುತ್ತಿಲ್ಲ. ಹೀಗಾಗಿ ಅಮೆರಿಕ ಇಂದು ತನ್ನ ಅಗತ್ಯಕ್ಕೆ ತಕ್ಕಷ್ಟು ಜೈವಿಕ ಇಂಧನ ಸರಬರಾಜು ಮಾಡುವ ಹೊಣೆಯನ್ನು ಬಡರಾಷ್ಟ್ರಗಳ ಹೆಗಲಿಗೇರಿಸುತ್ತಿದೆ. ಆದ್ದರಿಂದಾಗಿಯೇ ಇಂದು ಬ್ರೆಜಿಲ್‌ನ ಉಳುವ ಯೋಗ್ಯ ಭೂಪ್ರದೇಶದಲ್ಲಿ ಅಮೆರಿಕಕ್ಕೆ ಎಥನಾಲ್ ಎಂಬ ಜೈವಿಕ ಇಂಧನ ಪೂರೈಸಲು ಕಬ್ಬು ಬೆಳೆಯಲಾಗುತ್ತಿದೆ. ಇದರಿಂದ ಬ್ರೆಜಿಲ್ ದೇಶದ ಆಹಾರಧಾನ್ಯ ಉತ್ಪಾದನೆಯೂ ತೀವ್ರಗತಿಯಲ್ಲಿ ಕುಸಿಯುತ್ತಿದೆ ಹಾಗು ಆಹಾರಧಾನ್ಯಗಳ ಬೆಲೆಯೂ ಗಗನ ಮುಟ್ಟುತ್ತಿದೆ. ಇದೆಲ್ಲದರಿಂದಾಗಿ ಬ್ರೆಜಿಲ್ ಈಗ ತನ್ನ ಆಹಾರ ಧಾನ್ಯಗಳ ಅಗತ್ಯಕ್ಕೆ ಅಮೆರಿಕದ ಮೇಲೆ ಅವಲಂಬಿಸುವ ಪರಿಸ್ಥಿತಿ ಉಂಟಾಗಿದೆ.

ಸಾರಾಂಶದಲ್ಲಿ ಇದೇ ಜೈವಿಕ ಇಂಧನದ ವಸಾಹತುಶಾಹಿ ರಾಜಕೀಯ. ಧರೆಯೇ ಹೊತ್ತಿ ಉರಿಯುತ್ತಿದ್ದರೂ ಅದರಲ್ಲೇ ಚಳಿ ಕಾಯಿಸಿಕೊಳ್ಳುವ ಸಾಮ್ರಾಜ್ಯಶಾಹಿಗಳ ಹುನ್ನಾರ. ಜೈವಿಕ ಇಂಧನವನ್ನು ಬಳಸಬೇಕೆಂಬುದು ಕಡ್ಡಾಯವಾಗು ತ್ತಿದ್ದಂತೆ ಕೃಷಿಯನ್ನೇ ನಂಬಿ ಬದುಕುತ್ತಿರುವ ಬಡ ದೇಶಗಳು ತಮ್ಮ ಜನತೆಯ ಹಸಿವನ್ನು ತೀರಿಸಲು ಆಹಾರ ಧಾನ್ಯವನ್ನು ಬೆಳೆಯುವ ಬದಲಿಗೆ ಶ್ರೀಮಂತ ರಾಷ್ಟ್ರಗಳ ಇಂಧನದ ಹೊಟ್ಟೆಬಾಕತನವನ್ನು ಪೂರೈಸಲು ಆಹಾರ ಧಾನ್ಯವನ್ನು ಬೆಳೆಯಲೇಬೇಕಾದ ಕಡ್ಡಾಯಕ್ಕೆ ಒಳಪಡುತ್ತವೆ. ಇದ ರಿಂದಾಗಿ ಒಂದೆಡೆ ಆ ದೇಶಗಳಲ್ಲಿ ತೀವ್ರಗತಿಯಲ್ಲಿ ಆಹಾರ ಧಾನ್ಯದ ಕೊರತೆ ಕಾಣಿಸಿಕೊಳ್ಳುತ್ತದೆ. ಇನ್ನೊಂದೆಡೆ ಕಡಿಮೆ ಪ್ರಮಾಣದಲ್ಲಿ ಲಭ್ಯವಾಗುವ ಆಹಾರ ಧಾನ್ಯದ ಬೆಲೆ

ಚಾರ್ವಾಕ

ಶಿವಸುಂದರ್

ಬಡವರ ಕೈಗೆಟುಕದಷ್ಟು ಏರುತ್ತದೆ. ಕಳೆದ ಐದು ವರ್ಷಗಳಿಂದ ವಿಶ್ವದಲ್ಲಿ - ಅದರಲ್ಲೂ ಭಾರತದಲ್ಲಿ - ಜೋಳ, ಅಕ್ಕಿ, ಗೋಧಿಗಳ ಬೆಲೆ ಒಂದೇ ಸಮನೆ ಏರುತ್ತಿದ್ದು ಬಡವರ ತಟ್ಟೆಯಲ್ಲಿ ಅದರ ಪ್ರಮಾಣ ದಿನೇದಿನೇ ಕಡಿಮೆಯಾಗುತ್ತಿದೆ. ಮತ್ತೊಂದೆಡೆ ದೀರ್ಘಾವಧಿಯಲ್ಲಿ ಹೆಚ್ಚು ನೀರನ್ನು ಕೇಳುವ ಕಬ್ಬು ಇನ್ನಿತರ ಸುಲಭ ಜೈವಿಕ ಇಂಧನದ ಬೆಳೆಗಳು ಮಣ್ಣಿನ ಫಲವತ್ತತೆಯನ್ನೂ ಮತ್ತು ನೀರಿನ ಲಭ್ಯತೆಯನ್ನೂ ಕಡಿಮೆಗೊಳಿಸುತ್ತಾ ಹೋಗುತ್ತದೆ. ಐವತ್ತು ವರ್ಷಗಳ ಹಿಂದೆ ಆಹಾರ ಧಾನ್ಯಗಳ ವಿಷಯದಲ್ಲೂ ಅಮೆರಿಕದಂಥ ಸಾಮ್ರಾಜ್ಯಶಾಹಿಗಳನ್ನು ಅವಲಂಬಿಸಿದ್ದಂತಹ ಪರಿಸ್ಥಿತಿಯನ್ನು ಮತ್ತೆ ತಂದೊಡ್ಡುತ್ತದೆ. ಅಂದರೆ ತಾಪಮಾನದ ಏರಿಕೆಯನ್ನೂ, ಜಗತ್ತಿನ ಉಳಿವಿಗೇ ಬಂದಿರುವ ಆತಂಕವನ್ನೂ ಅಮೆರಿಕದಂಥ ಶ್ರೀಮಂತ ರಾಷ್ಟ್ರಗಳು ಬಡರಾಷ್ಟ್ರಗಳ ಮೇಲೆ ತಮ್ಮ ವಸಾಹತುಶಾಹಿ ಶೋಷಣೆ ಮುಂದುವರೆಯಲು ಬಳಸಿಕೊಳ್ಳುತ್ತಿವೆ.

ಇದು ಯಾವುದೋ ದೇಶಕ್ಕೆ ಸಂಭವಿಸುತ್ತಿರುವ ಅಪಾಯವೇನಲ್ಲ, ನಮ್ಮ ಮನೆ ಬಾಗಿಲಿಗೇ ಬಂದೊದಗಿರುವ ಅಪಾಯ. ಈ ಬಾರಿ ಕರ್ನಾಟಕದಲ್ಲಿ 60ಕ್ಕೂ ಹೆಚ್ಚು ಕಬ್ಬು ಬೆಳೆಯುವ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಏಕೆಂದರೆ ಸಕ್ಕರೆ ಬೆಲೆ ಕುಸಿದಿದೆ; ಆದ್ದರಿಂದ ಕಬ್ಬಿನ ರೈತರಿಗೆ ಲಾಭದಾಯಕ ಬೆಲೆ ನೀಡಲು ಸಕ್ಕರೆ ಕಾರ್ಖಾನೆಗಳ ಬಳಿ ದುಡ್ಡಿಲ್ಲ ಎಂಬುದು ಸರ್ಕಾರ ನೀಡುತ್ತಿರುವ ಸಬೂಬು. ಆದರೆ ಇದಕ್ಕೆ ಸರ್ಕಾರ ಕಂಡುಕೊಂಡಿರುವ ಪರಿಹಾರವೇನು? ಸಕ್ಕರೆ ಕಾರ್ಖಾನೆಗಳು ಸಕ್ಕರೆಯ ಬದಲು ಎಥನಾಲ್ ಉತ್ಪಾದಿಸಿ ಅದನ್ನು ಅಮೆರಿಕಕ್ಕೆ ರಫ್ತು ಮಾಡಿ ಹಣ ಮಾಡಬೇಕು; ಮತ್ತು ರೈತರು ಅದಕ್ಕಾಗಿ ತಮ್ಮ ಜಮೀನನ್ನು ಕಾರ್ಪೊರೇಟ್ ಉದ್ದಿಮೆಗಳಿಗೆ ದೊಡ್ಡ ಮಟ್ಟದಲ್ಲಿ ಕಬ್ಬು ಉತ್ಪಾ ದಿಸಲು ಬಿಟ್ಟುಕೊಡಬೇಕು. ಕಬ್ಬು ಬೆಳೆಗಾರರ ಸಂಕಷ್ಟ ಬಗೆಹರಿ ಸಲು ಕುಮಾರಸ್ವಾಮಿ ಮುಂದಿಟ್ಟ ಎರಡೇ ಪರಿಹಾರಗಳಿವು.

ಇದರಿಂದಾಗಿ ಯಾರಿಗೆ ಅನು ಕೂಲವಾಗಿದೆ? ಒಂದೆಡೆ ಸಹಕಾರಿ ಮತ್ತು ಸರ್ಕಾರಿ ಕಬ್ಬು ಕಾರ್ಖಾನೆಗಳು ನಷ್ಟ ಅನುಭವಿಸುತ್ತಿದ್ದರೂ ಇನ್ನೊಂದೆಡೆ ಕರ್ನಾಟಕ ಒಂದರಲ್ಲೇ ಕನಿಷ್ಠ 40 ಹೊಸ ಖಾಸಗಿ ಸಕ್ಕರೆ ಕಾರ್ಖಾನೆಗಳು ಮುಂದಿನ ಕೆಲವು ವರ್ಷಗಳಲ್ಲಿ ಸ್ಥಾಪನೆಗೊಳ್ಳಲಿವೆ. ಈ ಎಲ್ಲಾ ಹೊಸ ಕಾರ್ಖಾನೆಗಳು ಕಡ್ಡಾಯವಾಗಿ ಎಥ ನಾಲ್ ಉತ್ಪಾದಿಸುತ್ತವೆ. ಅಷ್ಟು ಮಾತ್ರವಲ್ಲ, ಪ್ರಮುಖವಾಗಿ ಅವು ಉತ್ಪಾದಿಸಲಿರುವುದು ಎಥನಾಲನ್ನೇ ಹೊರತು ಸಕ್ಕರೆಯನ್ನಲ್ಲ. ಅಲ್ಲದೆ ಈ ಖಾಸಗೀ ಸಕ್ಕರೆ ಕಾರ್ಖಾನೆಗಳು ಸಣ್ಣಪುಟ್ಟವಲ್ಲ. ವಿದೇಶಿ ರಫ್ತು ಉದ್ಯಮದಲ್ಲಿರುವ ರೇಣುಕಾ ಶುಗರ್ಸ್, ಪರ್ಜ ಇನ್ನಿತ್ಯಾದಿ ಎಥನಾಲ್ ರಫ್ತನ್ನೆ ಪ್ರಮುಖವಾಗಿಟ್ಟು ಕೊಂಡಿರುವ ಉದ್ಯಮಗಳಾಗಿವೆ. ಇವು ಸಕ್ಕರೆ ಕಾರ್ಖಾನೆ ಸ್ಥಾಪಿಸುತ್ತಿರುವುದಾದರೂ ಎಲ್ಲಿ? ಎಲ್ಲೆಲ್ಲಿ ಹೊಸದಾಗಿ ನೀರಾವರಿ ಯೋಜನೆಗಳು ಬರುತ್ತಿವೆಯೋ ಅಲ್ಲೆಲ್ಲಾ ನೀರು ತಲುಪುವ ಮೊದಲು ಸಕ್ಕರೆ ಕಾರ್ಖಾನೆಗಳು ಸ್ಥಾಪನೆಗೊಳ್ಳುತ್ತಿವೆ. ಉದಾಹರಣೆಗೆ ಗುಲ್ಬರ್ಗಾದ ಜೇವರ್ಗಿ ತಾಲ್ಲೂಕು ಹೊಸದಾಗಿ ನೀರಾವರಿಗೆ ಒಳಪಟ್ಟ ಕೂಡಲೇ ಅಲ್ಲಿ ರೇಣುಕಾ ಶುಗರ್ಸ್‌ನ ಎರಡು ಘಟಕಗಳು ಸ್ಥಾಪನೆಗೊಳ್ಳುತ್ತಿವೆ. ರೋಗಗ್ರಸ್ತ ಸಹಕಾರಿ ಘಟಕವಾದ ಆಳಂದ ಸಕ್ಕರೆ ಕಾರ್ಖಾನೆಯನ್ನು ಅವರೇ ವಹಿಸಿಕೊಳ್ಳು ತ್ತಿದ್ದಾರೆ. ಅಂದರೆ ಈ ನೀರಾವರಿ ಯೋಜನೆಯು ಬರಪೀಡಿತ ಗುಲ್ಬರ್ಗಾದ ಬಾಯಾರಿಕೆಯನ್ನು ಮತ್ತು ಹಸಿವನ್ನು ನೀಗುವ ಬದಲಿಗೆ ಅಮೆರಿಕದ ಎಥನಾಲ್ ಬಾಯಾರಿಕೆಯನ್ನು ನಿವಾರಿಸಲು ಬಳಕೆಯಾಗುತ್ತಿದೆ ಎಂದಾಯ್ತಲ್ಲವೇ? ಅತ್ಯಂತ ಹೆಚ್ಚು ಕಾಲುವೆ ನೀರನ್ನು ಆನಂತರ ಅಂತರ್ಜಲವನ್ನೂ ಕಬಳಿಸುವ ಈ ಉದ್ಯಮ ಹೀಗೆ ಹತ್ತಿಪ್ಪತ್ತು ವರ್ಷ ಕಳೆದ ನಂತರ ಗುಲ್ಬರ್ಗಾದ ರೈತರಿಗೆ ಬಿಟ್ಟು ಹೋಗುವುದು ಇನ್ನೂ ಹೆಚ್ಚು ಬರಪೀಡಿತ, ಕ್ಷಾರ ಯುಕ್ತ ಜಮೀನನ್ನೇ!

ಇದು ಜೈವಿಕ ಇಂಧನದ ರಾಜಕೀಯ. ಹಸಿರಿನ ಹೆಸರಲ್ಲಿ ಉಸಿರನು ತೆಗೆಯಬಯಸುವ ಸಾಮ್ರಾಜ್ಯಶಾಹಿ ಹುನ್ನಾರ. ಇದು ಕಲಿಸುವ ಪಾಠವೇನು? ಜಾಗತಿಕ ತಾಪಮಾನದ ಏರಿಕೆ ಕೇವಲ ತಂತ್ರಜ್ಞಾನದ ಸಮಸ್ಯೆಯಲ್ಲ, ಅದು ಬಂಡವಾಳಶಾಹಿ ಆರ್ಥಿಕತೆ ಮತ್ತು ರಾಜಕೀಯ ದೊಂದಿಗೆ ಬೆಸೆದುಕೊಂಡಿರುವ ರಾಜಕೀಯ ಸಮಸ್ಯೆ. ಅದೇರೀತಿ ಬಡದೇಶಗಳ ಕೃಷಿ ಬಿಕ್ಕಟ್ಟು ಸಹ ತಂತ್ರಜ್ಞಾನದ ಸಮಸ್ಯೆಯಲ್ಲ, ಅದು ಸಾಮ್ರಾಜ್ಯಶಾಹಿ ಆರ್ಥಿಕತೆ ಮತ್ತು ರಾಜಕೀಯದೊಂದಿಗೆ ಬೆಸೆದುಕೊಂಡಿರುವ ರಾಜಕೀಯ ಸಮಸ್ಯೆ. ಈ ಸಮಸ್ಯೆಯ ಪರಿಹಾರವೂ ಸಹ ಬಂಡವಾಳ ಶಾಹಿ-ಸಾಮ್ರಾಜ್ಯಶಾಹಿ ರಾಜಕೀಯ ಮತ್ತು ಆರ್ಥಿಕತೆಯನ್ನು ಕೆಡವುದರಲ್ಲಿದೆಯೇ ಹೊರತು ಸಾಮ್ರಾಜ್ಯ ಶಾಹಿ ಚೌಕಟ್ಟಿನೊಳಗಿಲ್ಲ.

ವಾರದ ಘೋಷಣೆ

ತಮಿಳುನಾಡಿನ ಟಿ.ಎಂ.ಎಂ.ಕೆ. ಎಂಬ ಸಂಘಟನೆ ತಮ್ಮ ಇತ್ತೀಚಿನ ಮೆರವಣಿಗೆಯಲ್ಲಿ ಪ್ರದರ್ಶಿಸಿದ ಭಿತ್ತಿಪತ್ರದಲ್ಲಿದ್ದ ಘೋಷಣೆ:

1950ರಲ್ಲಿ ನೆಹರೂ ಹೇಳಿದ್ದು: ಭಾರತದ ರಕ್ಷಣಾ ಸೇವೆಗಳಲ್ಲಿ ಮುಸ್ಲಿಮರ ಸಂಖ್ಯೆ ಕಡಿಮೆ ಇರುವುದು ಬೇಸರ ತರುತ್ತಿದೆ.

2004ರಲ್ಲಿ ಮನಮೋಹನ್ ಸಿಂಗ್ ಹೇಳಿದ್ದು: ಸರ್ಕಾರಿ ಸೇವೆಗಳಲ್ಲಿ ಮುಸ್ಲಿಮರ ಸಂಖ್ಯೆ ಇಳಿಮುಖವಾಗಿರುವುದು ಬೇಸರ ತರುತ್ತಿದೆ.

ಬರೀ ಹೇಳಿಕೆಗಳನ್ನು ಕೇಳುವುದು ನಮಗೆ ಬೇಸರ ತರುತ್ತಿದೆ. ನಮಗೆ ಬೇಕಿರುವುದು ಆಚರಣೆ.



No Comments




"ಅನಂತಕುಮಾರನ ಚಡ್ಡಿ ಹರಿಯ ಬೇಕು ಎನ್ನುವ ಹೇಳಿಕೆಯನ್ನು ನಾನು ಹಿಂತೆಗೆದುಕೊಳ್ಳುವುದಿಲ್ಲ. ಅದಕ್ಕೆ ನಾನು ಬದ್ಧ"

-ಡಿ. ಕೆ. ಶಿವಕುಮಾರ್

"ಭಾರತ ಆರ್ಥಿಕತೆಯ ಎಲ್ಲಾ ಮುಖ್ಯ ಕ್ಷೇತ್ರಗಳಲ್ಲೂ ವಿದೇಶಿ ಬಂಡ ವಾಳದ ಮಿತಿ ತೆಗೆದುಹಾಕುವುದನ್ನು ಮುಂದುವರೆಸಬೇಕು ಇದರಿಂದ ತಂತ್ರಜ್ಞಾನ ಹಸ್ತಾಂತರವಾಗುತ್ತದೆ ಮತ್ತು ಸ್ಪರ್ಧಾತ್ಮಕತೆ ಬೆಳೆಯುತ್ತದೆ."


-11ನೇ ಯೋಜನೆಯ ಕರಡು



"ರೇವಣ್ಣ ಬೆನ್ನು ಹತ್ತಿದ ಬೇತಾಳದಂತೆ. ಯಾವುದಾದರೂ ಕೆಲಸ ಆಗಬೇಕೆಂದರೆ ಆತ ಎಲ್ಲರ ಮನೆ ಬಾಗಿಲಿಗೂ ಹೋಗುತ್ತಾರೆ."

-ದೇವೇಗೌಡ

ನಂಬಿದ್ರೆನಂಬಿ ಬಿಟ್ರೆಬಿಡಿ



"ರಾಷ್ಟ್ರಪತಿಗಳ ಮುಂದೆ ನಡೆಸಿದ ಶಾಸಕರ ಪರೇಡ್ ವ್ಯರ್ಥ. ಚುನಾವಣೆಯೇ ಸೂಕ್ತ"

-ಎಂ.ಪಿ.ಪ್ರಕಾಶ್

"ಜೆಡಿಎಸ್ ಶಾಸಕರ ಮೇಲೆ ನನಗೆ ಸಂಪೂರ್ಣ ವಿಶ್ವಾಸವಿದೆ. ಬೆಂಬಲ ವಾಪಸ್ ತೆಗೆದುಕೊಳ್ಳುವ ಗೌಡರ ಪ್ರಯತ್ನದ ಬಗ್ಗೆ ನನಗೆ ಮಾಹಿತಿ ಇಲ್ಲ."

-ಯಡ್ಯೂರಪ್ಪ

"ದೇವೇಗೌಡರು ನಮಗೆ ಹಾಕಿದ್ದು ಶರತ್ತಲ್ಲ, ಅದು ಕೇವಲ ಸಲಹೆಗಳಷ್ಟೆ!"

-ಸದಾನಂದ ಗೌಡ

ಕಡಿಮೆಯಾಗಬೇಕೋ? ನಿಲ್ಲಬೇಕೋ?

"ಕೈದಿಗಳ ಮೇಲೆ ನಡೆಯುತ್ತಿರುವ ಮಾನಸಿಕ ಮತ್ತು ದೈಹಿಕ ದೌರ್ಜನ್ಯಗಳು ಕಡಿಮೆಯಾಗಬೇಕು."

-ರಾಮೇಶ್ವರ ಠಾಕೂರ್, ರಾಜ್ಯಪಾಲರು

ಸಾಮ್ರಾಜ್ಯಶಾಹಿ ಮನಸ್ಥಿತಿ ಎಂದರೆ ಇದೇ!!

"80000 ಮಂದಿಯನ್ನು ಕೊಂದ ಬಗ್ಗೆ ನಾನೇನೂ ಹೆಮ್ಮೆ ಪಟ್ಟುಕೊಳ್ಳುತ್ತಿಲ್ಲ. ಆದೇರೀತಿ ಅದರ ಬಗ್ಗೆ ನನಗೆ ಖೇದವೂ ಇಲ್ಲ. ನಾನು ಪ್ರತಿ ರಾತ್ರಿಯೂ ಚೆನ್ನಾಗಿ ನಿದ್ದೆ ಮಾಡುತ್ತೇನೆ."

-ಪಾಲ್ ಟಿಬೆಟ್ಸ್, ಹಿರೋಶಿಮಾ ಮೇಲೆ ಪ್ರಥಮ ಅಣುಬಾಂಬ್ ಎಸೆದ ವಿಮಾನದ ಚಾಲಕ

ಅಭಾವ ವೈರಾಗ್ಯ!

"ಯಡ್ಯೂರಪ್ಪ ಸರ್ಕಾರ ರಚನೆ ಆದರೆ ಅದರಲ್ಲಿ ಭಾಗವಹಿಸಿ ಎಂದು ಯಾವ ಕಾರಣಕ್ಕೂ ನನ್ನ ಮೇಲೆ ಒತ್ತಡ ಹಾಕಬಾರದು."

-ಎಂ. ಪಿ. ಪ್ರಕಾಶ್

ಶತ್ರುವಿನ ಸ್ನೇಹಿತನೇ...

"ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯರು ಮಹಾನ್ ಸುಧಾರಣಾವಾದಿಗಳು."

-ಹೆನ್ರಿ ಪಾಲ್ಸನ್, ಅಮೆರಿಕದ ಹಣಕಾಸು ಮಂತ್ರಿ

ಬಯ್ದು ಹೇಳುವವರು ಬದುಕಕ್ಕೆ ಹೇಳುತ್ತಾರೆ!

"ಇಂದು ಸಮಾಜದಲ್ಲಿ ಹೆಚ್ಚುತ್ತಿರುವ ಬಡತನಕ್ಕೆ ಸರ್ಕಾರ ಹಸಿರು ಕ್ರಾಂತಿಯಿಂದ ಪಾಠಗಳನ್ನು ಕಲಿಯದಿರುವುದು ಮತ್ತು 91ರಿಂದ ಪ್ರಾರಂಭವಾದ ಆರ್ಥಿಕ ಉದಾರೀಕರಣ ನೀತಿಗಳೇ ಕಾರಣ."

-ಉತ್ಸಾ ಪಟ್ನಾಯಕ್, ಖ್ಯಾತ ಅರ್ಥಶಾಸ್ತ್ರಜ್ಞ

ಭಯೋತ್ಪಾದಕರ ಪ್ರಜಾತಂತ್ರ!

"ಪರ್ವೇಜ್ ಮುಷರಫ್ ಪಾಕಿಸ್ತಾನದಲ್ಲಿ ತುರ್ತು ಪರಿಸ್ಥಿತಿ ಜಾರಿ ಮಾಡಿರುವುದು ದುರದೃಷ್ಟಕರ. ಆದರೆ ಅದರರ್ಥ ಅವರು ಪ್ರಜಾತಂತ್ರ ವಿರೋಧಿಯೆಂದೇನಲ್ಲ. ಈ ಹಿಂದೆ ಅವರು ಪ್ರಜಾಸತ್ತೆ ಜಾರಿಗಾಗಿ ಸಾಕಷ್ಟು ಪ್ರಯತ್ನ ಪಟ್ಟಿದ್ದಾರೆ."

ಕಾಂಡೋಲಿಸಾ ರೈಸ್
ಅಮೆರಿಕದ ವಿದೇಶಾಂಗ ಸಚಿವೆ

ಜನರ ಮರವೇ ಬಂಡವಾಳ!

"ಮಹಾತ್ಮ ಗಾಂಧಿ ಕೊಲೆ ಪ್ರಕರಣವನ್ನು ಕಾಂಗ್ರೆಸ್ ಆಗಾಗ್ಗೆ ಪ್ರಸ್ತಾಪಿಸುತ್ತಲೇ ಇರುವುದು ಸರಿಯಲ್ಲ. ಅದು ಮುಗಿದುಹೋದ ಅಧ್ಯಾಯ."

-ಡಿ.ಎಚ್. ಶಂಕರಮೂರ್ತಿ

ಇದನ್ನು ಹೇಳಲು ಜ್ಯೋತಿಷಿಯೇ ಬೇಕೆ?

ದೀಪಾವಳಿ ದಿನದಂದು ಪ್ರಖ್ಯಾತ ಜ್ಯೋತಿಷಿ ಸೋಮಯಾಜಿ ನುಡಿದ ಭವಿಷ್ಯ:

"ಹಿರಿಯರ ಆಶೀರ್ವಾದ ದೊರಕುತ್ತದೆ. ಮಕ್ಕಳೊಂದಿಗೆ ದೇವಸ್ಥಾನಕ್ಕೆ ತೆರಳುವಿರಿ. ಮಕ್ಕಳ ಸಡಗರ ಮನಸ್ಸಿಗೆ ಖುಷಿ ನೀಡುತ್ತದೆ."



ಕಂಡಹಾಗೆ

ಫ್ಯಾಸಿಸ್ಟ ಸರ್ಕಾರಕ್ಕೆ ಧಿಕ್ಕಾರ

ಯಾವ ದುರ್ಘಟನೆ ನಡೆಯಬಾರದೆಂದು ಕರ್ನಾಟಕದ ಜನತೆ ಆಶಿಸಿದ್ದರೋ ಅದೀಗ ನಡೆದುಹೋಗುತ್ತಿದೆ. ಹಿಂದೂತ್ವವಾದಿ, ಫ್ಯಾಸಿಸ್ಟರ ನಾಯಕತ್ವದಲ್ಲಿ ಹೊಸ ಸರ್ಕಾರ ರಚನೆಯಾಗುತ್ತಿದೆ. RSS ಹಾಗೂ ಗೋಲ್ವಾಲ್ಕರ್ ಚಿಂತನೆಗಳ ನೆಲೆಯಲ್ಲಿ ಆಡಳಿತ ನಡೆಸುವುದಾಗಿ ನೂತನ ಮುಖ್ಯಮಂತ್ರಿ ಯಡಿಯೂರಪ್ಪ ಈಗಾಗಲೇ ಘೋಷಿಸಿದ್ದಾರೆ.

ಕರ್ನಾಟಕಕ್ಕೆ ಕಾದಿರುವ ದುರಂತಗಳ ಮುನ್ಸೂಚನೆಯಂತೆ ಇದು ಕೇಳಿಸುತ್ತಿದೆ. ನಮ್ಮ ಜಾತ್ಯತೀತ ಪರಂಪರೆ, ನಂಬಿಕೆಗಳಿಗೆ, ಸಂವಿಧಾನಾತ್ಮಕ ಆಶಯಗಳಿಗೆ ಧಕ್ಕೆ ತರಲಿರುವ ಈ ದುಷ್ಟರ ಕೈಗೆ ಸರ್ಕಾರದ ನಿಯಂತ್ರಣ ಹೋಗಲು ಕೇವಲ ಬಿಜೆಪಿ ಮಾತ್ರವಲ್ಲ, ಜನತಾದಳ ಹಾಗೂ ಕಾಂಗ್ರೆಸ್ ಕೂಡ ಜವಾಬ್ದಾರಿ ಆಗಿದೆ.

ಪ್ರಿಯ ಸ್ನೇಹಿತರೆ,

ಈ ಕರಾಳ ಅಧ್ಯಾಯವು ಆರಂಭವಾಗುತ್ತಿರುವ ವಿಷಗಳಿಗೆಗೆ ಪ್ರತಿಭಟನೆಯಾಗಿ ಈ ಬಾರಿಯ ನನ್ನ ಅಂಕಣವನ್ನು ಖಾಲಿ ಬಿಟ್ಟಿದ್ದೇನೆ. ಅಷ್ಟೇ ಅಲ್ಲ, ಮುಂದಿನ ಸವಾಲುಗಳನ್ನು ನಾವೆಲ್ಲಾ ಸೇರಿ ಎದುರಿಸಿ ಹೋರಾಡಬೇಕೆಂಬ ಮನವಿಯನ್ನೂ ಮಾಡಿಕೊಳ್ಳುತ್ತಿದ್ದೇನೆ.

ಕರ್ನಾಟಕದ ಎಲ್ಲಾ ದಮನಿತ ಜನರ ಪರವಾಗಿ ಈ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ 'ಲಂಕೇಶ್' ಎಂದಿನಂತೆ ದೃಢವಾಗಿ, ಅಚಲವಾಗಿ ನಿಲ್ಲಲಿದೆ.

■ ಗೌರಿ ಲಂಕೇಶ್




ಮುಂದಿನ ವಾರದಿಂದ


ಜಿ. ಕಲ್ಯಾಣರಾವ್‌ರವರ ಮನಕಲಕುವ ಕಾದಂಬರಿ

ಅಸ್ಪೃಶ್ಯ ವಸಂತ

ಆರಂಭ



'ಅಂಟರಾನಿ ವಸಂತಂ'....



ತೆಲುಗು ಸಾಹಿತ್ಯ ಲೋಕದಲ್ಲಿ ಸಂಚಲನವೆಬ್ಬಿಸಿದ, ಓದುಗರನ್ನು ಈಗಲೂ ಕಾಡುತ್ತಿರುವ ಒಂದು ಅಪರೂಪದ ಕಾದಂಬರಿ. ಅದೀಗ 'ಅಸ್ಪೃಶ್ಯ ವಸಂತ' ಆಗಿ ಕನ್ನಡಕ್ಕೂ ಬರುತ್ತಿದೆ.

ಹೊಸ ವಸಂತ ಹೊಸ ಬದುಕಿನ ಸಂಕೇತ. ಆ ರೀತಿಯಲ್ಲಿ ಮನುಕುಲದ ಇತಿಹಾಸ ಈ ವಸಂತದ ಅನ್ವೇಷಣೆಯೇ ಆದರೆ ಜಾತಿಗ್ರಸ್ತ ಭಾರತೀಯ ಸಮಾಜದಲ್ಲಿ ಈ ವಸಂತವು ಕೆಲವರಿಗೆ ನಿಷಿದ್ಧ ದಲಿತರಿಗೆ ಅಸ್ಪೃಶ್ಯ. ಕಲ್ಯಾಣರಾವ್ 'ಅಂಟರಾನಿ ವಸಂತಂ' ದಲಿತ ವಸಂತದ ಅನ್ವೇಷಣೆಗೆ ಏಳು ತಲೆಮಾರಿನ ದಲಿತರ ವಿಮೋಚನಾ ಮಾರ್ಗದ ಅನ್ವೇಷಣೆ. ಅದಿನ್ನೂ ಮುಗಿದಿಲ್ಲವೆಂಬುದೇ ಈ ಕಾದಂಬರಿಯ ಪ್ರಸ್ತುತತೆಯನ್ನು ಇನ್ನೂ ಹೆಚ್ಚಿಸುತ್ತದೆ.

ಕಾದಂಬರಿಕಾರ ಜಿ. ಕಲ್ಯಾಣರಾವ್ ಇದೇ ದಲಿತ ಬದುಕಿನಿಂದ ಬಂದವರು. ಈಗ ಆಂಧ್ರದ ವಿರಸಂನಲ್ಲಿದ್ದಾರೆ, ಮಾನವಹಕ್ಕುಗಳ ಹೋರಾಟದಲ್ಲೂ ಇದ್ದಾರೆ. ಆ ಕಾರಣಕ್ಕಾಗಿ ಪೊಲೀಸರ, ಪ್ರತಿಗಾಮಿಗಳ ಟಾರ್ಗೆಟ್ ಕೂಡ ಆಗಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆಯ ಪರಂಪರೆಯೇ ಇದೆ. ಅದಕ್ಕೆ ಉಪನದಿಗಳಾಗಿ ಮರಾಠಿ, ತಮಿಳು ದಲಿತ ಲೇಖಕರ ಬರಹ, ಆತ್ಮಕತೆಗಳು ಅನುವಾದಗೊಂಡು ತಲುಪಿವೆ. 'ಅಸ್ಪೃಶ್ಯ ವಸಂತ' ಇನ್ನೊಂದು ಅಂತಹ ಪ್ರಯತ್ನ.

ತೆಲುಗಿನಲ್ಲಿ ಈ ಕಾದಂಬರಿಯ 10 ಸಾವಿರ ಪ್ರತಿ ಖರ್ಚಾಗಿದೆ. ತಮಿಳು ಅನುವಾದ ಮೂರು ಬಾರಿ ಮರುಮುದ್ರಣ ಕಂಡಿದೆ. ಓದುಗರು ಈ ಕಾದಂಬರಿಯನ್ನು ಹೇಗೆ ಬರಮಾಡಿಕೊಂಡರೆನ್ನಲು ಈ ಮಾತು ಹೇಳಬೇಕೆನ್ನಿಸಿತು ಅಷ್ಟೆ. ವಸಂತಂ ಸದ್ಯದಲ್ಲೇ ಹಿಂದಿ, ಇಂಗ್ಲಿಷ್‌ನಲ್ಲೂ (ಓರಿಯೆಂಟ್ ಲಾಂಗ್‌ಮನ್) ಬರುತ್ತಿದೆ. ಈ ಕಾದಂಬರಿಯ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಮಹತ್ವ ಎಷ್ಟಿದೆಯೆಂದರೆ ಆಂಧ್ರ ವಿ.ವಿ.ಗಳಲ್ಲಿ ಪಠ್ಯ ಭಾಗವಾಗಿಯೂ, ಪಿಎಚ್.ಡಿ. ಸಂಶೋಧನೆಯ ವಸ್ತುವಾಗಿಯೂ ವಿದ್ವಾಂಸರ ಗಮನ ಸೆಳೆದಿದೆ.

ಕನ್ನಡ ಸಾಹಿತ್ಯಕ್ಕೆ ಇನ್ನೊಂದಿಷ್ಟು ಚೈತನ್ಯ ತುಂಬಲು 'ಲಂಕೇಶ್' ಈ ಅನುವಾದವನ್ನು ಪ್ರಕಟಿಸುತ್ತಿದೆ. ಇದಕ್ಕೆ ಸಮ್ಮತಿಸಿದ ಕಲ್ಯಾಣರಾವ್‌ರಿಗೆ ಥ್ಯಾಂಕ್ಸ್.

ಅನುವಾದ ಮಾಡಿರುವ ಪೀಪಲ್ಸ್ ಡೆಮಾಕ್ರಾಟಿಕ್ ಫೋರಂನ ನಗರಗೆರೆ ರಮೇಶ್ ನಮ್ಮ ಪತ್ರಿಕೆ ಬಳಗದ ಆಪ್ತರೂ ಹೌದು.

ಈ ಕಾದಂಬರಿ ನಿಮಗೂ ಇಷ್ಟವಾಗುತ್ತದೆ ಎಂಬ ಭರವಸೆಯಿಂದ...

■ ಜಿ.ಎಲ್.



ಖರ್ಗೆಯ ಜನಾಂದೋಲನ ಮಣ್ಣಾಂಗಟ್ಟಿ?

"ಇದನ್ನು ಕಾಂಗ್ರೆಸ್ ದುರ್ಗತಿಯೆನ್ನಿ, ಕನ್ನಡಿಗರ ದುರಂತವನ್ನಿ. ಇನ್ನೇನು ಜೆಡಿಎಸ್-ಬಿಜೆಪಿ ಮರುಮೈತ್ರಿಯ ವಿರುದ್ಧ ಭಯಂಕರ ಜನಾಂದೋಲನವೇ ನಡೆದುಬಿಡುತ್ತದೆ ಎಂಬ ನಿರೀಕ್ಷೆಯಿತ್ತಲ್ಲವೆ? ನವೆಂಬರ್ ಐದರಂದು ಬೆಂಗಳೂರಿನ ಪ್ಯಾಲೇಸ್ ಮೈದಾನದಲ್ಲಿ ನಡೆದ ಕಾಂಗ್ರೆಸ್ ರ್‍ಯಾಲಿಯಲ್ಲಿ ಯಡ್ಡಿ-ಕುಮಾರ್ ಜಂಟಿ ಲೂಟಿಯ ವಿರುದ್ಧ ಕಾಂಗ್ರೆಸ್ ಬೀದಿ ಕಾಳಗಕ್ಕಿಳಿದುಬಿಡುತ್ತದೆ ಎಂದೇ ನಾಡಿನ ಪ್ರಜ್ಞಾವಂತರೆಲ್ಲ ಹಾಕಿದ ಲೆಕ್ಕ ಹೇಗೆ ತಲೆಕೆಳಗಾಯಿತು ನೋಡಿ-


ಅಷ್ಟಕ್ಕೂ ವಿರೋಧ ಪಕ್ಷವೊಂದರ ಅರ್ಥ ಮತ್ತು ಜವಾಬ್ದಾರಿ ಬೇರೆ ಯಾರಿಗಲ್ಲದಿದ್ದರೂ ಕಾಂಗ್ರೆಸ್‌ನ ಕರುಟಕ ದಮನಕರಾದ ಖರ್ಗೆ-ಧರ್ಮ್ರ್ ಜೋಡಿಗೆ ಚೆನ್ನಾಗಿ ಗೊತ್ತಿರಬೇಕಿತ್ತು, ಗೊತ್ತಿಲ್ಲವೆಂದರೆ ಕನಿಷ್ಠ 'ಲಂಕೇಶ್' ಪತ್ರಿಕೆ ವಿರೋಧ ಪಕ್ಷದ ಸ್ಥಾನದಲ್ಲಿ ನಿಂತು ಬಯಲಿಗೆಳೆದ ಜೆಡಿಎಸ್-ಬಿಜೆಪಿಯ ಅದೆಷ್ಟು ಕರ್ಮಕಾಂಡಗಳಿರಲಿಲ್ಲ?

ಮೊದಲಿಗೆ ದೇವೇಗೌಡರ ಮಕ್ಕಳಾದ ಬಾಲಕೃಷ್ಣೇಗೌಡ ಮತ್ತು ರಮೇಶ್ ಬಳ್ಳಾರಿಯ ಕಬ್ಬಿಣದ ಅದಿರು ಸ್ಮಗ್ಲಿಂಗ್ ದಂಧೆಗೆ ಕೈಹಾಕಿದ್ದನ್ನು ಪತ್ರಿಕೆ ಬಯಲಿಗೆಳೆಯಿತು. ಮುಖ್ಯಮಂತ್ರಿಯೊಬ್ಬನ ಅಣ್ಣತಮ್ಮಂದಿರೇ ನಾಡಿನ ಸಂಪತ್ತಿನ ಲೂಟಿಗೆ ನಿಂತಿದ್ದು, ಆ ಬಗ್ಗೆ ಅವರದೇ ಪಕ್ಷದ ಮತ್ತೊಬ್ಬ ನಾಯಕ ಡಿಕೆ ಪತ್ರಿಕಾಗೋಷ್ಠಿ ಕರೆದು ಗುಡುಗಿದಾಗಲೂ ಒಂದು ವಿರೋಧ ಪಕ್ಷವಾಗಿ ಕಾಂಗ್ರೆಸ್ ಈ ಬಗ್ಗೆ ಏಕೆ ಆ ಮಟ್ಟದ ಆಸಕ್ತಿ ವಹಿಸಲಿಲ್ಲ?

ಗಣಿ ದಂಧೆ ಹಾಳಾಗಲಿ, ಇಲ್ಲಿಗೆ ವಾರದ ಹಿಂದಷ್ಟೇ ಮಾಜಿ ಮಂತ್ರಿ ಚೆನ್ನಿಗಪ್ಪನ ಮಗ ಗೌರಿಶಂಕ್ರ ತನ್ನದೇ ಕ್ಷೇತ್ರದ ಮೂವರು ಅಮಾಯಕರನ್ನು ಎಳೆದೊಯ್ದು ತನ್ನದೇ ಮನೆಯಲ್ಲಿ ಕೂಡಿಟ್ಟು ಚಿತ್ರಹಿಂಸೆ ಕೊಟ್ಟು ಅವರ ಆಸ್ತಿ ಕಿತ್ತುಕೊಂಡ ಬಗ್ಗೆ ಪತ್ರಿಕೆಯೇ ಬರೆದಿತ್ತಲ್ಲವೆ? ಈ ಘಟನೆ ನಡೆದಾಗಲಿನ್ನೂ ಚೆನ್ನಿಗಪ್ಪ ಮಂತ್ರಿಯಾಗಿದ್ದರು ತಾನೆ? ಮಂತ್ರಿಯ ಮಗನೊಬ್ಬ ರೌಡಿಗಳ ಜೊತೆ ಸೇರಿ ಯಾರನ್ನೋ ಎಳೆದೊಯ್ದು ತನ್ನದೇ ಮನೆಯಲ್ಲಿ ಕೂಡಿಟ್ಟು ಚಿತ್ರಹಿಂಸೆ ಕೊಟ್ಟು ಅವರಿಂದ ಆಸ್ತಿ ಬರೆಸಿಕೊಳ್ಳುತ್ತಾನೆಂದರೆ ಈ ಬಗ್ಗೆ ನೆಲಮಂಗಲ ಪೊಲೀಸ್ ಠಾಣೆಯಲ್ಲಾಗಲಿ, ಪೀಣ್ಯ ಪೊಲೀಸ್ ಠಾಣೆಯಲ್ಲಾಗಲಿ ಮಂತ್ರಿ ಮಗನ ವಿರುದ್ಧ ಸಣ್ಣದೊಂದು ದೂರು ಕೂಡ ದಾಖಲಾಗುವುದಿಲ್ಲ ಎಂದರೆ, ಒಂದು ವಿರೋಧ ಪಕ್ಷವಾಗಿ ಕಾಂಗ್ರೆಸ್‌ಗಿದು ಮುಖ್ಯವಾಗುವುದಿಲ್ಲವೇ?

ಪಕ್ಕದ ತಮಿಳುನಾಡಿನಲ್ಲೋ ಕೇರಳದಲ್ಲೋ ಇಂಥಾದ್ದೊಂದು ಘಟನೆ ನಡೆದಿದ್ದರೆ ಬಹುಶಃ ಅಲ್ಲಿನ ವಿರೋಧ ಪಕ್ಷಗಳು ರಾಜ್ಯವ್ಯಾಪಿ ಮುಷ್ಕರ ನಡೆಸಿಬಿಡುತ್ತಿದ್ದವು. ಬಂದ್ ಕರೆಕೊಡುತ್ತಿದ್ದವು. ಆದರೆ ಪುಣ್ಯಾತ್ಮ ಖರ್ಗೆ ಜನಾಂದೋಲನಕ್ಕೆಂದು ಸಹಸ್ರಾರು ಕಾರ್ಯಕರ್ತರ ರ್‍ಯಾಲಿ ಕರೆದೂ ವೇದಿಕೆಯಲ್ಲಿ ಈ ಬಗ್ಗೆ ಚಕಾರವೆತ್ತಿಲ್ಲ!

ಬೇಡ; ಬೇರೆ ಯಾವುದೇ ಕಾಂಗ್ರೆಸ್ ನಾಯಕರಿಗೂ ಜೆಡಿಎಸ್ ಮಂತ್ರಿಯೊಬ್ಬನ ನಿರಂಕುಶ ಅಟ್ಟಹಾಸ ಮತ್ತು ಅಲ್ಲಿನ ಜನಸಾಮಾನ್ಯರ ದುರ್ಗತಿ ಏಕೆ ಮುಖ್ಯವಾಗಲಿಲ್ಲ?



ಸರಿ; ಕಾನೂನು ದುರವಸ್ಥೆ, ಪೊಲೀಸ್ ಪಕ್ಷಪಾತಕ್ಕಿಂತಲೂ ಕಾಂಗ್ರೆಸ್ಸಿಗೆ ಜೆಡಿಎಸ್-ಬಿಜೆಪಿ ಕೂಟದ ಭ್ರಷ್ಟಾಚಾರವೇ ಮುಖ್ಯ ಎಂದಿಟ್ಟುಕೊಂಡರೂ 'ಪತ್ರಿಕೆ' ಬಯಲಿಗೆಳೆದ ಡಜನ್ನುಗಟ್ಟಲೇ ಹಗರಣಗಳಿದ್ದವು. ಮೊದಲಿಗೆ ಉಪಮುಖ್ಯಮಂತ್ರಿ ಯಡಿಯೂರಪ್ಪನವರ ಶಿಕಾರಿಪುರಕ್ಕೆಂದು ಮಂಜೂರಾದ ನಾನೂರು ಕೋಟಿ ರೂಪಾಯಿಗಳ ಪ್ಯಾಕೇಜ್ ಅನ್ನು ಕಳಪೆ ಕಾಮಗಾರಿಗಳ ಮೂಲಕ ಹೇಗೆ ಯಡ್ಡಿ ಗ್ಯಾಂಗ್ ನುಂಗಿ ನೀರು ಕುಡಿಯಿತೆಂಬುದನ್ನು ಫೋಟೋ ಸಮೇತ ಪತ್ರಿಕೆ ಬಯಲಿಗೆಳೆಯಿತು. ಅದಕ್ಕೂ ಮುನ್ನ ಯಡ್ಡಿಯ ಮಗ ರಾಘವೇಂದ್ರನೇ ನಿಂತು ಕಳಪೆ ಕಾಮಗಾರಿಯನ್ನು ಪ್ರಶ್ನಿಸಿದ ಹೋರಾಟಗಾರ್ತಿ ವಿಜಯಲಕ್ಷ್ಮಿ ಕಂಚುಗಾರರ ಮೇಲೆ ನಡುರಸ್ತೆಯಲ್ಲಿ ನಡೆಸಿದ ಗೂಂಡಾಗಿರಿಯ ಬಗ್ಗೆ ಬರೆದಿತ್ತು.

ಒಬ್ಬ ಮಹಿಳಾ ಹೋರಾಟಗಾರ್ತಿಯನ್ನು ಉಪಮುಖ್ಯಮಂತ್ರಿಯ ಮಗನೇ ನಡುರಸ್ತೆಯಲ್ಲಿ ನಿಂತು ಹಲ್ಲೆ ನಡೆಸುತ್ತಾನೆಂದರೆ, ಉಪಮುಖ್ಯಮಂತ್ರಿಯೊಬ್ಬ ನಕಲಿ ಕಾಮಗಾರಿಯ ಮೂಲಕ ನಾನೂರು ಕೋಟಿ ದೋಚುತ್ತಾನೆಂದರೆ; ಅದರ ವಿರುದ್ಧ ಅಧಿಕೃತ ವಿರೋಧ ಪಕ್ಷವಾದ ಕಾಂಗ್ರೆಸ್ ಅಲ್ಲದೇ ಇನ್ನಾರು ಬೀದಿಗಿಳಿಯಬೇಕು?

ಒಂದು ಜವಾಬ್ದಾರಿಯುತ ವಿರೋಧ ಪಕ್ಷಕ್ಕೆ ಬೇಕಾದ ಎಲ್ಲಾ ದುರಾಡಳಿತ ಮತ್ತು ಕರ್ಮಕಾಂಡಗಳ ಸರಮಾಲೆಯನ್ನೇ ಪತ್ರಿಕೆ ಬಯಲಿಗೆಳೆದಿತ್ತು. ಈ ಪೈಕಿ ಅತೀ ದೊಡ್ಡ ಹಗರಣವೆಂದರೆ ಆರೋಗ್ಯ ಮಂತ್ರಿ ಅಶೋಕ್ ಮತ್ತಾತನ ಚೆಡ್ಡಿ ಗ್ಯಾಂಗ್ ನಡೆಸಿದ ಉತ್ತರಹಳ್ಳಿ ಬಗರ್‌ಹುಕುಂ ಭೂಕೊಳ್ಳೆ. ಬೆಂಗಳೂರಿನ ಬಿಜೆಪಿಯ ನೆಲಗಳ್ಳರೆಲ್ಲ ಸೇರಿಯೇ ಬೆಂಗಳೂರು ಸೆರಗಿನ ಸರಿಸುಮಾರು ನಾಲ್ಕೂವರೆ ಸಾವಿರ ಎಕರೆಗಳಷ್ಟು ಸರ್ಕಾರಿ ಭೂಮಿಯನ್ನು ದೋಚಿದ್ದು, ಅದನ್ನು ದಾಖಲೆಗಳ ಸಮೇತ ಪತ್ರಿಕೆ ಬಯಲಿಗೆಳೆದದ್ದು ಕಾಂಗ್ರೆಸ್‌ನಂಥ ವಿರೋಧ ಪಕ್ಷಕ್ಕೆ ಏನೇನೂ ಅಲ್ಲವೆ? ಹೆಗಡೆ ಮುಖ್ಯಮಂತ್ರಿಯಾಗಿದ್ದಾಗ ಯಕಶ್ಚಿತ್ ರೇವಜೀತು ಹಗರಣದ ವಿರುದ್ಧ ಇನ್ನಿಲ್ಲದಂತೆ ಬೀದಿಗಿಳಿದಿದ್ದ ಕಾಂಗ್ರೆಸ್ಸಿಗೆ ಅದರ ಸಾವಿರ ಪಟ್ಟು ಬೃಹತ್ತಾದ ಉತ್ತರಹಳ್ಳಿ ಭೂಕೊಳ್ಳೆ ಏಕೆ ಮುಖ್ಯವಾಗಲಿಲ್ಲ?

ಇದಕ್ಕಿಂತಲೂ ನಿರ್ಲಜ್ಜವಾದದ್ದು ಭಾರೀ ಕೈಗಾರಿಕಾ ಮಂತ್ರಿ ಕಟ್ಟಾ ನಕಲಿ ಐಟಿ ಕಂಪೆನಿ ಹುಟ್ಟುಹಾಕಿ ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ನಾನೂರ ನಲವತ್ತೆಂಟು ಎಕರೆ ಬಡದಲಿತರ ಭೂಮಿ ದೋಚಿದ್ದು! ಇದನ್ನು ಪತ್ರಿಕೆಯೇ ದಾಖಲೆ ಸಮೇತ ಬಯಲಿಗೆಳೆದಿತ್ತು. ಜೊತೆಗೇ ಮುಖ್ಯಮಂತ್ರಿಯ ಅಣ್ಣ ಬಾಲಕೃಷ್ಣೇಗೌಡ ಕೆಐಎಡಿಬಿಯನ್ನೇ ಆಯುಧವನ್ನಾಗಿ ಮಾಡಿಕೊಂಡು ಅದೇ ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದಲ್ಲಿ ಮತ್ತೆ 1209 ಎಕರೆ ದೋಚಿದ ಇನ್ನೊಂದು ಭೂದರೋಡೆಯನ್ನು ಪತ್ರಿಕೆ ಹೊರಗೆಡಹಿತ್ತು. ನಂದಗುಡಿಯಲ್ಲಿ ಸ್ಕಿಲ್ ಕಂಪೆನಿಗೆ ಹನ್ನೆರಡೂವರೆ ಸಾವಿರ ಎಕರೆ SEZ ಅಡಿಯಲ್ಲಿ ಕೊಟ್ಟದ್ದು ಸಾಲದೇ ಮತ್ತೆ ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದಲ್ಲಿ ಇನ್ನೂರೈವತ್ತು ಎಕರೆ ಇನ್ನೊಂದು SEZ ಗೆ ಬರೆದುಕೊಟ್ಟು ಹಗರಣವನ್ನು ಪತ್ರಿಕೆಯೇ ಬಯಲಿಗೆಳೆದಿದೆ.

ಇದ್ಯಾವುದನ್ನೂ ತನ್ನ ಜನಾಂದೋಲನದಲ್ಲಿ ಪ್ರಸ್ತಾಪಿಸದ ವಿರೋಧಿ ಕಾಂಗ್ರೆಸ್ ಇದಕ್ಕಿಂತಲೂ ಬೃಹತ್ತಾದ ದೊ... ವಾದ ಇನ್ನೆಂಥ ಕರ್ಮಕಾಂಡಗಳನ್ನು ಜನರ ಮುಂದಿಟ್ಟ... ಪತ್ರಿಕೆ ಬಯಲಿಗೆಳೆದ ಇಂಥ ಸ್ಕ್ಯಾಂಡಲ್ಲುಗಳು ಕಾಂಗ್... ಪಾಲಿಗೆ ಕ್ಷುಲ್ಲಕವಾಗಿದ್ದರೆ ಇದಕ್ಕಿಂತಲೂ ದೊ... ಸ್ಕ್ಯಾಂಡಲ್ಲುಗಳನ್ನಾದರೂ ಕಾಂಗ್ರೆಸ್ ಬಯಲಿಗೆಳೆಯಬೇಕಿ... ಬದಲಾಗಿ ಖರ್ಗೆ ತನ್ನ ಜನಾಂದೋಲನ ಭಾಷಣ... ಬಿಜೆಪಿಯದು ಗೋಡ್ಸೆ ಸಂತತಿ ಎನ್ನುತ್ತಾರೆ. ಗಾ... ಪ್ರತಿಮೆ ಅಪವಿತ್ರಗೊಂಡಿದೆ ಎನ್ನುತ್ತಾರೆ. ಮನುವಾದಿಗಳ... ರಾಜ್ಯಕ್ಕೆ ಆತಂಕವಿದೆ ಎನ್ನುತ್ತಾರೆ. ಬಿಜೆಪಿಯತ್ತ ಯು... ಜನತೆ ಆಕರ್ಷಿತರಾಗುತ್ತಿರುವುದಕ್ಕೆ ಪಶ್ಚಾತ್ತಾಪವ... ಪಡುತ್ತಾರೆ.

ಆದರೆ ಕೋಮುವಾದಿಗಳು ಎಂಥಾ ಭ್ರಷ್ಟರು? ... ಬೊಕ್ಕಸವನ್ನು ಲೂಟಿಗೈದಿದ್ದಾರೆ? ಒಬ್ಬೊಬ್ಬ ಮಂತ್ರಿ... ಸಿಕ್ಕ ಸಣ್ಣ ಅವಕಾಶದಲ್ಲಿ ಯಾವ ಮಟ್ಟದ ಭೂಕೊ... ನಡೆಸಿದ್ದಾನೆ? ಆ ಬಗ್ಗೆ ಸಿಬಿಐ ತನಿಖೆಯಾಗಬೇಕೆಂದಾ... ಅಥವಾ ತನಿಖಾ ಆಯೋಗವನ್ನು ರಚಿಸಬೇಕೆಂದಾ... ಬಾಯಿತಪ್ಪಿಯೂ ಹೇಳುವುದಿಲ್ಲ. ಬಿಜೆಪಿಯ ಮ... ಈಶ್ವರಪ್ಪ ತನ್ನ ಕ್ಷೇತ್ರಕ್ಕೆಂದು ಇನ್ನೂರು ಕೋಟಿಯ ಪ್ಯಾಕೇ... ಪಡೆದು ನಕಲಿ ಕಾಮಗಾರಿ ಮಾಡಿ ದೋಚಿದ... ಕುಮಾರಸ್ವಾಮಿ ತನ್ನ ಮುಖ್ಯಮಂತ್ರಿಗಿರಿಯ ಕೊ... ಗಳಿಗೆಯಲ್ಲಿ ನೂರಾರು ಎಕರೆ ಬಿಡಿಎ ಜಮೀನ... ಡೀನೋಟಿಫೈ ಮಾಡಿದ್ದು, ಮಂತ್ರಿ ಕಟ್ಟಾನ ಮಗ ಸಕಾ... ಭೂಮಿ ದೋಚಿದ ಕ್ರಿಮಿನಲ್ ಕೇಸಿಗೆ ಸಿಲುಕಿದ್ದು, ಸಾ... ಮಂತ್ರಿ ಚಲುವರಾಯಸ್ವಾಮಿ ಲೋಕಾಸೇವಾ ಆಯೋ... ಮಣ್ಣೆರಚಿ ನೂರಕ್ಕೂ ಹೆಚ್ಚು ಬ್ರೇಕ್ ಇನ್ಸ್‌ಪೆಕ್ಟರು... ಹುದ್ದೆ ಮಾರಿಕೊಂಡಿದ್ದು, ಅರಣ್ಯ ಮಂತ್ರಿ ಚೆನ್ನಿಗಪ್ಪ... ಗಣಿ ಲೂಟಿಗೆ ನಿಂತಿದ್ದು; ಹೀಗೆ ಕಣ್ಣೆದುರೇ ಇರು... ದೊಡ್ಡದೊಡ್ಡ ಹಗರಣಗಳನ್ನೆಲ್ಲ ಮರೆಮಾಚಿ ಅಪ... ಮೈತ್ರಿ ಎಂಬ ಅದೇ ಹಳೆಯ ಪ್ಲೇಟನ್ನೇ ಕಾಂಗ್ರೆಸ್ ... ಸರ್ಕಾರ ವಿರೋಧಿ ಜನಾಂದೋಲನದ 'ಏಕ... ವಿಷಯ'ವನ್ನಾಗಿ ಪ್ರಸ್ತಾಪಿಸುತ್ತಿದೆಯೆಂದರೆ ಜನ ಅದ... ನಂಬುತ್ತಾರಾ?

ಇಂಥ ಯಾವುದೇ ನಿರ್ದಿಷ್ಟ ಕರ್ಮಕಾಂಡವ... ಕೈಗೆತ್ತಿಕೊಂಡು ಅದರ ತನಿಖೆಗೆ ಒತ್ತಾಯಿ... ರಾಜ್ಯಪಾಲರಿಗೊಂದು ಕಾಟಾಚಾರದ ಮನವಿಯ... ಕೊಡದೇ 'ಅಪವಿತ್ರ ಮೈತ್ರಿ... ಅಪವಿತ್ರ ಮೈತ್ರಿ!' ಎಂ... ಬಾಯಿಬಡಕೊಂಡರೆ ಕಾಂಗ್ರೆಸ್ಸನ್ನು ಯಾರು ತಾ... ನಂಬುತ್ತಾರೆ?



ಶಿಕಾರಿಪುರದ ಕಳಪೆ ಕಾಮಗಾ...

ಬಳ್ಳಾರಿ : ರಾಜಕಾರಣಿಗಳ ದರ್ದಿಗೆ ಮೂವರು ಬಲಿ



ರಾಜಧಾನಿಯಲ್ಲಿ ಕೋ-ಜಾ ಸರ್ಕಾರ ಅಧಿಕಾರದ ಗದ್ದುಗೆಯೇರಲು ಕ್ಷಣಗಣನೆ ನಡೆಯುತ್ತಿರುವ ಸಂದರ್ಭದಲ್ಲಿ ಬಳ್ಳಾರಿಯಲ್ಲಿ ಮೂವರು ಜೆಡಿಎಸ್ ಕಾರ್ಯಕರ್ತರ ಕಗ್ಗೊಲೆ ನಡೆದಿದೆ. ಈ ಕಗ್ಗೊಲೆಯ ಆರೋಪದ ನೆರಳು ಬಿಜೆಪಿಯ ಮೇಲಿರುವುದರಿಂದ ಪ್ರಕರಣ ಯಾವ ತಿರುವು ಪಡೆಯಲಿದೆಯೆಂಬುದನ್ನು ಈಗಲೇ ಹೇಳಲಾಗದು. ಹಾಗೆ ನೋಡಿದರೆ ಬಿಜೆಪಿಗೆ ಬೆಂಬಲ ನೀಡುತ್ತಿರುವ ಜೆಡಿಎಸ್ ಗಿದು ಬಹುದೊಡ್ಡ ಮುಜುಗರ. ಅತ್ತ ಬಿಜೆಪಿಯ ಬಗ್ಗೆ ಖಾರವಾಗಿ ಪ್ರತಿಕ್ರಿಯಿಸುವಂತೆಯೂ ಇಲ್ಲ, ಇತ್ತ ಕಾರ್ಯಕರ್ತರ ಅಳಲನ್ನು ನಿರ್ಲಕ್ಷಿಸುವಂತೆಯೂ ಇಲ್ಲ. ಬಳ್ಳಾರಿಯ ಕಲ್ಲುಕುಟಗನಹಾಳ್‌ನಲ್ಲಿ ಲಿಂಗಾಯತ ಕೋಮಿನ ಮೂವರ ಜೀವಹರಣವಾಗಿದೆ. ಇಡೀ ಜಿಲ್ಲೆಯನ್ನೇ ತಲ್ಲಣಗೊಳಿಸಿರುವ ಈ ಪ್ರಕರಣ ಆಕಸ್ಮಿಕವಾಗಿ ನಡೆದದ್ದಲ್ಲ, ... ವಿದ್ವೇಷಕ್ಕೆ ಒಂದು ವರ್ಷದ ಸಂಕ್ಷಿಪ್ತ ಇತಿಹಾಸವಿದೆ.

ಒಂದು ವರ್ಷದ ಹಿಂದೆ ಅಂದರೆ ಸೆಪ್ಟೆಂಬರ್ 2006 ರಲ್ಲಿ ನೀರು ಹಾಯಿಸುವ ವಿಚಾರದಲ್ಲಿ ಭಿನ್ನಾಭಿಪ್ರಾಯ ಬಂದು ಅದು ವಾಲ್ಮೀಕಿ ಕೋಮಿನ ಯುವಕನೊಬ್ಬನ ಕೊಲೆಯಲ್ಲಿ ಪರ್ಯವಸಾನವಾಗಿತ್ತು. ಈ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಲಿಂಗಾಯತ ಕೋಮಿನ 28 ಜನರನ್ನು ಬಂಧಿಸಲಾಗಿತ್ತು. ಆಗ ಲಿಂಗಾಯತ ಕೋಮಿನವರ ಬೆಂಬಲಕ್ಕೆ ಶಾಸಕ ಸೂರ್ಯನಾರಾಯಣ ರೆಡ್ಡಿ ನಿಂತರೆ, ವಾಲ್ಮೀಕಿ ಸಮುದಾಯದ ಬೆಂಬಲಕ್ಕೆ ಶಾಸಕ ಶ್ರೀರಾಮುಲು ನಿಂತರು. ಆನಂತರ ಹಳ್ಳಿಯ ಎರಡು ಕುಟುಂಬಗಳ ನಡುವಿನ ಖಾಸಗಿ ಸಮಸ್ಯೆಗೆ ದಿಢೀರನೆ ರಾಜಕೀಯ ಸ್ವರೂಪ ಬಂದಿತ್ತು.

ಪ್ರಕರಣಕ್ಕೆ ರಾಜಕೀಯ ಸ್ವರೂಪ ಬಂದನಂತರ ಗ್ರಾಮದಲ್ಲೂ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಕಳೆದ ಮೂರು ತಿಂಗಳಲ್ಲಿ ಎರಡು ಬಾರಿ ಇಂತಹ ಸನ್ನಿವೇಶ ನಿರ್ಮಾಣವಾಗಿದೆ. ಈ ಬೆಳವಣಿಗೆಗಳೆಲ್ಲಾ ಪೊಲೀಸರಿಗೆ ಗೊತ್ತಿದ್ದರೂ ಗಂಭೀರವಾಗಿ ತೆಗೆದುಕೊಂಡಿಲ್ಲ ಅಥವಾ ಇಂಥದ್ದೊಂದು ಅಮಾನವೀಯ ಕಗ್ಗೊಲೆಗೆ ದಾರಿ ಮಾಡುತ್ತದೆಂಬುದನ್ನು ಪೊಲೀಸರು ಅಂದಾಜಿಸುವಲ್ಲಿ ವಿಫಲರಾಗಿದ್ದಾರೆ.

ಕಳೆದ ವರ್ಷ ಪ್ರಕರಣ ಜರುಗಿದ ಸಂದರ್ಭದಲ್ಲೇ ಇದನ್ನು ಇತ್ಯರ್ಥಪಡಿಸುವ ಪ್ರಯತ್ನ ಮಾಡಬಹುದಿತ್ತು, ಜಾತಿ ಜಗಳಗಳನ್ನೆ ಬಂಡವಾಳವಾಗಿ ಮಾಡಿಕೊಳ್ಳುವ ರಾಜಕೀಯ ನಾಯಕರಿಗೆ ಇದು ಮುಂದೊಂದು ದಿನ ಏನಾದರೂ ಒಳ್ಳೆಯ ಫಲಿತಾಂಶ ನೀಡಬಹುದೆಂಬ ಕುತ್ಸಿತ ರಾಜಕೀಯ ಲೆಕ್ಕಾಚಾರವಿತ್ತೋ ಅಥವಾ ಇದೆಲ್ಲಾ ಮಾಮೂಲಿ ಎಂದು ನಿರ್ಲಕ್ಷಿಸಿದರೋ ಅಂತೂ ಪ್ರಕರಣ ನೆನೆಗುದಿಯಲ್ಲಿತ್ತು.

ಕೇವಲ ಮೂರು ತಿಂಗಳ ಹಿಂದೆ ಕಾವು ಪಡೆದುಕೊಂಡ ಈ ಪ್ರಕರಣ ಮೂವರ ಬರ್ಬರ ಕೊಲೆಯಲ್ಲಿ ಪರ್ಯವಸಾನಗೊಂಡಿದೆ. ಕೊಲೆಗೀಡಾದವರ ಮೇಲೆ ನಡೆದಿರುವ ದಾಳಿಯ ಸ್ವರೂಪ ಭಯಾನಕವಾಗಿದೆ. ಮು... ಸೀಳುವಂತೆ ಕೊಚ್ಚಿರುವ, ಕೈಕಾಲುಗಳನ್ನು ಕತ್ತರಿಸಿರು... ಪರಿಯಂತೂ ಕೊಲೆಗಾರರಿಗೆ ಸಾಯಿಸುವ ಇಚ್ಛೆ... ಮೀರಿದ ಸೇಡಿನ ಕಾರಣಗಳಿದ್ದವೋ ಎಂಬ ಸಂಶಯವ... ಹುಟ್ಟುಹಾಕುವಂತಿದೆ.

ತಲಾ ಹತ್ತನ್ನೆರಡು ಜನರ ಗುಂಪು ಐದಾ... ಮನೆಗಳನ್ನು ಆಯ್ಕೆ ಮಾಡಿಕೊಂಡು ಸಂಘಟಿತವಾ... ಪೂರ್ವ ನಿಯೋಜಿತವಾಗಿ ದಾಳಿ ನಡೆಸಿದೆ. ಕೊಲೆ ಜರುಗಿ... ಮನೆಯ ಹಾಲ್‌ನ ಗೋಡೆಗಳು ಹಾಗೂ ನೆಲದ ಮೇ... ಹರಿದಿರುವ ರಕ್ತ ಘಟನೆಯ ಭೀಕರತೆಗೆ ನಿದರ್ಶನವಾಗಿ... ಈ ಕಗ್ಗೊಲೆಗಳಿಗೆ ಸಾಕ್ಷಿಯಾಗಿದ್ದ ಮೃತರ ಕುಟುಂಬದವ... ಚೇತರಿಸಿಕೊಳ್ಳಲು ವರ್ಷಗಳೇ ಬೇಕಾಗುತ್ತವೆ.

ಈ ಪ್ರಕರಣದಲ್ಲಿ ನಾಗರಾಜಗೌಡ, ಸಣ್ಣಮಲ್ಲನಗೌ... ರಾಮನಗೌಡ ಎಂಬುವವರು ಸ್ಥಳದಲ್ಲೇ ಕೊನೆಯುಸಿರೆ... ದ್ದಾರೆ. ಗಂಭೀರವಾಗಿ ಪೆಟ್ಟುಬಿದ್ದಿರುವ ಸಿದ್ಧರಾಮನಗೌ... ಬಳ್ಳಾರಿಯ ದಾನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾ... ಆಶ್ಚರ್ಯವೆಂದರೆ ಘಟನೆ ನಡೆದ ಕೇವಲ 15 ಗಂಟೆಯ... ಇಡೀ ಪ್ರಕರಣವನ್ನು ಸಿಓಡಿ ತನಿಖೆಗೆ ವಹಿಸಲಾಗಿ... ಅಂಥದ್ದೊಂದು ತನಿಖೆಯಾಗಬೇಕೆಂದು ಮೊದಲು ಹೇ... ಕೊಟ್ಟದ್ದು ಮಾಜಿ ಮೇಯರ್ ಸೋಮಶೇಖರ ರೆ... ಬಲಿಯಾಗಿರುವ ಮೂವರೂ ಸೂರ್ಯನಾರಾಯ... ರೆಡ್ಡಿಯ ಬೆಂಬಲಿಗರಾಗಿರುವುದರಿಂದ ಸೂರ್ಯನಾರಾಯ... ರೆಡ್ಡಿಗಿದು ಪ್ರತಿಷ್ಠೆಯ ಹಾಗೂ ಕಾರ್ಯಕರ್ತರಿಗೆ ನೀಡು... ರಕ್ಷಣೆಯ ಖಾತ್ರಿಯ ಪ್ರಶ್ನೆಯಾಗಿದೆ. ಇದು ತ...

ಹೋಗಲಿ ನಂದಗುಡಿ SEZ ವಿರುದ್ಧ ರೈತರ ಭೂಮಿ ಸ್ವಾಧೀನದ ವಿರುದ್ಧ ಕಾಂಗ್ರೆಸ್ಸೇ ಸತ್ಯಶೋಧಕ ಸಮಿತಿಯನ್ನು ರಚಿಸಿತಲ್ಲ; ರೈತರೇ ಬಂದು ಬಾಲಕೃಷ್ಣೇಗೌಡ ಮತ್ತು ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಸೇರಿ ಕೆಐಎಡಿಬಿಯ ಮೂಲಕ ನಡೆಸುತ್ತಿರುವ ರಿಯಲ್ ಎಸ್ಟೇಟ್ ದಂಧೆಯ ವಿರುದ್ಧ ಕಾಂಗ್ರೆಸ್ ಅಧ್ಯಕ್ಷ ಖರ್ಗೆಗೂ ಸತ್ಯಶೋಧಕ ಸಮಿತಿಯ ಕಾಗೋಡು ತಿಮ್ಮಪ್ಪಂಗೂ ಸಾಕ್ಷಾಧಾರ ಸಮೇತ ದೂರು ಕೊಟ್ಟರಲ್ಲ; ಕನಿಷ್ಠ ರೈತರು ಒದಗಿಸಿದ ದಾಖಲೆಗಳ ಸತ್ಯಾಸತ್ಯತೆಯನ್ನಾದರೂ ಕಾಂಗ್ರೆಸ್ಸಿಗೆ ಮನದಟ್ಟಾಗಲಿಲ್ಲವೆ?






ತಾನೇ ಸತ್ಯಶೋಧಕ ಸಮಿತಿ ರಚಿಸಿ, ಸತ್ಯದರ್ಶನವಾದ ಮೇಲೂ ಅದನ್ನು ಮರೆಮಾಚಿ ಇನ್ನೇನಕ್ಕೋ ಬೊಬ್ಬೆಯಿಡುವ ಕಾಂಗ್ರೆಸ್ ಯಾರ ಕಿವಿಗೆ ಹೂವಿಡುತ್ತಿದೆ? ಹೋಗಲಿ ತನ್ನ ಪರಮಾಪ್ತರಾದ ರೆಡ್ಡಿ ವೀರಣ್ಣ, ದಯಾನಂದ ಪೈ, ಕುಪೇಂದ್ರ ರೆಡ್ಡಿಯಂಥವರ ಭೂಕೊಳ್ಳೆಗೆ ಎಲ್ಲಿ ಅಡೆತಡೆಯಾಗುತ್ತೋ ಎಂಬ ಆತಂಕ ಖರ್ಗೆಗೆ ಇದ್ದಿದ್ದೇ ಆದಲ್ಲಿ, ಈ ಹಿಂದೆ ದೇಶಪಾಂಡೆಯೇ ಕೈಗಾರಿಕಾ ಮಂತ್ರಿಯಾಗಿದ್ದಾಗ ಐಟಿ ಕಾರಿಡಾರ್ ಹೆಸರಲ್ಲಿ ನಡೆಸಿದ ರಿಯಲ್ ಎಸ್ಟೇಟ್ ದಂಧೆ ಎಲ್ಲಿ ಬಯಲಾಗುತ್ತೋ ಎಂಬ ಅಳುಕಲ್ಲಿ ಖರ್ಗೆ-ಧರ್ಮಸಿಂಗ್‌ಗೆ ಧೈರ್ಯ ಸಾಲದೇ ಹೋದರೆ, ಕನಿಷ್ಠ ಸಿದ್ಧರಾಮಯ್ಯ, ಎಚ್.ಕೆ. ಪಾಟೀಲ್, ಉಗ್ರಪ್ಪರಂಥವರನ್ನಾದರೂ ಮುಂದೆಬಿಟ್ಟು ವಿರೋಧ ಪಕ್ಷದ ಕೆಲಸ ಮಾಡಿಸಬಹುದಿತ್ತು.

ಕಾಂಗ್ರೆಸ್ಸಿನ ಯಾರಿಗೂ ಮೈಬಗ್ಗದೇ ಹೋದರೂ ಪತ್ರಿಕೆಯೇ ಆ ಸ್ಥಾನದಲ್ಲಿ ನಿಂತು ಒಂದರಮೇಲೊಂದು ಕರ್ಮಕಾಂಡಗಳನ್ನು ಬಯಲಿಗೆಳೆದಿತ್ತು. ಹಾಗೊಮ್ಮೆ ಖರ್ಗೆ, ಧರ್ಮಾಧಿಗಳಾಗಿ ಕಾಂಗ್ರೆಸ್ಸಿನ ಯಾರಿಗೂ ಪತ್ರಿಕೆ ಬಯಲಿಗೆಳೆದ ಹಗರಣಗಳು ಗಮನಕ್ಕೇ ಬಂದಿಲ್ಲವಾದರೆ, ಈಗಲೂ ಕಾಲ ಮಿಂಚಿಲ್ಲ, ಶಿಕಾರಿಪುರದ ನಾನೂರು ಕೋಟಿ ಕಳಪೆ ಕಾಮಗಾರಿ ಹಗರಣದಿಂದ ಹಿಡಿದು ನಕಲಿ ಐಟಿ ಕಂಪೆನಿ ಹುಟ್ಟುಹಾಕಿದ ಕಟ್ಟಾ 448 ಎಕರೆ ದೋಚಿದ ಕರ್ಮಕಾಂಡದಂಥ ಒಂದು ಡಜನ್ ಪ್ರಕರಣಗಳನ್ನು ಸಾಕ್ಷಾಧಾರ ಸಮೇತ ಪತ್ರಿಕೆ ಒದಗಿಸುತ್ತದೆ.

ಜನಾಂದೋಲನಕ್ಕೆ ವಿರೋಧ ಪಕ್ಷವಾದ ಕಾಂಗ್ರೆಸ್‌ಗೆ ವಿಷಯವೇ ಇಲ್ಲದ ಪಕ್ಷದಲ್ಲಿ ಕನಿಷ್ಠ ಇದನ್ನಾದರೂ ಬಳಸಿಕೊಳ್ಳಲಿ. ಜನ ನಂಬುತ್ತಾರೆ. ಅದನ್ನು ಬಿಟ್ಟು ಬಂಡವಾಳವಿಲ್ಲದ ಜನಾಂದೋಲನಕ್ಕೆ ನಿಂತರೆ ಯಾರು ಬರುತ್ತಾರೆ?

■ ರಾ. ಸೋಮನಾಥ್

ಕಾಂಗ್ರೆಸ್ ಕಾರ್ಯಕರ್ತರ ಸರಣಿ ಕೊಲೆಯಾದಾಗಲೂ....



ಜೆಡಿಎಸ್-ಬಿಜೆಪಿ ಮಂತ್ರಿಗಳು ಎಸಗಿದ ಹಗರಣಗಳು ಒತ್ತಟ್ಟಿಗಿರಲಿ, ಕನಿಷ್ಠ ತನ್ನದೇ ಪಕ್ಷದ ಐದು ಮಂದಿ ಕಾರ್ಯಕರ್ತರನ್ನು ಸಾಲುಸಾಲಾಗಿ ನೆಲಮಂಗಲದ ಜೆಡಿಎಸ್ ಹಂತಕ ಚಿತ್ತನಗೆರೆ ಸೀನ ಕೊಂದು ಹಾಕಿದಾಗಲಾದರೂ ಕಾಂಗ್ರೆಸ್‌ಗೆ ಬುದ್ಧಿಬರಬೇಕಿತ್ತು.

ಮೊದಲು ನೆಲಮಂಗಲದ ಬಾಳೇಮಂಡಿ ಬಸವಯ್ಯನನ್ನು ಜೆಡಿಎಸ್ ಗ್ಯಾಂಗ್ ಮುಗಿಸಿತು. ಅದಕ್ಕೆ ಸಾಕ್ಷಿಗಳೆಂಬ ಒಂದೇ ಕಾರಣಕ್ಕೆ ವಕೀಲ ದೇವರಾಜು ಮತ್ತು ಪಂಚಾಯ್ತಿ ಮೆಂಬರ್ ಕೃಷ್ಣಮೂರ್ತಿಯನ್ನು ಅದೇ ಸೀನನ ಗ್ಯಾಂಗ್ ಜೋಡಿ ಕೊಲೆಯ ಮೂಲಕ ಕೊಂದು ಹಾಕಿತು. ಬೆನ್ನಲ್ಲೇ ತಾಲ್ಲೂಕು ಪಂಚಾಯ್ತಿ ಮೆಂಬರ್ ಮತ್ತು ಕುರುಬರ ಸಂಘದ ಅಧ್ಯಕ್ಷ ಗಂಗೊಂಡನಹಳ್ಳಿ ಕೃಷ್ಣಮೂರ್ತಿ ಬಲಿಯಾದ. ಇದಾಗಿ ಮೂರೇ ತಿಂಗಳಿಗೆ ಮತ್ತೊಬ್ಬ ಕುರುಬರ ನಾಯಕ ಪುಟ್ಟ ಸಂಪಯ್ಯನೂ ಜೆಡಿಎಸ್ ಹಂತಕ ಪಡೆಗೆ ಬಲಿಯಾದ.

ಈ ಎಲ್ಲಾ ಹತ್ಯೆಗಳಿಗೆ ಕಾರಣನಾದ ಜೆಡಿಎಸ್ ಹಂತಕ ಚಿತ್ತನಗೆರೆ ಸೀನನನ್ನು ಬಂಧಿಸದೇ ಓಡಾಡಲು ಬಿಟ್ಟದ್ದು ನೆಲಮಂಗಲ ಪೊಲೀಸರಾದರೆ, ಆತನ ಬೆನ್ನಿಗೆ ನಿಂತು ಕುಮ್ಮಕ್ಕು ಕೊಟ್ಟವನು ಮಂತ್ರಿ ಚೆನ್ನಿಗಪ್ಪನ ಮಗ ಗೌರಿಶಂಕ್ರ. ಕೊಲೆಯಾದವರೆಲ್ಲ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಜಾತಿಯಲ್ಲಿ ಕುರುಬರು. ಈ ಬಗ್ಗೆ ನೆಲಮಂಗಲದ ಕಾಂಗ್ರೆಸ್ ಕಾರ್ಯಕರ್ತರು ಖರ್ಗೆ-ಧರಂಸಿಂಗ್ ಆದಿಯಾಗಿ ಕಂಡಕಂಡ ಕಾಂಗ್ರೆಸ್ ನಾಯಕರನ್ನು ಕಂಡು ಕಣ್ಣೀರಿಟ್ಟರು. ಒಂದಲ್ಲಾ ಮೂರು ವಿಧಾನಮಂಡಲದ ಅಧಿವೇಶನಗಳಿದ್ದವು. ಹಂತಕರ ಬೆನ್ನಿಗೆ ಸರ್ಕಾರವೇ ನಿಂತಿದ್ದಕ್ಕೆ ಬೇಕಾಬಿಟ್ಟಿ ಸಾಕ್ಷಾಧಾರಗಳಿದ್ದವು. ಆಡಳಿತಾರೂಢ ಪಕ್ಷದ ಕೈಗೇ ರಕ್ತ ಮೆತ್ತಿಕೊಂಡಿತ್ತಾದರೂ ವಿರೋಧಿ ಕಾಂಗ್ರೆಸ್ ಈ ಬಗ್ಗೆ ಸೊಲ್ಲೆತ್ತಲೇ ಇಲ್ಲ. ಸಿಬಿಐ ತನಿಖೆಯಾಗಿದ್ದರೆ ಮಂತ್ರಿ ಚೆನ್ನಿಗಪ್ಪನೇ ಜೈಲಿಗೆ ಹೋಗಬೇಕಾಗುತ್ತಿತ್ತೋ ಏನೋ.



ರಾಜ್ಯದ ಅಧಿಕೃತ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್‌ಗೆ ವಿಧಾನ ಮಂಡಲದ ಅಧಿವೇಶನಕ್ಕಿಂತ ಬೇಕೆ? ವಿಧಾನಸಭೆಯಲ್ಲಿ ನಿದ್ದೆ ನಟಿಸಿ ಈಗ ರೈಲು ಹೋದ ಮೇಲೆ ಬಾಯಿ ಬಡಿದುಕೊಂಡೇನು ಪ್ರಯೋಜನ?

ಕಾಂಗ್ರೆಸ್ ಆತ್ಮವಂಚನೆಗೆ ಇದಕ್ಕಿಂತ ಸಾಕ್ಷಿ ಬೇಕೆ?

ರಾಜಕೀಯ ವಿರೋಧಿಗಳ ಕೈವಾಡ ಹಾಗೂ ರಾಜಕೀಯ ಪ್ರೇರಿತ ಎಂಬುದು ಸೂರ್ಯನಾರಾಯಣರೆಡ್ಡಿ ಆರೋಪ.

ಪ್ರಕರಣ ನಡೆದ ಹದಿನೈದೇ ತಾಸಿನಲ್ಲಿ ಸಿಒಡಿ ತನಿಖೆಗೆ ವಹಿಸಿರುವುದು ಸೂರ್ಯನಾರಾಯಣ ರೆಡ್ಡಿ ಸಂಶಯಕ್ಕೆ ಕಾರಣವಾಗಿದೆ. ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಹಿಂದೆಯೂ ನಡೆದಿದ್ದವು. ಆಗ ಎಷ್ಟೇ ಒತ್ತಡ ಬಂದರೂ ಸಿಒಡಿ ತನಿಖೆಗೆ ವಹಿಸಲಾಗಿರಲಿಲ್ಲ. ಈ ಪ್ರಕರಣದಲ್ಲಿ ಬಾಧಿತರೂ ಅಂಥದ್ದೊಂದು ಬೇಡಿಕೆ ಇಟ್ಟಿಲ್ಲ. ಆದರೂ ಸಿಒಡಿಗೆ ವಹಿಸಲಾಗಿದೆಯೆಂದರೇನರ್ಥ ಎಂಬುದು ಸೂರ್ಯನಾರಾಯಣರೆಡ್ಡಿ ಪ್ರಶ್ನೆ.

ಬಳ್ಳಾರಿಗೆ ಆಗಮಿಸಿದ್ದ ಜೆಡಿಎಸ್ ರಾಜ್ಯಾಧ್ಯಕ್ಷ ಮೆರಾಜುದ್ದೀನ್ ಪಟೇಲ್ ಪತ್ರಿಕಾಗೋಷ್ಠಿಯನ್ನು ನಡೆಸಿ 'ಪಕ್ಷದ ಕಾರ್ಯಕರ್ತರು ನಮ್ಮ ಮಕ್ಕಳಿದ್ದ ಹಾಗೆ. ಅವರಿಗೆ ತೊಂದರೆಯಾದರೆ ಸುಮ್ಮನೆ ಕೂರಲಾಗುತ್ತದೆಯೇ. ಹಾಗಾಗಿ ಅವರ ಕುಟುಂಬಗಳಿಗೆ ಸಾಂತ್ವನ ಹೇಳಲು ಬಂದೆ, ಎಂದರು. ಆದರೆ ಅವರ ಮುಖದಲ್ಲಿ ಮಕ್ಕಳನ್ನು ಕಳೆದುಕೊಂಡ ತಂದೆಯ ಸಂಕಟದ ಭಾವನೆಗಳೇನೂ ವ್ಯಕ್ತವಾಗುತ್ತಿರಲಿಲ್ಲ. ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚಿಸಿ ಇದಕ್ಕೆ ಕಾರಣಕರ್ತರಾದವರನ್ನು ಬಯಲಿಗೆಳೆಯುತ್ತೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲೇ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಘಟನೆ ದೋಸ್ತಿ ಸರ್ಕಾರದ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. 19 ತಿಂಗಳು ಯಶಸ್ವಿಯಾಗಿ ಸರ್ಕಾರ ಆಡಳಿತ ನಡೆಸುತ್ತ್ಯ ಡಿಸಿಎಂ ಪದವಿ ಗೌಡರೇ ಬಗೆಹರಿಸುತ್ತಾರೆ. ತಾವು ಡಿಸಿಎಂ ಆಕಾಂಕ್ಷಿಯಲ್ಲ. ಪಕ್ಷ ಜವಾಬ್ದಾರಿ ವಹಿಸಿದರೆ ನಿರ್ವಹಿಸುತ್ತೇನೆ ಅಂತ ಮಾತು ಮುಗಿಸಿದರು.

ಇಷ್ಟೆಲ್ಲಾ ಸುಸೂತ್ರವಾಗಿ ನಡೆಯುವುದಾದರೆ ಕೊಲೆಗೀಡಾದವರಿಗೆ ನ್ಯಾಯ ಸಿಗುತ್ತದೆಂದು ಊಹಿಸುವುದಾದರೂ ಹೇಗೆ? ಬಾಧಿತರಿಗೆ ಭವಿಷ್ಯದ ಭರವಸೆ ಕೊಡುವವರು ಯಾರು?

ರಾಜಕೀಯದ ಕೆಸರೆರಚಾಟದ ಆಚೆಗಿನ ಬೆಳವಣಿಗೆಗಳು ಆತಂಕ ಮೂಡಿಸಿವೆ. ಪ್ರಕರಣ ಖಂಡಿಸಿ ಲಿಂಗಾಯತ ಸಂಘಟನೆಗಳು ಬಳ್ಳಾರಿ ಬಂದ್ ಆಚರಿಸಲು ತೀರ್ಮಾನಿಸಿವೆ ಎಂಬ ಮಾತುಗಳು ಕೇಳಿಬರುತ್ತಿವೆ. ಇದರ ಪರಿಣಾಮ ಪ್ರಕರಣ ಇನ್ನೂ ಯಾವ್ಯಾವ ತಿರುವು ಪಡೆದುಕೊಳ್ಳಲು ಕಾರಣವಾಗುತ್ತದೆಯೋ?

ಬಳ್ಳಾರಿಯಲ್ಲಿ ಪ್ರಬಲವಾಗಿರುವ ನಾಯಕ ಸಮುದಾಯದ ಯುವಕರನ್ನು ಇಂತಹ ರಾಜಕೀಯ ತೆವಲುಗಳಿಗೆ ದಾಳಗಳನ್ನಾಗಿ ಬಳಸಿಕೊಳ್ಳುವ ಕೆಲಸ ಎಲ್ಲಾ ರಾಜಕೀಯ ಪಕ್ಷದ ಮುಖಂಡರೂ ಮಾಡುತ್ತಿದ್ದಾರೆ. ಅದರಲ್ಲೂ ಶ್ರೀರಾಮುಲು ಮಂತ್ರಿಯಾಗಿದ್ದು ಹಾಗೂ ಆತನಿಗೆ ಪ್ರಾಪ್ತವಾಗಿರುವ ಇಮೇಜು ಈ ಸಮುದಾಯದ ಯುವಕರಲ್ಲಿ ಪೊಳ್ಳು ಅಹಮ್ಮಿನ ಬೆಳವಣಿಗೆಗೆ ಕಾರಣವಾಗಿದೆ. ಇದು ಅಪಾಯಕಾರಿ ಬೆಳವಣಿಗೆ.

ನೀರಿನಂತೆ ಹರಿದು ಬರುವ ಗಣಿ ದಂಧೆಯ ಬಿಟ್ಟಿ ಹಣವನ್ನು ಸಂಚಯಿಸಿಕೊಳ್ಳುವ ರಾಜಕಾರಣಿಗಳಿಗೆ ಎಂತೆಂಥದೋ ದರ್ದುಗಳಿರುತ್ತವೆ. ಕೂಡಿ ಸಹಬಾಳ್ವೆ ನಡೆಸಬೇಕಾದ ರೈತಾಪಿ ಜನ ಇಂತಹವರ ದರ್ದು-ದವಲತ್ತುಗಳಿಗೆ ದಾಳಗಳಾಗಬಾರದು. ಇಲ್ಲವಾದಲ್ಲಿ ಇದೀ ಬಳ್ಳಾರಿಯ ಹಳ್ಳಿಹಳ್ಳಿಯಲ್ಲೂ ಕಲ್ಲುಕುಟಿಗನಹಾಳ್‌ನ ಪ್ರತಿಧ್ವನಿ ಕೇಳಬೇಕಾಗುತ್ತದೆ. ಹಾಗಾಗದಂತೆ ನೋಡಿಕೊಳ್ಳುವುದು ಬಳ್ಳಾರಿ ಜಿಲ್ಲೆಯ ಪ್ರಜ್ಞಾವಂತರ ಕೆಲಸವಾಗಬೇಕು.


■ ಅಹೋಬಳ

ಕೆಪಿಸಿಸಿ ಪುನರಚನೆ

ಸತ್ತಂತಿಹರನು ಬಡಿದೆಚ್ಚರಿಸುವ ಕಷ್ಟದ ಕೆಲಸ


ಯಾರು ಏನೇ ಡಿಂಡಿಮ ಬಾರಿಸಿದರೂ ಹಾಲಿ ಸತ್ತಂತಿರುವ ಕರ್ನಾಟಕ ಕಾಂಗ್ರೆಸ್ ಅನ್ನು ಬಡಿದೆಚ್ಚರಿಸುವುದು ಅತೀ ಕಷ್ಟದ ಕೆಲಸ. ಹಾಗೊಮ್ಮೆ ಎಚ್ಚರಿಸಿದರೂ ಅಧಿಕೃತ ವಿರೋಧಿ ನಾಯಕರೂ, ಅನಧಿಕೃತವಾಗಿ ದೇವೇಗೌಡರ ಏಜಂಟರಂತಾಗಿ ಹೋಗಿರುವ ಧರಂಸಿಂಗ್‌ರಿಂದಂತೂ ಕಾಂಗ್ರೆಸ್ ಉದ್ಧಾರವಾಗುವುದಿಲ್ಲ.

ಇದು ಸದ್ಯದ ವಾಸ್ತವ.




ಈ ಮಾತು ಬರೀ ಧರಂಸಿಂಗರಿಗಷ್ಟೇ ಅಲ್ಲ, ಕೆಪಿಸಿಸಿ ಅಧ್ಯಕ್ಷ ಖರ್ಗೆ, ಮೇಲ್ಮನೆ ವಿರೋಧಿ ನಾಯಕ ಎಚ್.ಕೆ. ಪಾಟೀಲರಿಗೂ ಅನ್ವಯವಾಗುತ್ತದೆ.

ಯಡ್ಡಿ ನೇತೃತ್ವದ ಹೊಸ ಕೋ-ಜಾ ಸರ್ಕಾರ ಅಸ್ತಿತ್ವಕ್ಕೆ ಬರುತ್ತಿರುವಾಗಲೇ ರಾಜ್ಯ ಕೆಪಿಸಿಸಿ ಪುನರ್ರಚನೆಯ ಮಾತು ಕೇಳಿಬರುತ್ತಿದೆ. ಬಹುಮಟ್ಟಿಗೆ ಸಿದ್ಧರಾಮಯ್ಯ ವಿರೋಧಿ ನಾಯಕರಾಗಿ ನೇಮಕವಾಗಬಹುದು. ಉಳಿದಂತೆ ಡಿಕೆಶಿ, ಜಿ. ಪರಮೇಶ್ವರ್, ಅಂಬರೀಷ್‌ಗೆ ಪ್ರಮುಖ ಜವಾಬ್ದಾರಿ ಸಿಗಬಹುದು. ಇವೆಲ್ಲಾ ಒಂದಲ್ಲಾ ಒಂದು ರೀತಿ ಕೆಲಸ ಮಾಡಲಿವೆ. ಆದರೆ ಅಸಲಿ ಸಮಸ್ಯೆ ಇರುವುದು ಕೆಪಿಸಿಸಿ ಅಧ್ಯಕ್ಷ ಯಾರೆಂಬ ವಿಚಾರದಲ್ಲಿ.



ಹಾಲಿ ಅಧ್ಯಕ್ಷ ಖರ್ಗೆ ದಶಕಗಳ ಕಾಲದಿಂದಲೂ ಬರೀ ಖರ್ಜೂರ, ಬಾದಾಮಿ ಡ್ರೈಫ್ರೂಟ್ಸ್ ಅನ್ನೇ ತಿಂದುಕೊಂಡು ಬಂದಿದ್ದರೂ ಅವರ ಮೊಣಕಾಲು ಈಗ ಕೈಕೊಡುತ್ತಿದೆ. ನಾಲ್ಕು ಹೆಜ್ಜೆ ಎತ್ತಿಡಲೂ ಆಗದಷ್ಟು ಸುಸ್ತಾಗಿದ್ದಾರೆ ಖರ್ಗೆ ಸಾಹೇಬರು. ಹಾಗಂತ ಈಗಿನ ಅನಾರೋಗ್ಯಕ್ಕೂ ಮುನ್ನ ಖರ್ಗೆ ಬಹಳ ಚುರುಕಾಗಿ ಓಡಾಡುತ್ತಿದ್ದರೆಂದಲ್ಲ. ದಲಿತ ಹಿನ್ನೆಲೆಯಿಂದ ಬಂದು ಈಗ ಕೋಟ್ಯಾಧೀಶರಾಗಿರುವ ಖರ್ಗೆಗೆ ರಾಜಕೀಯ ಹೋರಾಟದ ಎಬಿಸಿಡಿಯೂ ಗೊತ್ತಿಲ್ಲ. ಅವರ ಮಾತು, ಕಾರ್ಯಶೈಲಿ, ಸರ್ಕಾರಿ ಗುಮಾಸ್ತರ ರೀತಿ, ಒಂಥರಾ ಜಡ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಇವತ್ತು ಕರ್ನಾಟಕದಲ್ಲಿ ಸತ್ತುಹೋಗಿರುವ ಕಾಂಗ್ರೆಸ್ ಹೆಣವನ್ನು ಹೊತ್ತೊಯ್ದು ಬಸಾಡಿ ಬರುವಷ್ಟು ಶಕ್ತಿ ಖರ್ಗೆಗಿಲ್ಲ. ಅಷ್ಟೇ ಅಲ್ಲ, ಅತ್ತು ಗೋಳಾಡಿ ರಂಪ ಮಾಡುವ ಚಾತಿಯೂ ಇಲ್ಲ. ದೇವೇಗೌಡರ ರಾಕ್ಷಸ ರಾಜಕೀಯ, ಬಿಜೆಪಿಗಳ ಕಳ್ಳಮಳ್ಳಗಳೆದುರು ಖರ್ಗೆ ಸವಾಲೇ ಅಲ್ಲ.



ಖರ್ಗೆಯ ದೌರ್ಬಲ್ಯಗಳೆಲ್ಲಾ ತಿಳಿದಿರುವ ಕಾಂಗ್ರೆಸ್ ಹೈಕಮಾಂಡ್ ಇನ್ನೊಂದು ಅತಿರೇಕದ ತೀರ್ಮಾನಕ್ಕೂ ತಲುಪುವ ಸಾಧ್ಯತೆ ಕಾಣುತ್ತಿದೆ.

ಅದು ಎಸ್.ಎಂ. ಕೃಷ್ಣನನ್ನು ಮತ್ತೆ ಕೆಪಿಸಿಸಿ ಅಧ್ಯಕ್ಷಗಿರಿಗೆ ತಂದು ಪ್ರತಿಷ್ಠಾಪಿಸುವುದು!

ಈ ಕಡು ಭ್ರಷ್ಟ, ಜನವಿರೋಧಿ ನಾಯಕನನ್ನು ಜನ ಈಗಾಗಲೇ ತಿರಸ್ಕರಿಸಿ ಆಗಿದೆ. ಆದರೂ ಕೃಷ್ಣ ಮತ್ತೆ ವಕ್ಕರಿಸಿಕೊಂಡರೆ ಕಾಂಗ್ರೆಸ್‌ಗೆ ಬಹುಶಃ ಭವಿಷ್ಯವಿರಲಾರದು.

ಈಗ ಸೋನಿಯಾ ಆಪ್ತ ವಲಯದಲ್ಲಿರುವ ಕರಾವಳಿಯ ಕಾಂಗ್ರೆಸಿಗರಾದ ಆಸ್ಕರ್, ಮಾರ್ಗರೇಟ್ ಆಳ್ವ, ಪೂಜಾರಿಗಳಿಂದ ರಾಜ್ಯ ಕಾಂಗ್ರೆಸ್ ಈಗಾಗಲೇ ಹಾಳಾಗಿದೆ. ಹೇಗೂ ದೇಶದ ಒಂದಲ್ಲಾ ಒಂದು ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇದ್ದೇ ಇರುತ್ತಾದ್ದರಿಂದ ಅಲ್ಲೆಲ್ಲೋ ಒಂದು ಕಡೆ ಉಸ್ತುವಾರಿ ನೋಡಿಕೊಂಡು ತಣ್ಣಗೆ ಡೀಲು ಕುದುರಿಸಿಕೊಂಡು ಜೀವನ ಸವೆಸುತ್ತಿರುವ ಈ ನಾಯಕರುಗಳು ಕರ್ನಾಟಕ ರಾಜಕೀಯಕ್ಕೆ ಸಂಬಂಧಿಸಿದಂತೆ ಒಂದೇ ಒಂದು ರಚನಾತ್ಮಕ ಕೆಲಸ ಮಾಡಿಲ್ಲ.

ಕುಮಾರಸ್ವಾಮಿ ಸಿಎಂ ಆಗಿದ್ದ 20 ತಿಂಗಳ ಅವಧಿಯಲ್ಲಿ ಕೇವಲ 'ಲಂಕೇಶ್' ವಾರಪತ್ರಿಕೆಯೊಂದೇ ಕನಿಷ್ಠ 25 ಬಾರಿ ಭೂಹಗರಣಗಳನ್ನು ದಾಖಲೆ ಸಹಿತ ಪ್ರಕಟಿಸಿದ್ದರೂ ಕಾಂಗ್ರೆಸ್ ನಾಯಕರು ಅವನ್ನು ಸದನದಲ್ಲಿ ಪ್ರಶ್ನಿಸಲಿಲ್ಲ!

ಯಾಕೆ ಅಂತ ಯಾವನೂ ಧರಂಸಿಂಗ್‌ರನ್ನು ಪ್ರಶ್ನಿಸಲೂ ಇಲ್ಲ.

ಏನಿದರ ಅರ್ಥ?

ವಿರೋಧ ಪಕ್ಷ ಅಂದರೇನೆ ಆಳುವ ಪಕ್ಷದ ಲೋಪದೋಷ, ಭ್ರಷ್ಟಾಚಾರ, ಜನವಿರೋಧಿ ನೀತಿಗಳ ವಿರುದ್ಧ ಧನಿ ಎತ್ತುವುದು ತಾನೆ? ಹಾಗೆಂದ ಮೇಲೆ ಧರಂಸಿಂಗ್ ಒಮ್ಮೆಯೂ ಆ ಕೆಲಸ ಮಾಡಲಿಲ್ಲ ಯಾಕೆ?

ದೇವೇಗೌಡರೊಂದಿಗೆ ರಹಸ್ಯ ಒಪ್ಪಂದವಿತ್ತು ಅಂತಲಾ?

ತಿರುಪತಿ ತಿಮ್ಮಪ್ಪನ ಹುಂಡಿಗೆ ಬೀಳುವ ಹಣಕ್ಕಿಂತಲೂ ಜಾಸ್ತಿ ಹಣ ಗೌಡರ ತಿಜೋರಿಗೆ ಸೇರುತ್ತಿದ್ದಾಗಲೂ ರಾಜ್ಯ ಕಾಂಗ್ರೆಸ್ ಅದನ್ನು ಪ್ರತಿಭಟಿಸಲಿಲ್ಲ.

ಬಿಜೆಪಿಗಳ ಕೋಮುವಾದಿ ದುಷ್ಟ ಕೆಲಸ ಅವಿರತವಾಗಿ ಸಾಗಿದ್ದರೂ ಕಾಂಗ್ರೆಸ್ ಅದಕ್ಕೆ ತಡೆಯೊಡ್ಡಲಿಲ್ಲ. ಜನಪರವಾದ ಒಂದೇ ಒಂದು ಕೆಲಸದಲ್ಲೂ ಈ ಖರ್ಗೆ-ಧರಂಸಿಂಗ್ ಜೋಡಿ ಪಾಲ್ಗೊಳ್ಳಲಿಲ್ಲ.

ನೆರೆ ಬಂದು 10 ಲಕ್ಷ ಜನ ಸಂತ್ರಸ್ತರಾದಾಗಲೂ ಪರಿಹಾರಕ್ಕಾಗಿ ಸರ್ಕಾರದ ಮೇಲೆ ಒತ್ತಡ ತರಲಿಲ್ಲ....

ಇವೆಲ್ಲಾ ವಿರೋಧ ಪಕ್ಷವಾಗಿ ಕಾಂಗ್ರೆಸ್‌ನವರ ವೈಫಲ್ಯಗಳಾಗಿವೆ.

ರಾಜ್ಯ ಕಾಂಗ್ರೆಸ್ ಸತ್ತಂತಾಗಿರಲು ಇವೆಲ್ಲ ಕಾರಣಗಳಿವೆ.



ಸಿದ್ಧರಾಮಯ್ಯನಂತಹ ಧೈರ್ಯಶಾಲಿ, ಮಾತುಗಾರ ಹಾಗೂ ಸಮರ್ಥ ನಾಯಕರನ್ನು ಹೇಗೆ project ಮಾಡಬೇಕೆಂದು, ಬಳಸಿಕೊಳ್ಳಬೇಕೆಂಬುದೇ ಇದುವರೆಗೂ ಕಾಂಗ್ರೆಸ್ ಹೈಕಮಾಂಡ್ ಯೋಚಿಸಿರಲಿಲ್ಲ. ಬಹುಶಃ ಈಗಲಾದರೂ ಪರಿಸ್ಥಿತಿ ಬದಲಾಗಬಹುದು.


ಸ್ವಂತ ಬಲದಿಂದ ಸ್ನಾನ, ಶೌಚ ಮುಗಿಸಿ ಬಟ್ಟೆ ಬದಲಾಯಿಸಿಕೊಳ್ಳಲೂ ಆಗದ ಸ್ಥಿತಿ ತಲುಪಿರುವ ಧರಂಸಿಂಗ್‌ಗೆ ಜಾತಿ ಬೆಂಬಲವೂ ಇಲ್ಲ, ವಿರೋಧಿ ನಾಯಕನಾಗಿರಬೇಕಾದ ಹೋರಾಟ ಮನೋಭಾವವೂ ಇಲ್ಲ. ಸೋನಿಯಾ ಆ ಜಾಗಕ್ಕೆ ಸಿದ್ಧರಾಮಯ್ಯನವರನ್ನು ತಂದರೆ ಕಾಂಗ್ರೆಸಿಗರಿಗೆ ಒಂದಿಷ್ಟು ಚಾಲನೆ ಸಿಗಬಹುದೇನೋ?

ಕಾದು ನೋಡಬೇಕಷ್ಟೇ. ■

ಸಂಬಳ ಕೊಡಿ ಇಲ್ಲವೆ ವಿಷ ಕೊಡಿ:

ವರದಾ ಷುಗರ್ಸ್ ಕಾರ್ಮಿಕರ ಅಳಲು

ಪರ್ಸೆಂಟೇಜ್ ಮುಕ್ಕುವುದರಲ್ಲಿ ಪಿಎಚ್‌ಡಿ ಮಾಡಲು ಹೊರಟಿರುವ ಮುದಿ ಮಂತ್ರಿ ಸಿ.ಎಂ. ಉದಾಸಿ ಮತ್ತವನ ನಾಲ್ವರು ಪಟಾಲಂ ಶಾಸಕರ ಕೈಯಲ್ಲಿ ಸಿಕ್ಕಿರುವ ಹಾವೇರಿ ಜಿಲ್ಲೆಯ ಪರಿಸ್ಥಿತಿ ಹೇಳೋ ಅರಸಿಲ್ಲ, ಕೇಳೋ ಪ್ರಧಾನಿ ಇಲ್ಲ ಎಂಬಂತಾಗಿಬಿಟ್ಟಿದೆ. ಅಖಂಡ ಧಾರವಾಡ ಜಿಲ್ಲೆಯ ಏಕೈಕ ಸಕ್ಕರೆ ಕಾರ್ಖಾನೆಯಾದ 'ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ, ಸಂಗೂರು (ವರದಾ ಷುಗರ್ಸ್)ನಲ್ಲಿ ಲಕ್ಷಾಂತರ ರೂಪಾಯಿಗಳನ್ನು ಕೊಳ್ಳೆಹೊಡೆದು, ಕಾರ್ಖಾನೆಯನ್ನು ದಿವಾಳಿಯೆಬ್ಬಿಸಿ, ಅದಕ್ಕೆ ಬೀಗ ಜಡಿದು, ಅತ್ತ ಕಬ್ಬನ್ನು ಖರೀದಿಸದೇ ರೈತರ ಕುಟುಂಬಗಳನ್ನು, ಇತ್ತ ಸಂಬಳ ನೀಡದೇ ಕಾರ್ಮಿಕರ ಕುಟುಂಬಗಳನ್ನು ಬೀದಿಗೆ ತಂದು ಅಪಾರ ಕೀರ್ತಿಯನ್ನು ಸಂಪಾದಿಸಿರುವ ಈ ಪಟಾಲಂಗೆ ಯಾವ ಪ್ರಶಸ್ತಿ-ಪುರಸ್ಕಾರಗಳನ್ನು ಕೊಟ್ಟರೂ ಕಡಿಮೆಯೆ ಬಿಡಿ.




ಉದಾಸಿ

ಜಿಲ್ಲೆಗೆ ಭೇಟಿ ನೀಡಿದ್ದ ಯಡ್ಡಿ ಸಿ.ಎಂ. ಉದಾಸಿಯ ಪಕ್ಕದಲ್ಲಿ ಕುಳಿತು ತಾನು ರೈತನ ಮಗ, ಮಣ್ಣಿನ ಮಗ, ಕಬ್ಬು ಬೆಳೆಗಾರರ ಹಿತ ಕಾಯುವವ ಎಂದೆಲ್ಲಾ ಬೊಗಳೆ ಬಿಟ್ಟು ಅಮಾಯಕ ರೈತರಿಗೆ ರೈಲು ಹತ್ತಿಸಿದನೇ ಹೊರತು ಕಾರ್ಖಾನೆಯ ಹಗರಣ, ಕಾರ್ಮಿಕರ ಬಾಕಿ ವೇತನಗಳ ಬಗ್ಗೆ ತುಟಿ ಬಿಚ್ಚಿರಲಿಲ್ಲ. ಕಾರ್ಖಾನೆಯನ್ನು ಕೊಳ್ಳೆ ಹೊಡೆದು ಬೀಗ ಹಾಕಿದ ಉದಾಸಿ ಮತ್ತು ಅಧ್ಯಕ್ಷ ಬೆಲ್ಲದ್‌ನನ್ನು ಯಡ್ಡಿ ಮನಸೋಯಿಚ್ಛೆ ಹೊಗಳಿದಾಗಲೇ ಜನರಿಗೆ ಗೊತ್ತಾಗಿತ್ತು ಈತ ಕಾರ್ಮಿಕ-ರೈತರ ಹಿತವನ್ನು ಎಷ್ಟರಮಟ್ಟಿಗೆ ಕಾಯುತ್ತಾನೆ ಎಂದು. ನಿರೀಕ್ಷಿಸಿದಂತೆಯೇ ಆಯ್ತು. ವರದಾ ಷುಗರ್ಸ್‌ಅನ್ನೇ ನಂಬಿ, ಸಾಲಾಸೋಲ ಮಾಡಿ ಸುಮಾರು 30 ಲಕ್ಷ ಟನ್ ಕಬ್ಬು ಬೆಳೆದ ರೈತ ನೇಣಿಗೆ ಕೊರಳೊಡ್ಡುವುದೊಂದೇ ಬಾಕಿ ಎಂಬ ಸ್ಥಿತಿ ತಲುಪಿದ್ದಾನೆ. ಇನ್ನೊಂದೆಡೆ ಈ ಕಾರ್ಖಾನೆಯಲ್ಲಿ ಕತ್ತೆಗಳಂತೆ ದುಡಿದ ಕಾರ್ಮಿಕರಿಗೆ ಸಂಬಳವನ್ನೂ ಕೊಡದೆ ಅವರ ಬದುಕನ್ನೂ ಕತ್ತಲೆ ಆವರಿಸಿ ಬಿಟ್ಟಿದೆ. ಯಾವ ಕಾರಣಕ್ಕೂ ತಾವು ದುಡಿದದ್ದಕ್ಕೆ ಪ್ರತಿಫಲ ಪಡೆಯದೇ ಬಿಡುವುದಿಲ್ಲ ಎಂಬ ಹಠಕ್ಕೆ ಬಿದ್ದಿರುವ ಕಾರ್ಮಿಕರು ಈಗ ಕುಟುಂಬ ಸಮೇತವಾಗಿ ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ.

ಉದಾಸಿ-ಬೆಲ್ಲದ್ ಸಾರಥ್ಯದಲ್ಲಿ ದಿವಾಳಿ

ವರದಾ ಷುಗರ್ಸ್‌ಅನ್ನು ಯಶಸ್ವಿಯಾಗಿ ದಿವಾಳಿಯೆಬ್ಬಿಸಿದ ಕೀರ್ತಿ ಉದಾಸಿಯ ಶಿಷ್ಯ ಸದಾಶಿವ ಬೆಲ್ಲದ್‌ಗೆ ಸೇರಬೇಕು. ಈತನ ಪರ್ಸನಲ್ ಕಮೀಷನ್ ರೇಟಿಗೆ ಹೆದರಿ ಯಾವ ಕಂಪೆನಿಯೂ ಕಾರ್ಖಾನೆಯನ್ನು ಗುತ್ತಿಗೆ ಮೇಲೆ ಪಡೆಯಲು ಮುಂದೆ ಬರುತ್ತಿಲ್ಲ. ಕಬ್ಬು ಅರೆಯುವ ಯಂತ್ರ, ಬಾಯ್ಲರ್‌ಗಳು ಹಾಳಾಗಿ ಗುಜರಿ ಸೇರುವ ಹಂತ ತಲುಪಿದ್ದರೂ ಅವುಗಳನ್ನು ದುರಸ್ತಿ ಮಾಡುವ ವಿಷಯದ ಬಗ್ಗೆ ಬೆಲ್ಲದ್ ಆಗಲೀ, ಉದಾಸಿಯಾಗಲೀ ತಲೆಕೆಡಿಸಿಕೊಂಡಿಲ್ಲ.




ಎಂಡಿ ಗದ್ದನಕೇರಿ

ಕಳೆದ ವರ್ಷ ವರದಾ ಷುಗರ್ಸ್‌ಅನ್ನು ಗುತ್ತಿಗೆಗೆ ಪಡೆದಿದ್ದ ಸೌದತ್ತಿ ಮನವಳ್ಳಿಯ ರೇಣುಕಾ ಷುಗರ್ಸ್ ಕಂಪೆನಿಯು ಆಡಳಿತ ಮಂಡಳಿಯ ಕಾಟ ತಾಳಲಾರದೇ ಸುಮಾರು 42 ಲಕ್ಷ ರೂಪಾಯಿಗಳಷ್ಟು ಕಾರ್ಮಿಕರ ಬಾಕಿ ಸಂಬಳವನ್ನು ಎತ್ತಿಕೊಂಡು ರಾತ್ರೋರಾತ್ರಿ ಓಡಿ ಹೋದಾಗ ಅವರು ಎಸ್ಕೇಪ್ ಆಗುವುದಕ್ಕೆ ಸೆಕ್ಯೂರಿಟಿ ನೀಡಿದ್ದ ಅಧ್ಯಕ್ಷ ಬೆಲ್ಲದ್‌ಗೆ ಪುಷ್ಕಳ ಕಮೀಷನ್ ಮತ್ತು 1000 ಚೀಲ ಸಕ್ಕರೆಯನ್ನು ಫೀಡ್ ಮಾಡಲಾಗಿತ್ತು.

ರೇಣುಕಾ ಷುಗರ್ಸ್ ಬಂದ ಹೊಸದರಲ್ಲಿ 1.60 ಲಕ್ಷ ಮೆಟ್ರಿಕ್ ಟನ್ ಕಬ್ಬು ಅರೆದು 1,60,000 ಲಕ್ಷ ಕ್ವಿಂಟಾಲ್ ಸಕ್ಕರೆ ಉತ್ಪಾದಿಸಿ ಕಬ್ಬು ಬೆಳೆಗಾರರಲ್ಲಿ ಆಶಾಭಾವನೆ ಮೂಡಿಸಿದ್ದು ನಿಜ. ಅವರನ್ನೇ ನಂಬಿದ ರೈತರು ಸಾಲಾಸೋಲ ಮಾಡಿ ಕಬ್ಬು ಬೆಳೆದರೆ ರಾತ್ರೋರಾತ್ರಿ ಓಡಿಹೋಗಿದ್ದಾರೆ. 50 ಸಾವಿರ ಟನ್ ಬೆಳೆ ಕಟಾವಾಗದೇ ಹೊಲದಲ್ಲಿಯೇ ಒಣಗಿದರೆ ಇನ್ನೂ ಹೊಸದಾಗಿ 3 ಲಕ್ಷ ಟನ್ ಕಾರ್ಖಾನೆ ಬಾಗಿಲು ತೆರೆಯುವುದನ್ನೇ ಕಾಯುತ್ತಿದೆ.

ಹಾವೇರಿ

ಪ್ರಾರಂಭದಲ್ಲಿ ಪ್ರತಿ ಟನ್‌ಗೆ 1,050 ರೂಪಾಯಿಗಳನ್ನು ನೀಡಿದ್ದ ರೇಣುಕಾ ಷುಗರ್ಸ್‌ನವರು ಹೆಚ್ಚೆಚ್ಚು ಕಬ್ಬು ಬಂದು ಬೀಳುತ್ತಿದ್ದಂತೆ 950, 750 ಕೊನೆಗೆ 650 ರೂಪಾಯಿಗಳಿಗೆ ಇಳಿಸಿ ರೈತರನ್ನು ಸುಲಿದರು. ಈಗ ಅದೂ ಇಲ್ಲದಂತೆ ಎಸ್ಕೇಪ್ ಆಗಿದ್ದಾರೆ. ರೇಣುಕಾ ಷುಗರ್ಸ್ ಜೊತೆ ಪುಷ್ಕಳವಾಗಿ ಮೇಯ್ದುವವನೆಂದರೆ ಬೆಲ್ಲದ್. ಈತ ಪ್ರತಿ ಟನ್‌ಗೆ 50 ರೂಪಾಯಿಯಂತೆ ಫಿಕ್ಸ್ ಮಾಡಿ ಸುಮಾರು 60 ಲಕ್ಷ ರೈತರ ಹಣವನ್ನು ಮೇಯ್ದಿದ್ದಾನೆ.



ಸಂಗೂರು (ವರದಾ ಷುಗರ್ಸ್)

ಜಂಗು ತಿಂದ ಕಾರ್ಖಾನೆಯನ್ನು ಗುತ್ತಿಗೆ ಪಡೆಯೋರ್‍ಯಾರು?

ಲಕ್ಷಾಂತರ ಟನ್ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿರುವ ದೈತ್ಯ ಕಾರ್ಖಾನೆ ವರದಾ ಷುಗರ್ಸ್‌ಗೆ ಈಗ ರೋಗ ತಗುಲಿಬಿಟ್ಟಿದೆ. ಅದಕ್ಕೆ ಮತ್ತೆ ಜೀವ ತುಂಬುವ ಕೆಲಸವನ್ನು ಯಾರೂ ಮಾಡಿಲ್ಲ. ಈ ಹಿಂದೆ ಧರ್ಮಸಿಂಗ್ ಸರ್ಕಾರ ಅಧಿಕಾರದಲ್ಲಿದ್ದಾಗ ಕಾರ್ಖಾನೆಯನ್ನು ಗುತ್ತಿಗೆ ಪಡೆದಿದ್ದ ಅಂಬಿಕಾ ಷುಗರ್ಸ್ ಎಂಬ ಕಂಪೆನಿ ಒಂದಿಷ್ಟು ದುರಸ್ತಿ ಕಾರ್ಯ ಮಾಡಿದ್ದು ಬಿಟ್ಟರೆ ಆ ನಂತರದಲ್ಲಿ ಅದನ್ನು ಕೊಳ್ಳೆ ಹೊಡೆದವರೇ ಹೆಚ್ಚು. ಇದೆಲ್ಲ ಆದನಂತರ ಬಂದ ರೇಣುಕಾ ಷುಗರ್ಸ್ ಇನ್ನೂ ಒಂದು ಲಕ್ಷ ಟನ್ ಕಬ್ಬು ಅರೆಯುವುದು ಬಾಕಿ ಇರುವಾಗಲೇ ಬಾಯ್ಲರ್‌ನಲ್ಲಿ ದೋಷವಿದೆ, ಸ್ಫೋಟಗೊಳ್ಳುವ ಸಾಧ್ಯತೆಯಿದೆ ಎಂದು ಹೆದರಿಸಿ ರಾತ್ರೋರಾತ್ರಿ ಜಾಗ ಖಾಲಿ ಮಾಡಿದರೆ ಹೊರತು ಅದನ್ನು ರಿಪೇರಿ ಮಾಡುವುದಕ್ಕೆ ಮುಂದಾಗಲಿಲ್ಲ.

ಇದನ್ನೆಲ್ಲಾ ನೋಡಿ ಸಿಟ್ಟಿಗೆದ್ದಿರುವ ರೈತ-ಕಾರ್ಮಿಕರೆದುರು ಮೊಸಳೆ ಕಣ್ಣೀರು ಸುರಿಸಲು ಉದಾಸಿ ಪ್ರಯತ್ನಿಸುತ್ತಿದ್ದಾನೆ. ಕಾರ್ಖಾನೆಯನ್ನು ಗುತ್ತಿಗೆ ನೀಡಲು ಟೆಂಡರ್ ಕರೆಯಲಾಗಿದ್ದು ನವೆಂಬರ್ 6ನೇ ತಾರೀಖು ಕೊನೆಯ ದಿನವಾಗಿತ್ತು. ಆದರೆ ರೋಗಗ್ರಸ್ತವಾಗಿರುವ ಈ ಕಾರ್ಖಾನೆಯನ್ನು ದುರಸ್ತಿ ಮಾಡದೇ ಟೆಂಡರ್ ಕರೆದಿರುವುದರಿಂದ ಇದನ್ನು ಗುತ್ತಿಗೆ ಪಡೆಯಲು ಯಾರೂ ಬಂದಿಲ್ಲ. ಇದು ರೈತ-ಕಾರ್ಮಿಕರಲ್ಲಿ ಸಹಜವಾಗಿಯೇ ಆತಂಕ ಮೂಡಿಸಿದೆ. ಅವರೇನಾದರೂ ಅನಾಹುತಕಾರಿ ಹೆಜ್ಜೆಗಳನ್ನಿಟ್ಟರೆ ಅದಕ್ಕೆ ಸಿ.ಎಂ. ಉದಾಸಿಯೇ ನೇರ ಹೊಣೆಗಾರನಾಗುತ್ತಾನೆ.

ವೇತನ ಕೊಡಿ, ಇಲ್ಲವೇ ವಿಷ ಕೊಡಿ

ತನ್ನನ್ನು ಚುನಾವಣೆಯಲ್ಲಿ ಗೆಲ್ಲಿಸಿ ಕಳಿಸಿದ ರೈತ-ಕಾರ್ಮಿಕರ ಮೇಲೆ ಉದಾಸಿಗೆ ಅದೆಷ್ಟು ಸಿಟ್ಟಿದೆಯೋ ಗೊತ್ತಿಲ್ಲ, ಈಗದನ್ನು ತೀರಿಸಿಕೊಳ್ಳುತ್ತಿದ್ದಾನೆ. ಎರಡು ದಶಕಗಳ ಕಾಲ ವರದಾ ಷುಗರ್ಸ್‌ನ್ನು ಆಳಿದ ಉದಾಸಿ ಅದನ್ನು ಉದ್ಧಾರ ಮಾಡಿದ್ದಕ್ಕಿಂತ ಕೊಳ್ಳೆ ಹೊಡೆದು ಹಾಳು ಮಾಡಿದ್ದೇ ಜಾಸ್ತಿ.

ಕಾರ್ಖಾನೆಯ ಕಾರ್ಮಿಕರನ್ನು ತನ್ನ ಮನೆಯ ಜೀತದಾಳುಗಳಂತೆ ದುಡಿಸಿಕೊಂಡು ಅವರಿಗೆ 18 ತಿಂಗಳ ಸಂಬಳವನ್ನೂ ಕೊಡದೇ ಬೀದಿ ಪಾಲು ಮಾಡಿದ ಬೆಲ್ಲದ್‌ಗೆ ಈಗ ಉದಾಸಿಯೇ ಬೆನ್ನೆಲುಬಾಗಿ ನಿಂತಿದ್ದಾನೆ. ಅದು ಸಾಲದೆಂಬಂತೆ ಕಾರ್ಮಿಕರ ವಸತಿ ಗೃಹಗಳಿಗೆ ವಿದ್ಯುತ್ ಮತ್ತು ಕುಡಿಯುವ ನೀರು ಸರಬರಾಜನ್ನು ಕಟ್ ಮಾಡಿ ಅಮಾನವೀಯತೆಯನ್ನೂ ಮೆರೆದಿದ್ದಾನೆ.

ಈಗ ಕಾರ್ಮಿಕರು "ನಾವು ದುಡಿದಿದ್ದಕ್ಕೆ ಸಂಬಳ ಕೊಡಿ" ಎಂದು ನ್ಯಾಯಯುತ ಬೇಡಿಕೆಯನ್ನಿಟ್ಟುಕೊಂಡು ಕುಟುಂಬ ಸಮೇತವಾಗಿ ಬೀದಿಗೆ ಇಳಿದಿದ್ದಾರೆ; "ಸಂಬಳ ಕೊಡಿ ಅಥವಾ ವಿಷ ಕೊಡಿ" ಎಂದು ಹಾವೇರಿ ಜಿಲ್ಲಾಧಿಕಾರಿಗಳ ಕಚೇರಿಯೆದುರು ಕಳೆದ ಹದಿನೈದು ದಿನಗಳಿಂದಲೂ ಹಗಲುರಾತ್ರಿ ಎನ್ನದೆ ಗೋಗರೆಯುತ್ತಿದ್ದಾರೆ. ಉದಾಸಿಯ ಕೃಪಾಕಟಾಕ್ಷದಿಂದಲೇ ಜಿಲ್ಲೆಗೆ ಡಿಸಿಯಾಗಿ ಬಂದಿರುವ ಪಿ.ಎಸ್. ವಸ್ತ್ರದ್ ಏನು ಕೇಳಿದರೂ "ಸಾಹೇಬ್ರನ್ನು ಕೇಳಿ ಹೇಳ್ತಿನಿ" ಎಂದು ರಾಗ ತೆಗೆಯುತ್ತಿದ್ದಾನೆ.

ಸೋತು ಮನೆ ಸೇರಿದ್ದ ಕಾಂಗ್ರೆಸ್ ಶಾಸಕರು ಕಾರ್ಮಿಕರ ಬವಣೆಯನ್ನು ಬಂಡವಾಳ ಮಾಡಿಕೊಂಡು ಒಂದಿಷ್ಟು ಅನುಕಂಪ ಸೂಚಿಸಿ ಫೋಜು ನೀಡಲು ಮುಂದೆ ಬಂದಿದ್ದಾರೆ. ಉದಾಸಿಯೆದುರು ಅದೇನು ಕಿಸಿಯುತ್ತಾರೋ ನೋಡಬೇಕು.



'ಸಂಬಳ ಕೊಡಿ ಇಲ್ಲವೇ ವಿಷ ಕೊಡಿ' ಪ್ರತಿಭಟನೆಯಲ್ಲಿ ಕಾರ್ಮಿಕರು


ಒಟ್ಟಿನಲ್ಲಿ ವಿಷದ ಬಾಟಲಿಯನ್ನು ಮುಂದಿಟ್ಟುಕೊಂಡು ಪ್ರತಿಭಟನೆ ನಡೆಸುತ್ತಿರುವ ಕಾರ್ಮಿಕ-ರೈತರು ಸಿಟ್ಟು ರಟ್ಟೆಗೆ ಬಂದು ಉದಾಸಿ, ಹಿಂದಿನ ಅಧ್ಯಕ್ಷ ಮತ್ತು ಸದ್ಯ ಹಾವೇರಿ ಶಾಸಕ ಶಿವರಾಜ್ ಸಜ್ಜನ್, ಬೆಲ್ಲದ್ ಎಲ್ಲರನ್ನೂ ಏಕಕಾಲಕ್ಕೆ ಹೊಸಕಿಹಾಕುವ ದಿನಗಳು ದೂರವಿಲ್ಲ ಅಂತ ಕಾಣುತ್ತೆ.

– ಹುರುಳಿಕುಪ್ಪಿ ವಿನಯ್

ಮರುಮದುವೆಯ ಬಿಜಿಯಲ್ಲೇ ಶಾಸಕರು

ಅತ್ತ ಹಾವೇರಿಯಲ್ಲಿ ಕಾರ್ಮಿಕರು ಹೆಂಡತಿ ಮಕ್ಕಳ ಸಮೇತರಾಗಿ ಸಂಬಳಕ್ಕಾಗಿ ಕೈಯಲ್ಲಿ ವಿಷದ ಬಾಟಲಿ ಹಿಡಿದುಕೊಂಡು ಬೀದಿಗಿಳಿದಿದ್ದರೆ ಇತ್ತ ಬೆಂಗಳೂರಿನಲ್ಲಿ ಹಾವೇರಿಯ ಶಾಸಕರು ಜೆಡಿಎಸ್‌ನೊಂದಿಗಿನ ಅನೈತಿಕ ಮರುಮದುವೆಗಾಗಿ ತಯಾರಿ ನಡೆಸುತ್ತಿದ್ದಾರೆ. ಧರಣಿಯಲ್ಲಿ ಕುಳಿತ 23 ಜನ ಮಹಿಳೆಯರು ಅಸ್ವಸ್ಥರಾಗಿ ಆಸ್ಪತ್ರೆ ಸೇರಿದರೂ ಉದಾಸಿಯಾಗಲೀ, ಯಾವೊಬ್ಬ ಶಾಸಕನಾಗಲೀ ಬಂದು ವಿಚಾರಿಸಿಲ್ಲ. ಅವರಿಗೆ ಕಾರ್ಮಿಕರ ಪ್ರಾಣಕ್ಕಿಂತ ತಮ್ಮ ಪೊಲಿಟಿಕಲ್ ಕೆರಿಯರ್ ಪ್ರಮುಖವಾಗಿಬಿಟ್ಟಿದೆ. ಹಾವೇರಿಯ ಶಾಸಕ ಶಿವರಾಜ್ ಸಜ್ಜನ್, ರಾಣೇಬೆನ್ನೂರಿನ ಜಿ. ಶಿವಣ್ಣ, ಶಿಗ್ಗಾಂವಿಯ ರಾಜಶೇಖರ್ ಸಿಂಧೂರ್, ಬ್ಯಾಡಗಿಯ ನೆಹರೂ ಓಲೇಕಾರ ಎಲ್ಲರೂ ಬೆಂಗಳೂರಿನಲ್ಲೇ ಬಿಜಿಯಾಗಿಬಿಟ್ಟಿದ್ದಾರೆ.

ಕಾರ್ಖಾನೆಗೆ ಎರಡನೇ ಬಾರಿಗೆ ಅಧ್ಯಕ್ಷನಾಗಿ ವಕ್ಕರಿಸಿರುವ ಅಕ್ಕಿಆಲೂರಿನ ಸದಾಶಿವ ಬೆಲ್ಲದ್ ರೇಣುಕಾ ಷುಗರ್ಸ್‌ನವರು ಬಾಡಿಗೆ ನೀಡಬೇಕಿರುವ 3 ಕೋಟಿ ರೂ.ವನ್ನೂ ವಸೂಲಿ ಮಾಡಿಲ್ಲ. ಅದಕ್ಕಾಗಿ ಎಷ್ಟು ಕೋಟಿ ತಿಂದಿದ್ದಾನೋ ಗೊತ್ತಿಲ್ಲ. ಅಲ್ಲದೆ, ದಾವಣಗೆರೆಯ ಇವಾಕಂ ಬ್ಯಾಂಕ್ಸ್ ನಿರ್ದೇಶಕರು ನೀಡಿರುವ 38,72,528 ರೂಪಾಯಿ ಚೆಕ್ ಇವನ ಪರ್ಸನಲ್ ಅಕೌಂಟಿಗೆ ಜಮಾ ಆಗಿರುವ ವದಂತಿಗಳೂ ಇವೆ. ಈ ಹಣವನ್ನಾದರೂ ಕಾರ್ಮಿಕರಿಗೆ ಸಂಬಳವಾಗಿ ಕೊಡಬಹುದಿತ್ತು. ಹಣ ಹಣ ಎಂದು ಹಪಹಪಿಸುವ ಬೆಲ್ಲದ್‌ಗೆ ಅಂತಹ ಗುಣ ಎಲ್ಲಿಂದ ಬರಬೇಕು? ಒಟ್ಟಿನಲ್ಲಿ ಕಾರ್ಮಿಕರು ಉದಾಸಿ, ಬೆಲ್ಲದ್ ಮತ್ತು ಚಡ್ಡಿ ಶಾಸಕರಿಗೆ ಚಪ್ಪಲಿ ಸೇವೆ ಮಾಡುವ ದಿನ ದೂರ ಇಲ್ಲ ಅಂತ ಕಾಣುತ್ತೆ.



ಶಿವರಾಜ್ ಸಜ್ಜನ್

ದಕ್ಷಿಣ ಭಾರತದಲ್ಲಿ ಬಿಜೆಪಿ ನೇತೃತ್ವದ ಮೊದಲ ಸರ್ಕಾರ!

ವಿಠ್ಠಲ್ ಹೆಗ್ಡೆಯ ಬೇಟೆಯೊಂದಿಗೆ ಬಿಜೆಪಿಯ ಫ್ಯಾಸಿಸ್ಟ್ ಅಧಿಕಾರಾರಂಭ!!

...ತ್ತ ರಾಜಧಾನಿಯಲ್ಲಿ ಇಡೀ ದಕ್ಷಿಣ ಭಾರತದಲ್ಲಿ ...ಲ ಬಾರಿಗೆ ಬಿಜೆಪಿ ನೇತೃತ್ವದ ಸರ್ಕಾರ ಕರ್ನಾಟಕ ಅಸ್ತಿತ್ವಕ್ಕೆ ಬರುವುದಕ್ಕೆ ರಂಗ ಸಿದ್ಧವಾಗುತ್ತಿದ್ದಂತೆ ಮಲೆನಾಡಿನ ಶೃಂಗೇರಿಯಲ್ಲಿ ರಾಜ್ಯದ ಪ್ರಗತಿಪರ ...ಕ, ದಲಿತ, ಗಿರಿಜನ ಮತ್ತು ದಮನಿತ ಸಮು...ಗಳ ಪರವಾಗಿ, ರಾಜ್ಯದ ನೆಲ ಜಲಗಳ ರಕ್ಷಣೆ ...ಕಳೆದ ಮೂವತ್ತು ವರ್ಷಗಳಿಂದ ನಿರಂತರವಾಗಿ ...ರಾಟ ನಡೆಸುತ್ತಾ ಬಂದಿರುವ ಶೃಂಗೇರಿ ಕಲ್ಕುಳಿ ...ಠ್ ಹೆಗ್ಡೆಯವರ ಮೇಲೆ ಎಸ್ಸಿ/ಎಸ್ಟಿ ಅಟ್ರಾಸಿಟಿ ...ಒಂದು ಬುಕ್ಕಾಗಿದೆ. ಬುಕ್ಕಾಗಿದೆ ಎಂಬುದಕ್ಕಿಂತ ...ರನ್ನು ತುಳಿಯಲು ವ್ಯವಸ್ಥಿತ ತಂತ್ರಗಾರಿಕೆ ನಡೆಸಿ ...ರನ್ನು ಸಿಕ್ಕಿಸಲಾಗಿದೆ ಎಂದರೇನೇ ಸರಿ ಎನಿಸುತ್ತದೆ.

...ಬಿಜೆಪಿ ನೇತೃತ್ವದ ಮುಂದಿನ ಹತ್ತೊಂಬತ್ತು ತಿಂಗಳ ...ಡಳಿತಾವಧಿಯಲ್ಲಿ ಕರ್ನಾಟಕದ ಪ್ರಗತಿಪರ ಚಿಂತಕರು, ...ದ್ಧಿಜೀವಿಗಳು, ಪ್ರಜಾತಂತ್ರವಾದಿಗಳು, ಮಾನವ ...ಹಕ್ಕುಗಳು ಮತ್ತು ಪತ್ರಕರ್ತರಿಗೆ ಇದೊಂದು ಎಚ್ಚ...ರಿಕೆಯ ಗಂಟೆ. ರಾಜ್ಯದ ಶಾಂತಿಪ್ರಿಯ ಜನತೆ ಎದುರಿಸ...ಬೇಕಾದ ಫ್ಯಾಸಿಸ್ಟ್ ದಬ್ಬಾಳಿಕೆಯ ...ಮುನ್ಸೂಚನೆ. ದೂರದ ಗುಜರಾತ್ ...ದರಿಯ ರಕ್ತದೋಕುಳಿಗೆ ...ಮುನ್ನುಡಿ.


...ಸಿನ ಅಸಲೀಯತ್ತು

ವಿಠ್ಠಲ್ ಹೆಗ್ಡೆ ಮೇಲೆ ಎಸ್ಸಿ/... ಅಟ್ರಾಸಿಟಿ ಕೇಸು ಹಾಕಲಾ... ಎಂದರೆ ಅದೇ ಒಂದು ...ಹಾಸ್ಯದ ವಿಚಾರವಾಗಿಬಿಡುತ್ತದೆ. ...ಏಕೆಂದರೆ, ಖುದ್ದು ಹೆಗ್ಡೆಯವರೇ ...ಮೂವತ್ತಾರು ವರ್ಷಗಳಿಂದ ದಲಿತರ ...ಪರವಾಗಿ ಹೋರಾಡಿದವರು ...ಮತ್ತು ಈಗಲೂ ಹೋರಾಡುತ್ತಿರು...ವವರು. ಅಂತಹವರೇ ದಲಿತರ ...ಮೇಲೆ ಅಟ್ರಾಸಿಟಿ ಮಾಡುತ್ತಾರೆ ...ಎಂದರೆ ನಂಬಲರ್ಹ ವಿಚಾರ...ವೇ? ಹೀಗಾಗಿ ಪೊಲೀಸರು ಮತ್ತು ಜಿಲ್ಲಾಡಳಿತವು ...ದುರುದ್ದೇಶಪೂರ್ವಕವಾಗಿಯೇ ಅವರನ್ನು ಇದರಲ್ಲಿ ...ಸಿಕ್ಕಿಸಿದ್ದಾರೆ ಎಂಬುದು ಮೇಲ್ನೋಟಕ್ಕೇನೇ ಗೊತ್ತಾಗು...ತ್ತದೆ. ಈ ಕೇಸಿನ ಅಸಲೀಯತ್ತನ್ನು ಒಳಹೊಕ್ಕು ...ನೋಡಿದರೆ ಅದು ಇನ್ನೂ ಸ್ಪಷ್ಟವಾಗುತ್ತದೆ.

...ಶೃಂಗೇರಿ ತಾಲ್ಲೂಕು ಕಸಬಾ ಹೋಬಳಿ ಶೃಂಗೇರಿ ...ನ್ ಸರ್ವೆ ನಂ. 19, 21, 22, 23 ರಲ್ಲಿ ವಿಠ್ಠಲ್ ...ಹೆಗ್ಡೆಯವರ ಹೆಸರಿನಲ್ಲಿ 4 ಎಕರೆ 35 ಗುಂಟೆ ಜಮೀನಿದೆ. ...ಮೊದಲು ಭತ್ತದ ಗದ್ದೆಯಾಗಿದ್ದ ಈ ಜಮೀನನ್ನು ಅವರು ...88 ರ ಸುಮಾರಿನಲ್ಲಿ ಅಡಿಕೆ ತೋಟವನ್ನಾಗಿ ...ಪರಿವರ್ತಿಸಿದರು. ಈ ಜಮೀನಿಗೆ ಹೊಂದಿಕೊಂಡೇ ...ರ್ವೆ ನಂ. 20/2ರಲ್ಲಿ ಅವರ ಕುಟುಂಬದ ಸಮೀಪವರ್ತಿ...ಯಾದ ಮತ್ತು ದಲಿತ ಸಮುದಾಯಕ್ಕೆ ಸೇರಿದ ಬೆಳ್ಳಯ್ಯ ...ಎಂಬುವವರಿಗೆ ಸೇರಿದ 17 ಗುಂಟೆ ಭತ್ತದ ಗದ್ದೆಯಿತ್ತು. ...ವಿಠ್ಠಲ್ ಹೆಗ್ಡೆಯವರ ಜಮೀನು ಬೆಳ್ಳಯ್ಯನವರ ಜಮೀನನ್ನು ...ಸುತ್ತುವರೆದಿದ್ದರಿಂದ ಹಾಗೂ ವಿಠ್ಠಲ್ ಹೆಗ್ಡೆಯದ್ದು ...ತೋಟವಾಗಿದ್ದರಿಂದ ಪಕ್ಕದ ಬೆಳ್ಳಯ್ಯನವರ ಗದ್ದೆಯ ...ಮೇಲೆ ಅಡಿಕೆ ಮರಗಳ ನೆರಳು ಬೀಳುತ್ತಿದ್ದರಿಂದ ಆತ...ನಿಗೆ ಅಲ್ಲಿ ಭತ್ತ ಬೆಳೆಯುವುದು ದುಸ್ತರವಾಗುತ್ತಿತ್ತು. ಆಗ ...ಬೆಳ್ಳಯ್ಯನವರೇ ಮುಂದೆ ಬಂದು ತಮ್ಮ ಜಮೀನನ್ನು ...ವಿಠ್ಠಲ್ ಹೆಗ್ಡೆಯವರ ಸುಪರ್ದಿಗೆ ಕೊಟ್ಟು, ಅದಕ್ಕೆ ...ಬದಲಿಯಾಗಿ ವಿಠ್ಠಲ್ ಹೆಗ್ಡೆಯವರಿಂದ ಬೇರೆಕಡೆ ಜಮೀನು ...ಪಡೆಯುವ ಪ್ರಸ್ತಾಪವನ್ನು ಮುಂದಿಟ್ಟರು. ಅವರ ಪ್ರಸ್ತಾಪದ ...ಹಿಂದಿದ್ದ ಸದುದ್ದೇಶವನ್ನು ಅರ್ಥ ಮಾಡಿಕೊಂಡ ...ಹೆಗ್ಡೆಯವರು ಬೆಳ್ಳಯ್ಯನವರ ಪ್ರಸ್ತಾಪಕ್ಕೆ ಒಪ್ಪಿಕೊಂಡರು. ...ಅದರಂತೆಯೇ, ಸರ್ವೆ ನಂ. 20/2 ರಲ್ಲಿದ್ದ ಬೆಳ್ಳಯ್ಯನವರ ...17 ಗುಂಟೆ ಜಮೀನನ್ನು ತಮ್ಮ ವಶಕ್ಕೆ ತೆಗೆದುಕೊಂಡು, ...ಸರ್ವೆ ನಂ. 23 ರಲ್ಲಿನ ತಮ್ಮ ಜಾಗದಲ್ಲಿ 22 ಗುಂಟೆ ...ಜಾಗವನ್ನು ಬೆಳ್ಳಯ್ಯನವರಿಗೆ ಬಿಟ್ಟುಕೊಟ್ಟರು. ಅಂದರೆ ...ಬೆಳ್ಳಯ್ಯನವರಿಂದ ಪಡೆದ ಜಮೀನಿಗಿಂತ ಐದು ಗುಂಟೆ ...ಹೆಚ್ಚು ಜಮೀನನ್ನೇ ಅವರಿಗೆ ನೀಡಿದರು. ಆದರೆ ವಿಠಲ್ ...ಹೆಗ್ಡೆ ಮಾಡಿದ ತಪ್ಪೇನೆಂದರೆ ಅದನ್ನು ರಿಜಿಸ್ಟರ್ ...ಮಾಡಿಕೊಳ್ಳಲಿಲ್ಲ, ಮೇಲಾಗಿ ಇದಾದ್ದದು ಎಸ್ಸಿ-ಎಸ್ಟಿ ...ಅಟ್ರಾಸಿಟಿ ಜಾರಿಗೆ ಬಂದ ಸರಿಸುಮಾರು ಅದೇ ...ಸಮಯದಲ್ಲಿ.

...ಆದರೆ, ತದನಂತರದ ದಿನಗಳಲ್ಲಿ ತಿಳಿದು ಬಂದಿದ್ದೇ...ನೆಂದರೆ, ವಾಸ್ತವದಲ್ಲಿ ಸರ್ವೆ ನಂ. 20/2 ರಲ್ಲಿ ...ಬೆಳ್ಳಯ್ಯನವರು ಕೊಟ್ಟಿದ್ದ 17 ಗುಂಟೆ ಜಮೀನು ...ಅವರ ಹೆಸರಿನಲ್ಲಿ ಇರಲೇ ಇಲ್ಲ, ಪಹಣಿಯ ಪ್ರಕಾರ ...ಅದು ಸರ್ಕಾರಿ ಜಮೀನು. ಮೂಲತಃ ಕೆ. ರಾಮಕೃಷ್ಣ ...ಭಟ್ ಎಂಬುವವರಿಗೆ ಸೇರಿದ್ದ ಎನ್ನಲಾದ ಆ ...ಜಾಗವನ್ನು, ನಾಗಪ್ಪ ಎಂಬುವವರು ಗೇಣಿ ಮಾಡಿ...ಕೊಂಡಿದ್ದು ಅನಂತರ ನಾಗಪ್ಪನವರಿಂದ ಅದನ್ನು ಪಡೆದು ಬೆಳ್ಳಯ್ಯನವರು ಗೇಣಿ ಮಾಡಿಕೊಂಡಿದ್ದರು.

ನಂತರ ಭೂಸುಧಾರಣೆ ಜಮೀನಿಗೆ ಎಸಿ ಅಧ್ಯಕ್ಷತೆಯಲ್ಲಿ ಟ್ರಿಬ್ಯುನಲ್ ಅವಕಾಶ ಬಂತು. ಈ ಜಾಗವನ್ನು ತಮಗೆ ಮಂಜೂರು ಮಾಡಬೇಕೆಂದು ಕೋರಿ ಟ್ರಿಬ್ಯುನಲ್‌ಗೆ ವಿಠ್ಠಲ್ ಹೆಗ್ಡೆಯವರು ಅರ್ಜಿ ಸಲ್ಲಿಸಿದ್ದರು. ಇದೇ ಸಮಯದಲ್ಲಿ ಇದೇ ಜಾಗವನ್ನು ತನಗೆ ಮಂಜೂರು ಮಾಡಬೇಕೆಂದು ಬೆಳ್ಳಯ್ಯನವರೂ ಅರ್ಜಿ ಸಲ್ಲಿಸಿದ್ದರು. ಅದು ಅವರ ತಪ್ಪು ಗ್ರಹಿಕೆಯಿಂದಾದ ಅಚಾತುರ್ಯವಾಗಿತ್ತು. ಕೊನೆಗೆ ಬೆಳ್ಳಯ್ಯನವರೇ ಖುದ್ದಾಗಿ "ನಾನು ಸರ್ವೆ ನಂ. 20/2 ರಲ್ಲಿನ 17 ಗುಂಟೆ ಜಾಗವನ್ನು ವಿಠಲ್ ಹೆಗ್ಡೆಯವರಿಗೆ ಬಿಟ್ಟುಕೊಟ್ಟಿದ್ದು ನನ್ನ ಮನೆ ಹತ್ತಿರವಿರುವ ಅಷ್ಟೇ



ಪ್ರಮಾಣದ ಜಮೀನನ್ನು ಅವರು ನನಗೆ ಬಿಟ್ಟುಕೊಟ್ಟಿದ್ದು ನಾನದನ್ನು ಸಾಗುವಳಿ ಮಾಡುತ್ತಿದ್ದೇನೆ" ಎಂಬ ಹೇಳಿಕೆಯನ್ನು ಟ್ರಿಬ್ಯುನಲ್‌ಗೆ ಕೊಟ್ಟರು. ಅವರ ಈ ಹೇಳಿಕೆ ಮತ್ತು ವಾಸ್ತವ ಎರಡೂ ಸರಿಯಾಗಿಯೇ ಇದ್ದುದರಿಂದ ತೀರ್ಪು ವಿಠಲ್ ಹೆಗ್ಡೆಯವರ ಪರವಾಗಿಯೇ ಆಗಬೇಕಿತ್ತು, ಆದರೆ ಹಾಗಾಗಲಿಲ್ಲ.

ವಿಠಲ್ ಹೆಗ್ಡೆಯವರು ಅಷ್ಟೊತ್ತಿಗಾಗಲೇ ಸಾಕಷ್ಟು ಜನಪರ ಮತ್ತು ಪರಿಸರ ಹೋರಾಟಗಳನ್ನು ಕಟ್ಟಿ ಬೆಳೆಸಿದ್ದರು. ಜನಕಂಟಕ ಮತ್ತು ಭ್ರಷ್ಟ ಅಧಿಕಾರಿಗಳ ವಿರುದ್ಧ ಒಂದು ಜನಾಂದೋಲನವನ್ನೇ ರೂಪಿಸಿದ್ದರು. ಹೀಗಾಗಿ ಅಧಿಕಾರಿಗಳು ವಿಠಲ್ ಹೆಗ್ಡೆಯವರ ವಿರುದ್ಧ ಕತ್ತಿ ಮಸೆಯುತ್ತಾ ಸಮಯಕ್ಕಾಗಿ ಕಾಯುತ್ತಿದ್ದರು. ಅದರಲ್ಲೂ ವಿಶೇಷವಾಗಿ ಅಂದಿನ ಉಪವಿಭಾಗಾಧಿಕಾರಿಯಾಗಿದ್ದ ಜಿ. ನಾಯ್ಕರ್‌ರವರು ವಿಠಲ್ ಹೆಗ್ಡೆ ವಿರುದ್ಧ ವಿಶೇಷ ಶತ್ರುತ್ವ ಬೆಳೆಸಿಕೊಂಡಿದ್ದರು. ಏಕೆಂದರೆ, ವಿಠಲ್ ಹೆಗ್ಡೆ ನಾಯಕತ್ವದ ಗಿರಿಜನ ಸಂಘರ್ಷದಲ್ಲಿ ಲಾಠಿ ಚಾರ್ಜ್ ನಡೆದು ಕೊನೆಗೆ ಅದು ಜಿ. ನಾಯ್ಕರ್ ವಿರುದ್ಧವೇ ತಿರುಗಿ ಬಿದ್ದಿತ್ತು. ಹೀಗೆ ವಿಠಲ್ ಹೆಗ್ಡೆ ವಿರುದ್ಧ ವೈಯುಕ್ತಿಕ ದ್ವೇಷ ಮತ್ತು ವೈರತ್ವವನ್ನು ಬೆಳೆಸಿಕೊಂಡ ನಾಯ್ಕರ್ ಈ ಜಮೀನಿನ ವಿಚಾರದಲ್ಲಿ ಬೆಳ್ಳಯ್ಯನವರ ಪರ ತೀರ್ಪಿತ್ತು ವಿಠಲ್ ಹೆಗ್ಡೆ ವಿರುದ್ಧದ ತಮ್ಮ ಸೇಡನ್ನು ಒಂದಷ್ಟು ಮಟ್ಟಿಗೆ ತೀರಿಸಿಕೊಂಡರು.

ಇದಾದ ಮೇಲೆ ವಿಠಲ್ ಹೆಗ್ಡೆಯವರು ಬೆಳ್ಳಯ್ಯನವರಿಗೆ "ನಿಮ್ಮ ಈ 17 ಗುಂಟೆ ಜಮೀನೂ ಬೇಡ, ಈ ಉಪದ್ರವವೂ ಬೇಡ" ಎಂದಿದ್ದರು. ಅದಕ್ಕೆ ಬೆಳ್ಳಯ್ಯನವರು "ನಿಮಗೆ ಮಾತು ಕೊಟ್ಟಿದ್ದೇನೆ. ನೀವು ಇದರಲ್ಲಿ ತೋಟ ಬೆಳೆಸಿದ್ದೀರಾ. ಇದನ್ನು ನೀವೇ ಇಟ್ಟುಕೊಳ್ಳಿ. ನೀವು ಕೊಟ್ಟ ಗದ್ದೆಯನ್ನು ನಾನು ಇಟ್ಟುಕೊಳ್ಳುತ್ತೇನೆ" ಎಂದು ಹೇಳಿದ್ದರು. ಅದಕ್ಕೆ ಒಪ್ಪಿಕೊಂಡು ಕೊನೆಗೆ ಇಬ್ಬರೂ ಸೇರಿ ಜಮೀನಿನ ಬದಲಾವಣೆಗೆ ಸಂಬಂಧಿಸಿದಂತೆ 'ಆಗತ-ಪ್ರತ್ಯಾಗತ ಅಗ್ರಿಮೆಂಟ್' ಮಾಡಿಕೊಂಡರು. ಈ ಅಗ್ರಿಮೆಂಟ್‌ಗೆ ಬೆಳ್ಳಯ್ಯ ಮತ್ತವರ ಮಕ್ಕಳು ಸಹಿಹಾಕಿದ್ದರು. ಇದಕ್ಕೆ ಮೊದಲ ಸಾಕ್ಷಿಯಾಗಿದ್ದವರು ಶೃಂಗೇರಿಯ ದಲಿತ ಮುಖಂಡರಾದ ಕೆ.ಎಂ. ಗೋಪಾಲ್. ಈ ಸಂಬಂಧ ಸರ್ಕಾರದ ವಿಶೇಷ ಅನುಮತಿ ಪಡೆದು ಜಮೀನನ್ನು ಅದಲುಬದಲು ಮಾಡಿಕೊಳ್ಳುವ ಪ್ರಯತ್ನದಲ್ಲಿದ್ದಾಗಲೇ ಬೆಳ್ಳಯ್ಯನವರು ನಿಧನರಾದರು. ಅವರ ಹೆಸರಿನಲ್ಲಿದ್ದ ಜಾಗದ ಖಾತೆ ಬದಲಾಗಿದ್ದರೆ ನಂತರವೂ ಅವರ ಹೆಂಡತಿ ಮತ್ತು ಮಕ್ಕಳ ಮೂಲಕ ಜಮೀನಿನ ದಾಖಲೆ ಸರಿಪಡಿಸಿಕೊಳ್ಳಬಹುದಿತ್ತು.

ಆದರೆ, ಹೆಗ್ಡೆಯವರ ಹೋರಾಟಗಳು, ಪ್ರತಿಭಟನೆಗಳು ಒಂದೆಡೆ ಭ್ರಷ್ಟ ಸರ್ಕಾರಿ ಅಧಿಕಾರಿಗಳಿಗೆ ತಲೆನೋವಾಗಿದ್ದರೆ ಇನ್ನೊಂದೆಡೆ ಸಂಘಪರಿವಾರಕ್ಕೆ ನುಂಗಲಾರದ ತುತ್ತಾಗಿದ್ದವು. ಎಲ್ಲಕ್ಕಿಂತ ಮುಖ್ಯವಾಗಿ ಪೊಲೀಸ್ ಅಧಿಕಾರಿಗಳು ಅವರ ಬಾಯಿಮುಚ್ಚಿಸುವುದಕ್ಕೆ ಬಹಳ ದಿನಗಳಿಂದ ವ್ಯರ್ಥ ಪ್ರಯತ್ನ ನಡೆಸಿದ್ದರು. ಈ ಅವಕಾಶವಾದಿ ಕೂಟ ಹೇಗಾದರೂ ಮಾಡಿ ವಿಠಲ್ ಹೆಗ್ಡೆಯವರನ್ನು ತುಳಿಯುವುದಕ್ಕೆ ಸಮಯ ಸಾಧಿಸುತ್ತಿದ್ದರು. ಈ ಕುರಿತು ಬೆಳ್ಳಯ್ಯನವರ ಮಕ್ಕಳಲ್ಲಿಯೂ, ಉಪವಿಭಾಗಾಧಿಕಾರಿಗಳಲ್ಲಿಯೂ ಹೆಗ್ಡೆಯವರು ಮಾತನಾಡಿದ್ದರು. ವಿವಾದವನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳುವ ಪ್ರಯತ್ನ ಸಾಗಿರುವಾಗಲೇ ಚಿಕ್ಕಮಗಳೂರು ಜಿಲ್ಲಾಡಳಿತ ಮತ್ತು ಪೊಲೀಸರೇ ವಿಶೇಷ ಆಸಕ್ತಿ ವಹಿಸಿ ನವೆಂಬರ್ 2ರಂದು ಬೆಳ್ಳಯ್ಯನವರಿಗೆ ಸೇರಬೇಕಾದ ಜಮೀನು ಬೇಲಿ ಹಾಕಿಸಿ ಅವರ ಮಗ ಶೇಖರಪ್ಪನಿಗೆ ಕೊಡಿಸಿದ್ದಾರೆ. ಇದಕ್ಕೆ ವಿಠಲ್ ಹೆಗ್ಡೆ ಯಾವುದೇ ತಕರಾರು ಮಾಡಿಲ್ಲ, ಅಷ್ಟಿದ್ದರೂ ಜಿಲ್ಲಾಡಳಿತ ದುರುದ್ದೇಶದಿಂದ ವಿಠಲ್ ಹೆಗ್ಡೆಯವರ ಮೇಲೆ ಎಸ್ಸಿ/ಎಸ್ಟಿ ಅಟ್ರಾಸಿಟಿ ಕೇಸನ್ನು ಬುಕ್ ಮಾಡಿದ್ದಾರೆ.

ಕೇಸಿನ ಪ್ರಕಾರ ವಿಠಲ್ ಹೆಗ್ಡೆ ಮಾಡಿದ ಅಟ್ರಾಸಿಟಿ ಏನು?

ಅಟ್ರಾಸಿಟಿ ಎಂಬ ಪದವೇ ದೈಹಿಕ ದೌರ್ಜನ್ಯ ಎಂಬ ಅರ್ಥ ಕೊಡುತ್ತಿದ್ದಾದ್ದರಿಂದ ವಿಠಲ್ ಹೆಗ್ಡೆಯೂ ಈ ರೀತಿ ದೌರ್ಜನ್ಯ ಮಾಡಿದರೆ ಎಂಬ ಪ್ರಶ್ನೆ ಹುಟ್ಟುತ್ತದೆ. ಆದರೆ ಅವರ ಮೇಲೆ ಹಾಕಿರುವುದು ಆ ಕಾಯಿದೆಯ 3(1)(iv)ನೇ ಕಲಂ. ಅದರ ಪ್ರಕಾರ ದಲಿತರಿಗೆ ನೀಡಲಾದ ಜಮೀನನ್ನು ತಪ್ಪು ತಿಳುವಳಿಕೆಯಿಂದ ಉಳುಮೆ ಮಾಡಿದ್ದು ಅಪರಾಧ ಎಂದು ಹೇಳುತ್ತದೆ. ಹೀಗೆ ಅಟ್ರಾಸಿಟಿ ಆಕ್ಟ್ ಎಂದೊಡನೆ ವಿಠಲ್ ಹೆಗ್ಡೆ ದೈಹಿಕ ದೌರ್ಜನ್ಯ ಮಾಡಿದ್ದಾರೆ ಎಂದು ನಡೆಯುತ್ತಿರುವ ಪ್ರಚಾರ ದುರುದ್ದೇಶಪೂರ್ವಕ ಎಂಬುದರಲ್ಲಿ ಸಂಶಯವಿಲ್ಲ.

ಆದರೆ ವಿಷಾದದ ಸಂಗತಿಯೇನೆಂದರೆ ದಲಿತರ ತಪ್ಪು ತಿಳುವಳಿಕೆಯನ್ನು ಇತರರು ದುರುಪಯೋಗಪಡಿಸಿಕೊಳ್ಳಬಾರದೆಂದು ಆಕ್ಟ್‌ನ ಈ ಕಲಮಿನಲ್ಲಿ ಸೇರಿಸಲಾಗಿದೆ. ಅದು ಸರಿಯಾದದ್ದು, ಆದರೆ ಬಳಕೆಯಾಗುತ್ತಿರುವುದು ಪರಸ್ಪರ ಸಮ್ಮತಿಯಿಂದ ಆದ ವ್ಯವಹಾರಕ್ಕೆ ಮತ್ತು ದಲಿತಪರ ಹೆಗ್ಡೆಯನ್ನು ಬಲಿಹಾಕುವುದಕ್ಕೆ! ಈ ಸೂಕ್ಷ್ಮವನ್ನು ಅರ್ಥಮಾಡಿಕೊಳ್ಳದೇ ವ್ಯವಹಾರ ಮಾಡಿದ್ದೇ ವಿಠಲ್‌ಹೆಗ್ಡೆ ಮಾಡಿದ ತಪ್ಪು.


ಮುಂಬರುವ ದಬ್ಬಾಳಿಕೆಗೆ ಮುನ್ನುಡಿ!

ಅಸಲಿಗೆ ವಿಠಲ್ ಹೆಗ್ಡೆಯವರ ಮೇಲೆ ಹಾಕಿದ ಈ ಕೇಸು ಒಂದು ಪ್ರತ್ಯೇಕ ಘಟನೆಯಲ್ಲ, ಬಿಜೆಪಿ ನೇತೃತ್ವದ ಸಂಘಪರಿವಾರದ ಸರ್ಕಾರ ಮುಂದಿನ ದಿನಗಳಲ್ಲಿ ರಾಜ್ಯದ ಪ್ರಜಾತಂತ್ರವಾದಿಗಳ ಮೇಲೆ ಹರಿಬಿಡಲಿರುವ ದಬ್ಬಾಳಿಕಾ ಘಟನಾವಳಿಗಳ ಆರಂಭ. ಅಲ್ಪಸಂಖ್ಯಾತ ಸಮುದಾಯಗಳ ರಕ್ತವನ್ನು ಹರಿಸಿ ಕರ್ನಾಟಕವನ್ನು ಗುಜರಾತ್ ಮಾಡಲು ಹೊರಟಿರುವ ಸಂಘಪರಿವಾರದ ಚಡ್ಡಿಗಳಿಗೆ ಪ್ರಧಾನವಾಗಿ ಅಡ್ಡಿಯಾಗಿರುವವರು ರಾಜ್ಯದ ಪ್ರಜಾತಂತ್ರವಾದಿಗಳು. ಸಂಘಪರಿವಾರದವರು ಕರಾವಳಿಯಲ್ಲಿ ಮುಸ್ಲಿಮರ ಹೆಣಗಳನ್ನು ಉರುಳಿಸಿದಾಗ, ಬಾಬಾಬುಡನ್‌ಗಿರಿಯನ್ನೇ ಕೇಂದ್ರವನ್ನಾಗಿಟ್ಟುಕೊಂಡು ಕೋಮುಗಲಭೆ ಎಬ್ಬಿಸಲು ಪ್ರಯತ್ನಿಸಿದಾಗ, ಸೇತುಸಮುದ್ರಂ ವಿಚಾರವನ್ನಿಟ್ಟುಕೊಂಡು ಸಮುದಾಯಗಳ ಮನಸ್ಸುಗಳ ನಡುವೆ ದ್ವೇಷ ಹರಡಲು ಹೊರಟಾಗ ಅದಕ್ಕೆಲ್ಲ ಪ್ರಬಲ ಪ್ರತಿರೋಧ ಒಡ್ಡಿದವರು ಈ ಪ್ರಜಾತಂತ್ರವಾದಿಗಳೇ. ಅವರ ದನಿಯನ್ನು ಅಡಗಿಸದೇ ತಮ್ಮ ರಕ್ತದೋಕುಳಿ ಸುಲಭವಾಗಿ ಸಾಗುವುದಿಲ್ಲವೆಂಬುದು ಚಡ್ಡಿಗಳಿಗೆ ಅರ್ಥವಾಗಿದೆ. ಆದರೆ ಪ್ರಜಾತಾಂತ್ರಿಕ ದನಿಗಳನ್ನು ಕತ್ತಿ, ಚಾಕು, ಚೂರಿಗಳಿಂದ ಅಡಗಿಸಲು ಸಾಧ್ಯವಿಲ್ಲವಾದ್ದರಿಂದ ಕೇಸು, ಕೋರ್ಟು, ಕಾನೂನುಗಳ ದುರುಪಯೋಗಪಡಿಸಿಕೊಂಡು ಅದನ್ನು ಮಾಡಲಾಗುತ್ತಿದೆ. ಇಂದು ವಿಠಲ್ ಹೆಗ್ಡೆ ವಿರುದ್ಧ ದಾಖಲಿಸಿರುವ ಎಸ್ಸಿ/ಎಸ್ಟಿ ಅಟ್ರಾಸಿಟಿ ಕೇಸು ಈ ದುಷ್ಟ ಆಲೋಚನೆಯ ಭಾಗವಷ್ಟೆ.

ಎಸ್ಸಿ/ಎಸ್ಟಿ ಅಟ್ರಾಸಿಟಿ ತಡೆಯುವ ಕಾನೂನು ಒಂದು ಪ್ರಭಾವಶಾಲಿಯಾದ ಕಾನೂನು. ಅದನ್ನು ಪರಿಣಾಮಕಾರಿಯಾಗಿ ಬಳಸಿದ್ದೇ ಆದಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಎಂದೋ ಕೊನೆಗೊಳ್ಳುತ್ತಿದ್ದವು. ಬೆಂಗಳೂರಿನ ಸುತ್ತ ದಲಿತರ ಜಮೀನನ್ನು ಅಕ್ರಮವಾಗಿ ವಶಪಡಿಸಿಕೊಂಡ ಎಲ್ಲರ ವಿರುದ್ಧ ಈ ಕಾನೂನನ್ನು ಪ್ರಯೋಗಿಸಿದ್ದರೆ ಇಡೀ ದೇವೇಗೌಡರ ಕುಟುಂಬ, ಸಂಘಪರಿವಾರದ ಮಂತ್ರಿಗಳು ಇಷ್ಟು ಹೊತ್ತಿಗೆ ಕಂಬಿಗಳ ಹಿಂದೆ ಬಿದ್ದಿರುತ್ತಿದ್ದರು. ಆದರೆ, ಇಂಥದ್ದೊಂದು ಪ್ರಭಾವಶಾಲಿ ಕಾನೂನು ವಿಠಲ್ ಹೆಗ್ಡೆಯವರಂತಹ ದಲಿತಪರ, ಪ್ರಜಾತಂತ್ರವಾದಿಗಳ, ಪ್ರಗತಿಪರರ ದನಿಯಡಗಿಸುವುದಕ್ಕೆ ದುರ್ಬಳಕೆಯಾಗುತ್ತಿರುವುದು ಭಾರತ ಪ್ರಜಾತಂತ್ರದ ಅಸಲಿ ಮುಖಕ್ಕೆ ಹಿಡಿದಿರುವ ಕನ್ನಡಿ.

ಒಟ್ಟಿನಲ್ಲಿ ಬಿಜೆಪಿಯಂಥ ಕ್ರಿಮಿನಲ್ ಪಕ್ಷವೊಂದು ಕರ್ನಾಟಕ ಸರ್ಕಾರದ ಚುಕ್ಕಾಣಿ ಹಿಡಿಯುತ್ತಿರುವುದರಿಂದ ರಾಜ್ಯದ ಜನತೆಗೆ ದೀಪಾವಳಿಯನ್ನು ಆಚರಿಸುವ ಸಂಭ್ರಮವಿಲ್ಲದಂತಾಗಿದೆ. ಬೆಳಕಿನ ಭವಿಷ್ಯವನ್ನು ತರಬೇಕಿದ್ದ ದೀಪಾವಳಿ ರಾಜ್ಯದ ಜನತೆಯ ಪಾಲಿಗೆ ಕತ್ತಲೆಯ ಯುಗವೊಂದಕ್ಕೆ ನಾಂದಿ ಹಾಡಿರುವುದಂತೂ ಸತ್ಯ.

– ವರದಿಗಾರ



ಹೆಗ್ಡೆ ಮತ್ತು ಬೆಳ್ಳಯ್ಯ ಮಾಡಿಕೊಂಡಿದ್ದ ಆಗತ-ಪ್ರತ್ಯಾಗತ ಒಪ್ಪಂದ ಪತ್ರ


ನೆಲಮಂಗಲದ ಕಿಲ್ಲರ್

ಬೆತ್ತನಗೆರೆ ಸೀನನ ಎನ್‌ಕೌಂಟರ್ ಮಿಸ್?

ಸೆರೆ ಹಂತಕನೊಬ್ಬ ಏಕಾಏಕಿ ಕೋರ್ಟ್‌ಗೆ ಶರಣಾಗಿ ಸೇಫಾಗಿ ಜೈಲು ಸೇರಿಕೊಳ್ಳುತ್ತಾನೆಂದರೆ; ಒಂದೋ ಆತನನ್ನು ಎನ್‌ಕೌಂಟರ್ ಮಾಡಿ ಮುಗಿಸಲು ಪೊಲೀಸರು ಬೆನ್ನಿಗೆ ಬಿದ್ದಿರಬೇಕು. ಅಥವಾ ಜೈಲು ಆತನ ಪಾಲಿಗೆ ಭೂಗತ ಬದುಕಿಗಿಂತಲೂ ಅನುಕೂಲಕರವಾಗಿರಬೇಕು.

ಆದರೆ ನೆಲಮಂಗಲದ ಸೀರಿಯಲ್ ಕಿಲ್ಲರ್ ಬೆತ್ತನಗೆರೆ ಸೀನನ ಮಟ್ಟಿಗೆ ಈ ಎರಡೂ ಸಾಧ್ಯತೆಗಳು ಸತ್ಯವೆ. 'ನೋಡ್ತಾ ಇರಿ, ಇಷ್ಟರಲ್ಲೇ ಬಿನ್ನಮಂಗಲ ಕೃಷ್ಣಪ್ಪನನ್ನು ಮುಗಿಸ್ತೀನಿ. ಅದಕ್ಕೂ ಮುನ್ನ ಅರಿಶಿನಕುಂಟೆ ಪಂಚಾಯ್ತಿ ಅಧ್ಯಕ್ಷ ಚಿಕ್ಕನಾಗನ ತಲೆ ತೆಗೀತೀನಿ. ಆ ನಂತ್ರಾನೇ ನಾನು ಪೊಲೀಸರಿಗೆ ಸರೆಂಡರ್ ಆಗೋದೇ ಹೊರತು ಅದಕ್ಕೂ ಮುನ್ನ ಪೊಲೀಸರೇ ಏಕೆ? ಇಂಡಿಯಾದ ಮಿಲ್ಟ್ರಿ ಬಂದರೂ ನನ್ನನ್ನ ಹಿಡಿಯೋಕ್ಕಾಗಲ್ಲ....!'

ಹಾಗೆಂದು ನೆಲಮಂಗಲದ ಜೆಡಿಎಸ್‌ನ ಕಂಡಕಂಡ ಪುಡಿ ಲೀಡರ್‌ಗಳಿಗೆಲ್ಲ ಫೋನ್ ಮಾಡೀಮಾಡಿ ಹೂಂಕರಿಸುತ್ತಿದ್ದ ಬೆತ್ತನಗೆರೆ ಸೀನ ಇಲ್ಲಿಗೆ ವಾರದ ಹಿಂದೆ ಇದ್ದಕ್ಕಿದ್ದಂತೆ ಬೆಂಗಳೂರಿನ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಸದ್ದಿಲ್ಲದೇ ಶರಣಾಗಿ ಜೈಲು ಸೇರಿಕೊಂಡಿದ್ದಾನೆ. ಒಂದೆಡೆ ಸಿಓಡಿಯ ಚಾಲಾಕಿ ಇನ್ಸ್‌ಪೆಕ್ಟರ್ ಪರಮೇಶ್, ಇನ್ನೊಂದೆಡೆ ಸಿಸಿಬಿಯ ಡಿಸಿಪಿ ರವಿಕಾಂತೇ ಗೌಡ, ಎಸಿಪಿ ಬಿ.ಕೆ. ಶಿವರಾಮ್ ಮತ್ತು ಇನ್ಸ್‌ಪೆಕ್ಟರ್ ಬಾಳೇಗೌಡರ ಪೊಲೀಸ್ ಪಡೆಗಳು ತನ್ನ ಬೆನ್ನಿಗೆ ಬಿದ್ದಿರುವುದು ಆತನಿಗೆ ಚೆನ್ನಾಗಿ ಗೊತ್ತಿತ್ತು. ಸಾಲದ್ದಕ್ಕೆ ದೊಡ್ಡಬಳ್ಳಾಪುರದ ಪೊಲೀಸರು, ಜೊತೆಗೆ ನೆಲಮಂಗಲ ಮತ್ತು ದಾಬಸ್‌ಪೇಟೆಯ ಪೊಲೀಸರ ಕಾಟ. ಈ ಪೈಕಿ ಸಿಸಿಬಿ ಮತ್ತು ಸಿಓಡಿಯ ಯಾವ ಪೊಲೀಸ್ ತಂಡವಾದರೂ ಸಿಕ್ಕರೆ ಸೀನನನ್ನು ಗುಂಡಿಟ್ಟು ಮಲಗಿಸಿಬಿಡುತ್ತಿತ್ತು.


ಚೆನ್ನಿಗಪ್ಪ

ಬಚಾವಾಗಲು ಸೀನನಿಗೆ ಬೇರೆ ದಾರಿ ತಾನೇ ಎಲ್ಲಿತ್ತು? ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಷ್ಟೂ ಕಾಲ, ಮಂತ್ರಿ ಚೆನ್ನಿಗಪ್ಪ ಅಧಿಕಾರದಲ್ಲಿದ್ದಷ್ಟೂ ದಿನ ಕೊರಟಗೆರೆ, ನೆಲಮಂಗಲ, ದಾಬಸ್‌ಪೇಟೆ ಮತ್ತು ಬೆಂಗಳೂರಿನ ಪೀಣ್ಯದ ಗಡಿಯುದ್ದಕ್ಕೂ ಕಿರೀಟಹೀನ ದೊರೆಯಂತೆ ಮೆರೆದವನು ಬೆತ್ತನಗೆರೆ ಸೀನ. ಬಹುಶಃ ಹೊಸಕೋಟೆಯ ಕುಖ್ಯಾತ ಕೊಲೆ ಪಾತಕಿ ಕೋಡಿಹಳ್ಳಿ ಸೊಣ್ಣಪ್ಪನಂಥ ಬಚ್ಚೇಗೌಡನ ಬಂಟನ ನಂತರ ಬೆಂಗಳೂರು ಗ್ರಾಮಾಂತರ ಕಂಡ ಅತ್ಯಂತ ಖತರ್‌ನಾಕ್ ಪಾತಕಿಯೇ ಬೆತ್ತನಗೆರೆ ಸೀನ. ಸಾಲುಸಾಲು ಹತ್ಯೆಗಳ ತರುವಾಯ ಹೊಸಕೋಟೆ ತಣ್ಣಗಾಯಿತಾದರೂ ಅಲ್ಲಿನ ರಕ್ತಪಿಪಾಸು ಪ್ರವೃತ್ತಿ ಕ್ರಮೇಣ ನೆಲಮಂಗಲಕ್ಕೆ ವರ್ಗಾವಣೆಗೊಂಡಿತು.


ಅಷ್ಟಕ್ಕೂ ಬೆಂಗಳೂರು ಸೆರಗಿನ ನೆಲಮಂಗಲ ಹಿಂದೆಂದೂ ಈ ಥರದ ರಾಜಕೀಯ ಹತ್ಯೆಗಳನ್ನು ಕಂಡಿರಲಿಲ್ಲ. ಮೂಲತಃ ನೆಲಮಂಗಲ ಸಮೀಪದ ಬೆತ್ತನಗೆರೆಯ ಹಾಲು ಉತ್ಪಾದಕರ ಸಂಘದ ಸೆಕ್ರೆಟರಿ ಹನುಮಂತಯ್ಯನ ಮಗ ಶ್ರೀನಿವಾಸ್ ಉರ್ಫ್ ಸೀನ ಪ್ರಾರಂಭದಲ್ಲಿ ಸಣ್ಣಪುಟ್ಟ ಕಾಂಟ್ರಾಕ್ಟ್ ಮಾಡಿಕೊಂಡಿದ್ದ. ಬೆತ್ತನಗೆರೆಯಲ್ಲಿ ಕುರುಬರದೇ ಹೆಚ್ಚಿನ ಸಂಖ್ಯೆಯಾದರೂ ಸೀನನ ಅಪ್ಪ ಹನುಮಂತಯ್ಯನನ್ನು ಡೈರಿ ಸೆಕ್ರೆಟರಿಯಾಗಿ ಗೆಲ್ಲಿಸುವಾಗಲೂ ಅಲ್ಲಿನ ಕುರುಬರು ಜಾತಿ ನೋಡಿರಲಿಲ್ಲ.

ಆದೇ ಹೊತ್ತಿಗೆ ಸೀನ ಕೂಡ ಜೆಡಿಎಸ್‌ನಿಂದ ಹುಸ್ಕೂರು ಪಂಚಾಯ್ತಿಗೆ ನಿಂತು ಗೆದ್ದುಬಿಟ್ಟ.

ಆದೇ ಹೊತ್ತಿಗೆ ಬೆತ್ತನಗೆರೆಯ ಹಾಲು ಉತ್ಪಾದಕರ ಸಂಘಕ್ಕೆ ಚುನಾವಣೆ ಬಂತು. ಸಹಜವಾಗೇ ಒಕ್ಕಲಿಗರೆಲ್ಲ ಸೀನನ ಅಪ್ಪ ಹನುಮಂತಯ್ಯನ ಬೆಂಬಲಕ್ಕೆ ನಿಂತರೆ ಮೂಲತಃ ಕಾಂಗ್ರೆಸ್ ಬೆಂಬಲಿಗರಾದ ಕುರುಬರು ಬಾಳೇಮಂಡಿ ಬಸವಯ್ಯನನ್ನು ಬೆಂಬಲಿಸಿ ಗೆಲ್ಲಿಸಿಬಿಟ್ಟರು. ಸೋತಿದ್ದಕ್ಕೆ ಕುರುಬರ ವಂಶವನ್ನೇ ನಿರ್ವಂಶ ಮಾಡುತ್ತೇನೆಂದು ಶಪಥ ಮಾಡಿದ ಸೀನನ ಪಾಲಿಗೆ ಅದಾಗಿ ತಿಂಗಳಿಗೇ ಬಂದ ಊರಹಬ್ಬ ಗಾಯದ ಮೇಲೆಳೆದ ಬರೆಯಂತಾಯಿತು. ಆ ಊರಿನ ಕುರುಬರ‍್ಯಾರೂ ಸೀನನ ಯಜಮಾನಿಕೆಯ ಊರಹಬ್ಬಕ್ಕೆ ಸೊಪ್ಪು ಹಾಕಲೇ ಇಲ್ಲ.

ಅದರ ಪರಿಣಾಮ ಅದೆಷ್ಟು ಭೀಕರವಾಗಿತ್ತೆಂದರೆ, 2005 ರ ಜೂನ್ 16 ರಂದು ಬಸವಯ್ಯನ ನೆಲಮಂಗಲದ ಬಾಳೇಕಾಯಿ ಮಂಡಿಗೇ ನುಗ್ಗಿದ ಸೀನನ ಗ್ಯಾಂಗ್ ಡೈರಿ ಸೆಕ್ರೆಟರಿ ಬಸವಯ್ಯನನ್ನು ಅಮಾನುಷವಾಗಿ ಕೊಚ್ಚಿ ಹಾಕಿತ್ತು. ಗ್ಯಾಂಗ್ ಲೀಡರ್ ಸೀನನ ಜೊತೆ ಆತನ ಬಲಗೈ ಬಂಟ ಶಂಕ್ರ, ಸಹಚರರಾದ ಅನಂತ, ಬೀರಯ್ಯ, ಮುನಿರಾಜು ಮುಂತಾದ ಲೋಕಲ್ ಕ್ರಿಮಿನಲ್‌ಗಳ ಹಿಂಡೇ ಬಸವಯ್ಯನ ಹತ್ಯೆಯಲ್ಲಿ ಭಾಗವಹಿಸಿತ್ತು. ಇದನ್ನು ಕಣ್ಣಾರೆ ಕಂಡಿದ್ದ ವಕೀಲ ದೇವರಾಜು ಮತ್ತು ಪಂಚಾಯ್ತಿ ಸದಸ್ಯ ಕೃಷ್ಣಮೂರ್ತಿ ಕೂಡ ಜಾತಿಯಲ್ಲಿ ಕುರುಬರೆ. ಜೆಡಿಎಸ್ ಬೇರೆ ಅಧಿಕಾರದಲ್ಲಿತ್ತು. ನೆಲಮಂಗಲಕ್ಕೆ ಇನ್ಸ್‌ಪೆಕ್ಟರ್ ಆಗಿದ್ದ ಎಂ.ಜಿ. ರಾಮಕೃಷ್ಣ ಹೇಳಿಕೇಳಿ ಮಂತ್ರಿ ಚೆನ್ನಿಗಪ್ಪನ ಆಜ್ಞಾಪಾಲಕ.

ಯಾರು ಸೀನನನ್ನು ಹಿಡಿದು ಜೈಲಿಗೆ ಹಾಕಬೇಕಿತ್ತೋ ಅದೇ ಇನ್ಸ್‌ಪೆಕ್ಟರ್ ರಾಮಕೃಷ್ಣ ಹಂತಕ ಸೀನನ್ನು ಕಂಡೂ ಕಾಣದಂತಿದ್ದುದ್ದರ ಫಲವೇ ಗುಟ್ಟೇಪಾಳ್ಯದ ಜೋಡಿ ಕೊಲೆ!


ರವಿಕಾಂತೇಗೌಡ

ಅದಕ್ಕೆ ತಕ್ಕಂತೆ ಸೀನನನ್ನು ಸೆರೆಹಿಡಿಯಲು ಅಹೋರಾತ್ರಿ ಹೆಣಗಾಡುತ್ತಿದ್ದ ನೆಲಮಂಗಲದ ನಿಷ್ಠುರಿ ಸಬ್ ಇನ್ಸ್‌ಪೆಕ್ಟರ್ ಪರಮೇಶ್‌ರನ್ನು ಚೆನ್ನಿಗಪ್ಪನ ಮಗ ಗೌರಿಶಂಕರನನ್ನು ಛೂಬಿಟ್ಟು ಸೀನನೇ ಎತ್ತಂಗಡಿ ಮಾಡಿಸಿದ್ದ.


ಸೀನನನ್ನು ಹಿಡಿಯಲು ಇನ್ಸ್‌ಪೆಕ್ಟರ್ ಪರಮೇಶ್ ಆತನ ಅಕ್ಕನ ಗಂಡ ಯಡಾಳುದೇವಿಯ ತೋಟಕ್ಕೋ, ಕಡಬಗೆರೆಯ ಮಚ್ಚಿನ ಹಂತಕ ಪಾಯ್ಸನ್‌ರಾಮನ ಮನೆಗೋ ರೇಡು ಬಿದ್ದರೆ, ಅಚಾನಕ್ಕಾಗಿ ಅವೆಲ್ಲವೂ ಜೆಡಿಎಸ್ ಅಡ್ಡೆಗಳೇ ಆಗಿರುತ್ತಿದ್ದವು.

ಅಷ್ಟಕ್ಕೂ ಸೀನನ ಎಲ್ಲಾ ರಕ್ತ ಲಾಲಸೆಗಳ ಹಿಂದಿದ್ದದ್ದೇ ಆತನ ಭಾವ ಯಡಾಳುದೇವಿ ಮತ್ತು ಚೆನ್ನಿಗಪ್ಪನ ಮಗ ಗೌರಿಶಂಕ್ರ. ಎತ್ತಂಗಡಿಯಾದ ಪರಮೇಶ್ ಜಾಗಕ್ಕೆ ಎಸ್‌ಐ ಆಗಿ ಬಂದ ವಿರೂಪಾಕ್ಷಸ್ವಾಮಿ ಕೂಡ ಗೌರಿಶಂಕ್ರನ ನಂಬಿಕಸ್ತ ಬಂಟನೆ. ಸಾಲದ್ದಕ್ಕೆ ಪಕ್ಕದ ದೊಡ್ಡಬಳ್ಳಾಪುರಕ್ಕೆ ಇನ್ಸ್‌ಪೆಕ್ಟರ್ ಆಗಿದ್ದ ಲಕ್ಷ್ಮಣ್ ಆ ಜಾಗಕ್ಕೆ ಬಂದಿದ್ದೇ ಚೆನ್ನಿಗಪ್ಪನ ಮರ್ಜಿಯಿಂದ!

ಅಲ್ಲಿಗೆ ಸೀನನ ದಾರಿ ಸಲೀಸಾಯಿತು. ಅದು ಬಾಳೇಮಂಡಿ ಬಸವಯ್ಯನ ಹತ್ಯೆಗೆ ಸಾಕ್ಷಿದಾರರಾಗಿದ್ದ ವಕೀಲ ದೇವರಾಜು ಮತ್ತು ಗ್ರಾ.ಪಂ. ಸದಸ್ಯ ಕೃಷ್ಣಮೂರ್ತಿಗೆಲ್ಲಿ ಗೊತ್ತಾಗಬೇಕು?

ಅದು 2006 ರ ಮೇ ಐದು. ದೊಡ್ಡಬಳ್ಳಾಪುರದ ಯಾವುದೋ ನೆಂಟರ ಮನೆಗೆ ಊಟಕ್ಕೆಂದು ಹೋಗಿದ್ದ ದೇವರಾಜು ಮತ್ತು ಕೃಷ್ಣಮೂರ್ತಿ ಬೈಕಲ್ಲಿ ವಾಪಸ್ಸಾಗುತ್ತಿದ್ದುದ್ದನ್ನೇ ಹೊಂಚುಹಾಕಿ ರಾಮದೇವನಹಳ್ಳಿಯ ಗುಟ್ಟೇಪಾಳ್ಯದ ಬಳಿ ಇಬ್ಬರನ್ನೂ ಸೀನನ ಗ್ಯಾಂಗ್ ಕೊಚ್ಚಿ ಹಾಕಿತು. ಮೊದಲು ಬಸವಯ್ಯನ ಹತ್ಯೆ ಆನಂತರ ಅದಕ್ಕೆ ಸಾಕ್ಷಿಗಳಾಗಿದ್ದ ವಕೀಲ ದೇವರಾಜು ಮತ್ತು ಕೃಷ್ಣಮೂರ್ತಿಯ ಜೋಡಿ ಕೊಲೆ; ಹೀಗೆ ಒಂದೇ ವರ್ಷದಲ್ಲಿ ಬೆತ್ತನಗೆರೆ ಸೀನ ಪೊಲೀಸರಿಂದ ತಲೆ ಮರೆಸಿಕೊಂಡಿದ್ದೇ ಮೂವರು ಕಾಂಗ್ರೆಸ್ ನಾಯಕರನ್ನು ಕೊಂದು ಹಾಕಿದ್ದ.

ದುರಂತವೆಂದರೆ ಬೆಂಗಳೂರು



ಬೆತ್ತನಗೆರೆ ಸೀನ

ಗ್ರಾಮಾಂತರಕ್ಕೆ ಅಡಿಷನಲ್ ಎಸ್ಪಿಯಾಗಿದ್ದ ಎಲ್.ಜಿ. ಕೃಷ್ಣಪ್ಪನವರ ಪತ್ನಿಯೇ ಜೆಡಿಎಸ್‌ನ ಪಂಚಾಯ್ತಿ ಸದಸ್ಯೆ!

ಒಂದಲ್ಲ ಮೂರು ಕೊಲೆಗಳನ್ನು ಎಸಗಿಯೂ ಅರೆಸ್ಟಾಗದೇ ಪೊಲೀಸರ ಜೊತೆ ಕಣ್ಣಾಮುಚ್ಚಾಲೆ ಆಡಿಕೊಂಡಿದ್ದ ಸೀನ ಜೋಡಿ ಕೊಲೆ ಮಾಡಿದ ಒಂದೇ ವರ್ಷಕ್ಕೆ ತಾಲ್ಲೂಕು ಕುರುಬರ ಸಂಘದ ಅಧ್ಯಕ್ಷ ಮತ್ತು ತಾಲ್ಲೂಕು ಪಂಚಾಯ್ತಿ ಸದಸ್ಯ ಗಂಗೊಂಡನಹಳ್ಳಿ ಕೃಷ್ಣಮೂರ್ತಿಯನ್ನು ನೈಸ್ ರಸ್ತೆಯಲ್ಲಿ ಆಕ್ಸಿಡೆಂಟ್ ಮಾಡಿಸಿ ಕೊಲ್ಲಿಸಿಬಿಟ್ಟ. ನೆಲಮಂಗಲ ಪೊಲೀಸರು ಇದನ್ನು ಆಕ್ಸಿಡೆಂಟ್ ಎಂದೇ ಮುಚ್ಚಿ ಹಾಕಿದ್ದಾರೆಂ[...] ಕಾಂಗ್ರೆಸ್ ಬೀದಿಗಿಳಿದರೆ ಅದರ ನೇತೃತ್ವ ವಹಿಸಿ[...] ಅರಿಶಿನಕುಂಟೆ ಪಂಚಾಯ್ತಿ ಅಧ್ಯಕ್ಷ ಚಿಕ್ಕನಾಗಯ[...] ಆತನನ್ನೇ ಮುಗಿಸಿಬಿಟ್ಟರೆ ನೆಲಮಂಗಲದ ಕುರುಬ[...] ಸೊಲ್ಲಡಗುತ್ತದೆ ಎಂದೇ ಸೀನ ಚಿಕ್ಕನಾಗಯ್ಯನ ಹ[...] ಹೊಂಚು ಹಾಕುತ್ತಲೇ ಇದ್ದ.

ರಾ. ಸೋಮನಾಥ್

ಯಾವತ್ತು ಚಿಕ್ಕನಾಗಯ್ಯ ಹುಷಾರಾದನೋ ಅ[...] ಬದಲಿಗೆ ತಾಲ್ಲೂಕು ಕುರುಬರ ಸಂಘಕ್ಕೆ ಹೊ[...] ಅಧ್ಯಕ್ಷನಾದ ಲ್ಯಾಂಡ್ ಡೀಲರ್ ಪುಟ್ಟ ಸಂಪಯ[...] ಮೇಲೆ ಸೀನನ ಕಣ್ಣುಬಿದ್ದಿದೆ. ಕುರುಬರ ಸಂಘ[...] ಅಧ್ಯಕ್ಷನಾಗಿದ್ದ ಕೃಷ್ಣಮೂರ್ತಿ ನೈಸ್ ರಸ್ತೆಯಲ್ಲಿ ಆಕ್ಸಿಡೆ[...] ಗೀಡಾಗಿ ಸತ್ತ ಮೂರೇ ತಿಂಗಳಲ್ಲಿ ಅಂದರೆ 2007 ಆಗಸ್ಟ್ 30 ರಂದು ಹೊಸ ಅಧ್ಯಕ್ಷ ಪುಟ್ಟ ಸಂಪಯ್ಯನ[...] ಬೆಂಗಳೂರಿನ ಶ್ರೀರಾಂಪುರದ ಕೆಲ ರೌಡಿಗಳಿ[...] ನಡುರಸ್ತೆಯಲ್ಲೇ ಕೊಲೆಯಾಗಿದ್ದಾನೆ. ಇದನ್ನೂ ಸೀನ[...] ಮಾಡಿಸಿದ್ದಾನೆಂದು ಕಾಂಗ್ರೆಸ್ ಆರೋಪಿಸಿದೆ. ಆದರೆ ನೆಲಮಂಗಲ ಎಸ್‌ಐ ವಿರೂಪಾಕ್ಷಸ್ವಾಮಿ ಅದನ್ನು ಲ್ಯಾಂಡ್ ಡೀಲಿನ ವಿವಾದವೆಂದು ತಿಪ್ಪೆಸಾರಿಸಿಬಿಟ್ಟ. ಯಾವುದೋ ಹಣಕಾಸಿನ ವಿವಾದದಲ್ಲಿ ಬೆಂಗಳೂ[...] ಶ್ರೀರಾಂಪುರದ ಫೈನಾನ್ಸಿಯರ್ ಜಯರಾಮ್ ಎಂಬ[...] ಪುಟ್ಟ ಸಂಪಯ್ಯನನ್ನು ಕೊಲ್ಲಿಸಿದ್ದ. ಬಹುಶಃ ಜ[...] ರಾಮ್‌ನನ್ನು ಹಿಡಿದು ಬಾಯಿಬಿಡಿಸಿದ್ದರೆ ಆತನಿ[...] ಬೆತ್ತನಗೆರೆ ಸೀನನಿಗೂ ಇದ್ದ ಪಾತಕನಂಟು ಬ[...] ಲಾಗುತ್ತಿತ್ತೇನೋ!


ಪಾಯ್ಸನ್ ರಾಮ

ಆದರೆ ನೆಲಮಂಗಲ ಪೊಲೀಸರು ಫೈನಾನ್ಸಿಯ[...] ಜಯರಾಮನನ್ನು ಎಳೆತಂದು ಬಾಯಿಬಿಡಿಸುವುದಿರ[...] ಆತನನ್ನು ಹುಡುಕುವ ಗೋಜಿಗೇ ಹೋಗಲಿಲ್ಲ.

ಹೆಚ್ಚುಕಮ್ಮಿ ಎರಡೇ ಎರಡು ವರ್ಷಗಳ ಅವ[...] ಯಲ್ಲಿ ಪ್ರತ್ಯಕ್ಷವೋ ಪರೋಕ್ಷವೋ ನೆಲಮಂಗಲ[...]

ಮುಂದಿನ ಟಾರ್ಗೆಟ್ ಚಿಕ್ಕನಾಗಯ್ಯನೋ, ಕೃಷ್ಣಪ್ಪನೋ?


ಬಹುಶಃ ಜೆಡಿಎಸ್ ಮತ್ತೆ ಅಧಿಕಾರಕ್ಕೆ ಬರದಿದ್ದರೆ ನೆಲಮಂಗಲದ ಕಾಂಗ್ರೆಸ್ಸಿಗರ‍್ಯಾರೂ ಈ ರೀತಿ ಎದೆಬಡಿದುಕೊಳ್ಳುತ್ತಿರಲಿಲ್ಲ. ಈಗ ಬೆತ್ತನಗೆರೆ ಸೀನ ಹಿಂದಿಗಿಂತಲೂ ಸೇಫು ಮತ್ತು ಸರ್ವಶಕ್ತ. ಪೊಲೀಸರಿಂದ ತಲೆ ಮರೆಸಿಕೊಂಡಿದ್ದೇ ಮೂರು ವರ್ಷಗಳ ಅವಧಿಯಲ್ಲಿ ಐದು ಭೀಕರ ಹತ್ಯೆಗಳನ್ನೆಸಗಿದವನಿಗೆ ಜೈಲಲ್ಲಿ ಕೂತು ಶಿಷ್ಯ ಶಂಕ್ರನನ್ನು ಛೂಬಿಟ್ಟು ಜಿಲ್ಲಾ ಪಂಚಾಯ್ತಿ ಸದಸ್ಯ ಬಿನ್ನಮಂಗಲ ಕೃಷ್ಣಪ್ಪನನ್ನೋ, ಅರಿಶಿನಕುಂಟೆ ಪಂಚಾಯ್ತಿ ಅಧ್ಯಕ್ಷ ಚಿಕ್ಕನಾಗಯ್ಯನನ್ನೋ ಮುಗಿಸುವುದು ಎಷ್ಟು ಹೊತ್ತು?

ಹಂತಕ ಸೀನನ ಬೆನ್ನಿಗಿರುವವನು ಮಂತ್ರಿ ಚೆನ್ನಿಗಪ್ಪನ ಮಗ ಗೌರಿಶಂಕ್ರ. ಆತ ನೆಲಮಂಗಲದ ಎಲ್ಲಾ ರಕ್ತಪಾತದ ಅಸಲೀ ಕಾರಣಕರ್ತ. ಸೀನನ ಭಾವ ಯಡಾಳುದೇವಿ ಮತ್ತು ಗೌರಿಶಂಕ್ರರ ಜೊತೆ ಸೀನ ನೆಲಮಂಗಲದ ಡಾಬಾ ಒಂದರಲ್ಲಿ ಸಬ್‌ಇನ್ಸ್‌ಪೆಕ್ಟರ್ ವಿರೂಪಾಕ್ಷನ ಜೊತೆ ಪಾರ್ಟಿ ಮಾಡಿದ್ದು, ಜೊತೆಜೊತೆಗೇ ಇವರೆಲ್ಲ ಧರ್ಮಸ್ಥಳ ಪ್ರವಾಸಕ್ಕೆ ಹೊರಟಿದ್ದು, ಗೌರಿಶಂಕ್ರನ ಎಲ್ಲಾ ಲ್ಯಾಂಡ್ ಗೂಂಡಾಗಿರಿಗೆ ಸೀನನ ಹಂತಕ ಪಡೆಯೇ ಬೆಂಗಾವಲಾಗಿರುವುದು; ಯಾವುದೂ ಸುಳ್ಳಲ್ಲ. ಚೆನ್ನಿಗಪ್ಪನ ಮಗನೇ ಅಮಾಯಕರನ್ನು ಎಳೆದೊಯ್ದು ಚಿತ್ರಹಿಂಸೆ ಕೊಟ್ಟು ಅವರ ಆಸ್ತಿ ದೋಚುತ್ತಾನೆಂದರೆ, ಆತನ ವಿರುದ್ಧ ಪೀಣ್ಯ-ನೆಲಮಂಗಲ ಪೊಲೀಸ್ ಠಾಣೆಗಳಲ್ಲಿ ಸಣ್ಣದೊಂದು ಕಂಪ್ಲೆಂಟ್ ಕೂಡ ದಾಖಲಾಗುವುದಿಲ್ಲವೆಂದರೆ; ಇನ್ನು ಅಲ್ಲಿ ಕಾನೂನಿಗಾಗಲಿ, ನ್ಯಾಯಕ್ಕಾಗಲಿ ಅರ್ಥವುಂಟೆ?

ಯಾವುದಕ್ಕೂ ಚಿಕ್ಕನಾಗಯ್ಯ ಮತ್ತು ಬಿನ್ನಮಂಗಲ ಕೃಷ್ಣಪ್ಪ ಹುಷಾರಾಗುವುದೊಳಿತು. ಏಕೆಂದರೆ ಇದು ಜೆಡಿಎಸ್-ಬಿಜೆಪಿ ಸರ್ಕಾರ. ಚೆನ್ನಿಗಪ್ಪನ ಹಂತಕ ಮಗನ ಸಾಮ್ರಾಜ್ಯದಲ್ಲಿ ಪೊಲೀಸರೂ ಪಾತಕಿಗಳೆ, ರೌಡಿಗಳೂ ಜನನಾಯಕರೆ!


ಗೌರಿಶಂಕ್ರ

ಇವರು ಕುರುಬರ ನಾಯಕರ ಹತ್ಯೆಗೆ ಚಿತ್ತನಗೆರೆ ಸೀನನೇ ಕಾರಣನಾಗಿದ್ದ. ಹಾಗಿದ್ದೂ ಆತನನ್ನು ಹಿಡಿಯುವಲ್ಲಿ ಪೊಲೀಸರು ವೈಫಲ್ಯಗೊಂಡಿದ್ದಕ್ಕೆ ಮಂತ್ರಿ ಚೆನ್ನಿಗಪ್ಪನೇ ಕಾರಣವೆಂದು ಕಾಂಗ್ರೆಸ್ ಎಲ್ಲೆಂದರಲ್ಲಿ ಆರೋಪಿಸಿತ್ತು. ಇಷ್ಟೆಲ್ಲದರ ಮಧ್ಯೆಯೂ ಸೀನನಿಗೆ ಅಪಶಕುನವೊಂದು ಕಾಡುತ್ತಲೇ ಇತ್ತು. ಒಂದೆಡೆ ಬಾಳೇಮಂಡಿ ಬಸವಯ್ಯನ ಹತ್ಯೆಯನ್ನು ಸರ್ಕಾರ ಸಿಓಡಿಗೆ ಒಪ್ಪಿಸಿದ್ದರೆ, ಇನ್ನೊಂದೆಡೆ ಇನ್ಸ್‌ಪೆಕ್ಟರ್ ಆಗಿ ಬಡ್ತಿ ಪಡೆದ ಪರಮೇಶ್ ಕೂಡ ಸಿಓಡಿಗೆ ವರ್ಗಾವಣೆಗೊಂಡು ಅದೇ ಬಸವಯ್ಯನ ಕೊಲೆ ಕೇಸಿನ ತನಿಖೆಗೆ ನಿಂತುಬಿಟ್ಟರು.



ಹಂತಕ ಶಂಕರ

ಯಾವತ್ತು ಜೆಡಿಎಸ್-ಬಿಜೆಪಿ ಸರ್ಕಾರವೇ ಬಿದ್ದುಹೋಯ್ತೋ ಸೀನನ ಅಸಲೀ ಗಾಡ್‌ಫಾದರ್ ಚೆನ್ನಿಗಪ್ಪನ ಮಗ ಗೌರಿಶಂಕರನ ಪೊಲೀಸ್ ಆಳ್ವಿಕೆಯೂ ಅಂತ್ಯಗೊಂಡಿತ್ತು. ಇದೇ ಸಮಯ ಕಾದ ಇನ್ಸ್‌ಪೆಕ್ಟರ್ ಪರಮೇಶ್ ಬೆಂಗಳೂರಿನ ಜಂಟಿ ಪೊಲೀಸ್ ಕಮೀಷನರ್ ಗೋಪಾಲ್ ಹೊಸೂರ್‌ರನ್ನು ಕಂಡು ಸೀನನ ಹಿನ್ನೆಲೆ ವಿವರಿಸಿದ್ದಾರೆ. ಹೊಸೂರ್ ಅದನ್ನು ಕಮೀಷನರ್ ನೀಲಂ ಅಚ್ಯುತರಾವ್‌ಗೆ ಮುಟ್ಟಿಸಿದ್ದಾರೆ. ಅಲ್ಲಿಗೆ ಸಿಸಿಬಿಯ ಡಿಸಿಪಿ ರವಿಕಾಂತೇಗೌಡರ ಪಡೆ ಸೀನನ ಎನ್‌ಕೌಂಟರ್‌ಗೆ ಸಜ್ಜಾಗಿದೆ. ಒಂದೆಡೆ ಸಿಸಿಬಿಯ ಇನ್ಸ್‌ಪೆಕ್ಟರ್ ಬಾಳೇಗೌಡರ ಪಡೆ, ಇನ್ನೊಂದೆಡೆ ಸಿಓಡಿಯ ಪರಮೇಶ್ ತಂಡ ಎನ್‌ಕೌಂಟರ್‌ಗೆ ಸಜ್ಜಾಗಿಯೇ ಸೀನನ ಬೆನ್ನಿಗೆ ಬಿದ್ದಿದೆ.



ಚಿಕ್ಕನಾಗಯ್ಯ

ಇನ್ನು ತನ್ನನ್ನು ನೆಲಮಂಗಲ ಪೊಲೀಸರಾಗಲಿ, ಚೆನ್ನಿಗಪ್ಪನ ಮಗ ಗೌರಿಶಂಕರನಾಗಲಿ ಬಚಾವು ಮಾಡುವುದು ಸಾಧ್ಯವಿಲ್ಲವೆಂಬುದು ಸೀನನಿಗೆ ಮನದಟ್ಟಾಗುತ್ತಿದ್ದಂತೆ ಸೇಫಾಗಿ ಜೈಲು ಸೇರಿಕೊಳ್ಳುವ ಮಾಸ್ಟರ್ ಪ್ಲಾನ್ ಕೂಡ ರೆಡಿಯಾಗಿದೆ. ಯಾವುದೋ ಹಳೇ ಚೀಟಿಂಗ್ ಕೇಸಿನಲ್ಲಿ ಸೀನನಿಗೆ ಪೀಣ್ಯ ಪೊಲೀಸ್ ಠಾಣೆಯಿಂದ ವಾರೆಂಟ್ ಜಾರಿಯಾಗಿತ್ತು. ಅದನ್ನೇ ಕಾದಿದ್ದು ಮೊನ್ನೆ ಅಂದರೆ 2007 ರ ಅಕ್ಟೋಬರ್ 27 ರಂದು ಸದ್ದಿಲ್ಲದೇ ಸೀನ ಬೆಂಗಳೂರಿನ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಸರೆಂಡರಾಗಿ ಬಿಟ್ಟ. ತಮಾಷೆಯೆಂದರೆ ಹಾಗೇ ಕೋರ್ಟಿಗೆ ಶರಣಾದ ಸೀನನನ್ನು ನೆಲಮಂಗಲದ ಎಸ್‌ಐ ವಿರೂಪಾಕ್ಷನೇ ಸೇಫಾಗಿ ಪರಪ್ಪನ ಅಗ್ರಹಾರ ಜೈಲಿಗೆ ಬಿಟ್ಟುಬಂದ!



ಕೊಲೆಯಾದ ವಕೀಲ ದೇವರಾಜು ಮತ್ತು ಚಿತ್ತನಗೆರೆ ಗ್ರಾ.ಪಂ. ಸದಸ್ಯ ಕೃಷ್ಣಮೂರ್ತಿ

ಅಲ್ಲಿಗೆ ಮೂರು ವರ್ಷಗಳ ಸೀನನ ಸರಣಿ ಹತ್ಯಾಕಾಂಡಕ್ಕೂ ಪೊಲೀಸರ ಕೈಗೆ ಸಿಗದೇ ಭೂಗತನಾಗಿಯೇ ಇದ್ದು ಆತ ನಡೆಸುತ್ತಿದ್ದ ಹಾವಳಿಗೂ ಅಂತ್ಯ ಸಿಕ್ಕಿತೆ? ನೆಲಮಂಗಲದ ರಕ್ತಪಾತ ಇಷ್ಟಕ್ಕೇ ನಿಲ್ಲುತ್ತಾ?

ಹಕೀಕತ್ತೆಂದರೆ ಸೀನನ ಎನ್‌ಕೌಂಟರ್ ಮಾತ್ರ ತಪ್ಪಿದೆಯೇ ಹೊರತು ನೆಲಮಂಗಲಕ್ಕೆ ನೆಮ್ಮದಿಯಿಲ್ಲ. ಏಕೆಂದರೆ ಸೀನ ಜೈಲು ಪಾಲಾಗುವುದಕ್ಕೂ ಆತನ ಬಲಗೈ ಬಂಟ ಬಸವಯ್ಯನ ಹಂತಕ ಶಂಕ್ರ ಈಗ ಜೈಲಿಂದ ಬೇಳುವುದಕ್ಕೂ ಮತ್ತು ಜೆಡಿಎಸ್-ಬಿಜೆಪಿ ಕೂಟ ಮತ್ತೆ ಅಧಿಕಾರಕ್ಕೆ ಬರುವುದಕ್ಕೂ ಒಂದೇ ಆಗಿದೆ. ಚೆನ್ನಿಗಪ್ಪ ಮತ್ತೆ ಮಂತ್ರಿಯಾಗುತ್ತಾರೆ. ಅವರ ಮಗ ಗೌರಿಶಂಕರನ ಆಜ್ಞಾಪಾಲಕರೇ ಪೊಲೀಸರಾಗುತ್ತಾರೆ. ಜೈಲೊಳಗಿದ್ದೇ ಶಿಷ್ಯ ಶಂಕ್ರನ ಮೂಲಕ ತನ್ನ ಎದುರಾಳಿಗಳ ತಲೆ ತೆಗೆಸುವುದು ಶೀನನಿಗೆ ಎಷ್ಟು ಹೊತ್ತು?

ನೆಲಮಂಗಲಕಿನ್ನು ಯಾರು ದಿಕ್ಕು?

'ದೇವೇಗೌಡ ಧೂಮಕೇತು ಇದ್ದಂಗೆ ಕಂಡ್ರೀ'

ಥೂತ್ತೇರಿ

ಯಾಹೂ

ನಮ್ಮಿಂದ ಒಂದು ಪ್ರಮಾದವಾಗಿದೆ, ವಾಚಕ ಮಹಾಶಯರು ಕ್ಷಮಿಸಬೇಕು. ಏಕೆಂದರೆ ನಮ್ಮ ನಡುವಿನ ಯಯಾತಿಯಂತಿರುವ ಬಂಗಾರಪ್ಪನವರಿಗೆ ಎಪ್ಪತ್ತೈದು ವಸಂತಗಳು ತುಂಬಿ, ಎಪ್ಪತ್ತಾರರ ಮಧು ಸವಿಯಲು ತಯಾರಾಗಿದ್ದಾಗ ನಾವು ಅವರನ್ನು ಅಭಿನಂದಿಸಬೇಕಿತ್ತು.

ಅಂದಹಾಗೆ 'ಬಂ' ಕುಲದ ಎರಡು ಕುಡಿಗಳಾದ ಕುಮಾರ್ ಬಂಗಾರಪ್ಪನ ಹೆಸರು ವಸಂತ, ಮತ್ತೊಬ್ಬನ ಹೆಸರು ಮಧು. ಕಲಾರಸಿಕರು, ಕಲಾವಿದರು, ಕಲಾ ಪೋಷಕರು ಮತ್ತು ಸಕಲಕಲಾ ವಲ್ಲಭರು ಆದ 'ಬಂ'ಗೆ ಎಪ್ಪತ್ತೈದರ ಶುಭಾಶಯ ಹೇಳುವುದು ನಮ್ಮ ಕರ್ತವ್ಯವಲ್ಲವೆ. ಅನಿವಾರ್ಯವಾಗಿ ಫೋನ್ ಮಾಡಲಾಗಿ ಸಿಕ್ಕಿಬಿದ್ದರು.

ಕಾಲರ್ ಟ್ಯೂನ್ 'ಯಾರೇ ಕೂಗಾಡಲಿ, ಊರೇ ಹೋರಾಡಲಿ, ನಿನ ನೆಮ್ಮದಿಗೆ ಭಂಗವಿಲ್ಲ, ಎಮ್ಮೇ ನಿನಗೆ ಸಾಟಿಯಿಲ್ಲ. ಬಿಸಿಲು ಮಳೆಗು, ಬಿರುಗಾಳಿ ಚಳಿಗೆ ಅಳುಕದೆ ಮುಂದೆ ಸಾಗುವೆ. ಅರೆ ಹುಯ್, ಅರೆ ಹುಯ್, ಅರೆ ಹುಯ್....'

"ಹಲೋ, ಯಾರೂ?"

"ಕ್ಷಮಿಸಬೇಕು ಸಾರ್."

"ಕ್ಷಮಿಸೋ ಅಂತದ್ದೇನು ಮಾಡಿದ್ದಿರಿ? ಯಾರ್‍ರಿ ನೀವು?"

"ನಾನು ಯಾಹೂ ಅಂತ, ಪತ್ರಕರ್ತ ಸಾರ್."

"ಏನು ಮಾಡಿದ್ರಿ ಹೇಳಿ?"

"ನಿಮಗೆ ಎಪ್ಪತ್ತೈದು ವರ್ಷ ತುಂಬಿದಾಗ ಅಭಿನಂದಿಸೋದನ್ನೆ ಮರೆತೆ ಸಾರ್."

"ಒಂದೊಂದು ಸತಿ ಅಂಗಾಗುತ್ತೆ, ಏನೂ ಮಾಡಕ್ಕಾಗಲ್ಲ."

"ಅದೂ ನನ್ನ ಬರ್ತಡೇನ ನಾನು ಮಾಡಿಕೊಳಲ್ಲ ಸಾರ್. ಅದ್ಕೆ ಬೇರೆಯವರ ಬರ್ತಡೇ ನೆನಪಿರಲ್ಲ."

"ನಿಮ್ಮದ್ಯಾಕ್ ಮಾಡಿಕೊಳಲ್ಲ ನೀವು?"

"ನಾನು ಹುಟ್ಟಿದ ತಾರೀಖೆ ಗೊತ್ತಿಲ್ಲ ಸಾರ್, ಅದ್ಕೆ."

"ನಂದೂ ಅಂಗೇ ಕಂಡ್ರೀ. ನಮ್ಮಪ್ಪ ಸ್ಕೂಲಿಗೆ ಸೇರಸಕ್ಹೋದಾಗ ಆ ಮೇಷ್ಟ್ರು ಬರಕೊಂಡಿದ್ದೆ ನನ್ನ ರೇಟಾಪ್ ಬರ್ತಡೆ. ಇಟ್ಸ್ ಆಲ್ ಕಾಮನ್. ನಮ್ಮ ಹಳ್ಳಿ ಜನಗಳ ನಿಜವಾದ ಡೇಟಾಪ್ ಬರ್ತ್ ಡೇನೆ ಬೇರೆ, ನಮ್ಮ ಆಚರಣೆನೆ ಬೇರೆ."

"ಅಂತ ಆಚರಣೆ ಸರಿನ ಸಾರ್?"

"ನನ್ನ ಪ್ರಕಾರ ನಾನು ಮಾಡೋದೆಲ್ಲ ಸರೀನೆ. ಇದು ಸರಿನೊ ತಪ್ಪೊ ಅಂತ ಯಾರ್‍ನು ಕೇಳಕ್ಕೆ ಹೋಗಲ್ಲ ನಾನು. ಅದೆಲ್ಲಾ ಅನವಶ್ಯಕ. ನನಗೆ ಸರಿಕಂಡಿದ್ದ ನಾನು ಮಾಡ್ತ ಹೋಗ್ತೀನಿ."


"ನಿಮಗೆ ಸರಿ ಕಂಡಿದ್ದ ಮಾಡಿಕೊಂಡೇ ಎಪ್ಪತ್ತೈದು ವರ್ಷ ತುಂಬಿಸಿಬಿಟ್ರಲ್ಲ ಸಾರ್?"

"ಹೌದು."

"ಎಪ್ಪತ್ತೈದು ವರ್ಷ ಒಂಥರಾ ವೇಸ್ಟು ಅಂತ ಅನ್ನುಸ್ತಾ ಯಿಲವ ನಿಮಗೆ?"

"ನನಿಗ್ಯಾಕ್ರಿ ಅಂಗನ್ನುಸಬೇಕು? ಪ್ರತಿ ದಿವಸನೂ, ಪ್ರತಿ ಕ್ಷಣನೂ ಬದುಕಿದ್ದಿನಿ. ಕರ್ನಾಟಕದ ಯಾವನೇ ರಾಜಕಾರಣಿ ಬದುಕಿಗಿಂತ್ಲೂ ನಂದು ಸಾರ್ಥಕವಾದ ಬದುಕು ಅನ್ನಕೊಂಡಿದ್ದಿನಿ."

"ನಿಮ್ಮ ಲೌಕಿಕ ಜೀವನದ ಸಾರ್ಥಕತೆ ಪರಿಪೂರ್ಣವಾಗೆ ಇದೆ ಸಾರ್. ಆದ್ರೆ ರಾಜಕಾರಣಿಯಾಗಿ ನಿಮ್ಮಂತವರು ಕೇವಲ ನಾಲ್ಕೂವರೆ ವರ್ಷ ಮಾತ್ರ ಅಧಿಕಾರದಲ್ಲಿದ್ದ ಕಾರಣಕ್ಕೆ ನಿಮ್ಮ ಜೀವನ ವ್ಯರ್ಥವಾಗಿದೆ ಅಂತ ನಾನೇಳ್ತಯಿರದು."



"ಶುದ್ಧ ಫೂಲ್ ಕಂಡ್ರಿ ನೀವು. ಅಲ್ರೀ ಈ ದೇಶ ಕಂಡ ಮಹಾನ್ ರಾಜಕಾರಣಿ ಲೋಹಿಯಾ ಯಾವುದೇ ಅಧಿಕಾರದಲ್ಲಿರಲಿಲ್ಲ."

"ನಿಜ ಸಾರ್. ಕಾಂಗ್ರೆಸ್ ರಾಜಕೀಯಾಗಸದಲ್ಲಿ ನೆಹರೂ ಮಿನುಗೊ ನಕ್ಷತ್ರವಾಗಿದ್ರು. ಆದ್ರೆ ಅವ್ರುರಾಗೆ ಮಂಕಾಗ್ತಯಿದಾರೆ. ಅಲ್ಲಿ ತುಸು ದೂರದಲ್ಲಿರೊ ಇನ್ನೊಂದು ನಕ್ಷತ್ರ ನಮ್ಮ ಬುದ್ಧಿ ಜೀವಿಗಳ ಪಾಲಿಗೆ ಹೊಳಿತಾ ಇದೆ. ಅವ್ರುರೆ ಲೋಹಿಯಾ."

"ವೆರಿಗುಡ್ ಕಂಪ್ಯಾರಿಜನ್. ನಾಟಕದೋರೇನ್ರಿ ನೀವು?"

"ಹೌದು ಸಾರ್, ಪೌರಾಣಿಕ ನಾಟಕ ಮಾಡ್ತಿದ್ದೆ."

"ಅದ್ಕೆ ಇಂತ ಮಾತು ಬರ್ತವೆ. ಕರ್ನಾಟಕದ ರಾಜಕೀಯಾಗಸದಲ್ಲು ನಾನು ನೀವು ಹೇಳೊ ತರ ಮಿನುಗೋ ನಕ್ಷತ್ರ ಕಂಡ್ರಿ. ಹೆಗಡೆ, ಪಟೇಲ, ಮೊಯ್ಲಿ, ಕೃಷ್ಣ ಇವುರೆಲ್ಲ ಉಲ್ಕೆಗಳ ತರ ಉರುದು ಬಿದ್ಹೋಗ್ತರೆ; ಆದ್ರೆ ನಾನು ಹೊಳಿತಾಯಿರ್ತಿನಿ."

"ದೇವೇಗೌಡ್ರು?"

"ಅದು ಧೂಮಕೇತು ಬಿಡಿ. ಅದು ಆಕಾಶದಲ್ಲಿ ಕಾಣಿಸಿಕೊಂಡಾಗೆಲ್ಲಾ ಕರ್ನಾಟಕದಲ್ಲಿ ಬರಗಾಲ, ಜಗಳ, ಹೊಡೆದಾಟ, ಅತಿವೃಷ್ಟಿ, ಎಲ್ಲಾ ನಡೆಯುತ್ತೆ."

"ಹಹ್ಹಹ...."

"ಯಾಕ್ರಿ ಅಂಗೆ ನಗ್ತಿರಿ?"

"ನೀವೇ ನಗಾಡುವಾಗ ನನಿಗೆ ನಗು ಬರಲ್ವ ಸಾರ್? ಅದ್ರಲ್ಲೂ ನೀವು ದೇವೇಗೌಡ್ರನ್ನ ಧೂಮಕೇತು ಅಂದಾಗ ನಗದೆ ಇರಕ್ಕಾಗುತ್ತ ಸಾರ್?"

"ಅವರೂ ನನ್ನಂಗೆ ನಾಲ್ಕೂವರೆ ವರ್ಷ ರಾಜಕಾರಣ ಮಾಡಿದ್ರು. ನಾನು ಅವ್ರುರಷ್ಟು ಕೀಳು ಮಟ್ಟದ ರಾಜಕಾರಣ ಮಾಡಿಲ್ಲ, ತಿಳಕೊಳಿ."

"ನಿಜ ಸಾರ್. ನೀವು ಇಡೀ ತಳ ಸಮುದಾಯದ ಲೀಡ್ರಾಗ್ತ ಒಕ್ಕಲಿಗರು, ಲಿಂಗಾಯಿತ್ರ ಮಟ್ಟೊತರ ರಾಜಕಾರಣ ಮಾಡಿದ್ರಿ. ಅದೇ ದ್ಯಾವೇಗೌಡ್ರು, ಒಂದು ಬುಡಕಟ್ಟಿನ, ಗುಂಪಿನ ರಾಜಕಾರಣಿಯಾಗಿಬಿಟ್ರು, ಅಲುವ ಸಾರ್?"

"ಬೇರೆಯವರ ರಾಜಕಾರಣದ ಮಾತಾಡಿ ನಾನು ಟೈಂ ವೇಸ್ಟ್ ಮಾಡಲ್ಲ."

"ಅದು ನನಿಗೂ ಗೊತ್ತು ಸಾರ್. ಆದ್ರು ನಿಮ್ಮಂಥವರು ಅಧಿಕಾರದಲ್ಲಿ ಇರಬೇಕಿತ್ತು ಸಾರ್."

"ಇರಬೇಕಿತ್ತು ಅಂತ ನೀನೇನ್ಹೇಳದು? ನಾನೇನು ಸನ್ಯಾಸಿನೆ? ನನಿಗೂ ಅಪೇಕ್ಷೆ ಇಲವಾ?"

"ಒಂದಿಷ್ಟು ಸ್ಥೈರಣೆ ರೂಢಿಸಿಕೊಂಡಿದ್ರೆ ಕೃಷ್ಣನ ನಂತರ ನೀವೇ ಮುಖ್ಯಮಂತ್ರಿಯಾಗ್ತಿದ್ರಿ ಸಾರ್."

"ನೀವೇಳದು ಕರೆಟ್. ಈ ರೂಢಿಸಿಗೆಳೊ ಗುಣದಲ್ಲಿ ಸ್ಥೈರಣೆ ನನ್ನಿಂದ ಸಾಧ್ಯನೇಯಿಲ್ಲ."

"ಅಲ್ಲ ಸಾರ್, ದಿನಬೆಳಗಾದ ಕೂಡ್ಲೆ ಸೆಟಲ್ ಆಡೊ ಶ್ರಮಕ್ಕಿಂತ ಕಡಿಮೆ ಶ್ರಮ ಹಾಕಿದ್ರು ಇಷ್ಟೊತ್ತಿಗೆ ನೀವು ತಾಳ್ಮೆಯ ಸಾಕಾರಮೂರ್ತಿಯಾಗಿ, ನಿಮ್ಮ ಕಾಲು ಬುಡದಲ್ಲಿ ನಂದಿ ತರ ಧರ್ಮಸಿಂಗ್ ಮಲಗಿರತಿದ್ದ. ಟಗರಿನ ತರ ಖರ್ಗೆ ನಿಂತಿರತಿದ್ದ. ವೀರಭದ್ರನ ತರ ಆ ಶಿವಕುಮಾರ ಇರತಿದ್ದ. ಹಿಂಗಿರುವಾಗ ಚೆಡ್ಡಿಗಳು ಮೆರಿದಂಗೆ ಹದ್ದುಬಸ್ತಿನಲ್ಲಿಡಬಹುದಿತ್ತು. ಆದ್ರೆ ನಿಮ್ಮ ಐಲುಪೈಲು ರಾಜಕಾರಣದ ಕಾರಣಕ್ಕೆ ನೀವೆ ಬಲಿಯಾಗಿ ನರೇಂದ್ರ ಮೋದಿ ಕೈ ಹಿಡದ್ರಿ."

"ನಿಮಗೇನು ತಲಿ ಕೆಟ್ಟದೇನ್ರಿ? ನಾನೆಲ್ಲಿ ಮೋದಿ ಜೊತೆ ಕೈ ಜೋಡಿಸಿದ್ದೆ?"

"ಸಾರಿ ಸಾರ್. ನರೇಂದ್ರ ಮೋದಿ ಅನ್ನೋ ನರಹಂತಕ ಕರ್ನಾಟಕಕ್ಕೆ ಬಂದಾಗ ಅವ್ರುರ ಜೊತೆ ಕೈ ಹಿಡಿದೆತ್ತಿ ನಿಂತಿರೋರ ಸಾಲ ಕೊನೆಲಿ ನೀವು ಇದ್ರಿ. ಇದೊಂದೇ ತಪ್ಪಿಗಾಗಿ ನೀವು ಇನ್ನು ಮುಂದೆ ಕರ್ನಾಟಕದಲ್ಲಿ ಮೊದಲಿನ ತರ ಮಿಂಚಕ್ಕಾಗದಿಲ್ಲ."

"ಬಂಗಾರ ಯಾವತ್ತು ಬಂಗಾರನೆ ಕಂಡ್ರಿ. ನೋಡ್ತಯಿರಿ, ಯಲ್ಲಾ ಪಾರ್ಟಿಯವರೂ ನನ್ನ ಮನೆ ಹತ್ರ ಬಂದು ನಿಲ್ಲೊ ದಿನ ಹತ್ರ ಬರ್ತಾಯಿದೆ."

"ನಿಜ ಸಾರ್. ರಾಜಕಾರಣದಲ್ಲಿ ಯಾರೆಷ್ಟೇ ಜಗಳಾಡಿದ್ರು ಒಂದಲ್ಲಾ ಒಂದು ದಿನ ಯಲ್ಲಾ ಪಾರ್ಟಿಯವರೂ ಮನೆಮುಂದೆ ಬಂದು ನಿಲ್ಲೊ ದಿನ ಬಂದೇ ಬರ್ತದೆ. ಅದು ನಿಮ್ಮ ಭಾಗಕ್ಕೆ ಬೇಗ ಬರೋದು ಬೇಡಿ. ಕನಿಷ್ಠ ಇನ್ನು ಎರಡು ದಶಕದ ನಂತರ ಎಲ್ರೂ ನಿಮ್ಮ ಮನೆ ಭಾಗಲತ್ರ ಬಂದು ನಿಂತುಕೊಳ್ಳಲಿ ಅನ್ನದು ನಮ್ಮಾಸೆ ಸಾರ್."

"ರೀ ಯಾರ್‍ರಿ ನೀವು? ನಾನು ಏನೊ ಹೇಳಿದ್ರೆ ನೀವೇನೊ ತಿಳಕೊಳ್ತರಲ್ರಿ? ನಿಮ್ಮತ್ರ ಮಾತಾಡಿ ನನ್ನ ಕಟಲ್ ಟೈಂ ವೇಸ್ಟ್ ಮಾಡಿಕೊಂಡೆ. ಥೂ ನಿಮ್ಮ!"

"ಥೂತ್ತೇರಿ!!!"

ಮಠಾಧೀಶರ ಲಾಬಿಗೆ ಮಣಿದ ಕಾಂಗ್ರೆಸ್

ಕರ್ನಾಟಕದ ಕೆಲವು ಲಿಂಗಾಯತ ಮಠಾಧೀಶರು ಕೊನೆಗೂ ತಮ್ಮ ಕೆಟ್ಟ ಜಾತಿವಾದಿ ರಾಜಕೀಯದ ತಾಕತ್ತನ್ನು ತೋರಿಸಿಕೊಟ್ಟಿದ್ದಾರೆ.

ಯಡಿಯೂರಪ್ಪ ಮುಖ್ಯಮಂತ್ರಿಯಾಗುತ್ತಿರುವ ಈ ಗಳಿಗೆಯಲ್ಲಿ ಅದಕ್ಕೆ ಕಾರಣಗಳನ್ನು ಶಾಸಕರ ಬೆಂಬಲದಲ್ಲಿ, ಜೆಡಿಎಸ್ ಮೈತ್ರಿಯಲ್ಲಿ ಹುಡುಕಲಾಗುತ್ತಿದೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ರಚನೆಗೆ ಶಾಸಕರ ಸಂಖ್ಯೆ, ಪಕ್ಷಗಳ ಬಲಾಬಲ ಮುಖ್ಯ ಎಂದು ಮುಗ್ಧ ಜನ ನಂಬಿಕೊಂಡಿರುತ್ತಾರೆ.

ಆದರೆ

ವಾಸ್ತವದಲ್ಲಿ ಜಾತಿ, ಧರ್ಮದ ಲಾಬಿಗಳೇ ಈಗಲೂ ರಾಜಕೀಯದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿವೆ.

ಯಡ್ಡಿಗೆ ದಕ್ಕುತ್ತಿರುವ ಸಿಎಂಗಿರಿಯೂ ಈ ಜಾತಿ ಲಾಬಿಯಿಂದಲೇ ಆದದ್ದು. ಇದನ್ನು ತೆರೆಮರೆಯಲ್ಲಿ ನಡೆಸಿ ಯಶಸ್ವಿಯಾದ ಮಠಾಧೀಶರು ಮತ್ತು 'ಗಣ್ಯರು' ಯಾರು ಗೊತ್ತೆ?


ಮೈಸೂರಿನ ಸುತ್ತೂರು ಮಠದ ಸ್ವಾಮಿ!

ಬಾಳೇಹೊನ್ನೂರಿನ ರಂಭಾಪುರಿ ಜಗದ್ಗುರು!!

ಅಖಿಲ ಭಾರತ ವೀರಶೈವ ಮಹಾಸಭಾದ ನಾಯಕರಾದ ಭೀಮಣ್ಣ ಖಂಡ್ರೆ- ತಿಪ್ಪಣ್ಣ!!!

ಹಾಗೂ ಇವರ ಪ್ರಯತ್ನಕ್ಕೆ ಧನಕನಕ ಧಾರೆಯೆರೆದು ನೆರವಾಗಿದ್ದು ನೈಸ್ ಕಂಪನಿಯ ಅಶೋಕ್ ಖೇಣಿ.

ಕಾಂಗ್ರೆಸ್ಸೋ, ದಳವೊ ಅಥವಾ ಬಿಜೆಪಿಯೋ ಒಟ್ಟಿನಲ್ಲಿ ಲಿಂಗಾಯತನೊಬ್ಬ ರಾಜ್ಯದ ಮುಖ್ಯಮಂತ್ರಿಯಾಗಲಿ ಎಂದು ಚಡಪಡಿಸುತ್ತಿದ್ದ ಈ ಲಿಂಗಾಯತ ಗುಂಪಿನ ತಾಳಕ್ಕೆ ತಕ್ಕ ಹಾಗೆ ಮೊದಲು ಕುಣಿದಿದ್ದು ಕಾಂಗ್ರೆಸ್‌ನ ಕೇಂದ್ರ ಗೃಹ ಸಚಿವ ಶಿವರಾಜ್‌ಪಾಟೀಲ್. ಸ್ವತಃ ಸಾಯಿಬಾಬಾನ ಗುಲಾಮ ಭಕ್ತನಾಗಿರುವ ಈತ ಜಾತಿವಾದಿಯೂ ಹೌದು ಮತ್ತು



ದೇಶಿಕೇಂದ್ರ ಸ್ವಾಮಿ



ರಂಭಾಪುರಿ ಸ್ವಾಮಿ

ಅತೀ ಮುಖ್ಯವಾಗಿ ಲಿಂಗಾಯತನೆಂಬುದೂ ಇಲ್ಲಿ ಗಮನಾರ್ಹ.

ಕರ್ನಾಟಕದ ರಾಜಕೀಯದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳಿಗಿಂತ ಜಾತಿ ಮಾನದಂಡಗಳೇ ಅಧಿಕಾರ ದಕ್ಕಿಸಿಕೊಳ್ಳುವ ಟ್ರಂಪ್‌ಕಾರ್ಡ್‌ಗಳಾಗಿ ಬಳಕೆಯಾಗುತ್ತಾ ಬಂದಿವೆ. ಹಾಗಾಗಿ ಯಡ್ಡಿ ಬಿಜೆಪಿ ನಾಯಕನಾಗಿದ್ದಾಗ ದಕ್ಕದಿದ್ದ ಅಧಿಕಾರ, ರೈತ ಮುಖಂಡನಂತೆ ಪಾದಯಾತ್ರೆ ನಡೆಸಿದಾಗ ಸಿಗದಿದ್ದ ಕುರ್ಚಿಯು ಆತ ತನ್ನನ್ನು ತಾನೆ ಲಿಂಗಾಯತ ಲೀಡರ್ ಆಗಿ ರೂಪಾಂತರಿಸಿಕೊಂಡ ನಂತರ ದಕ್ಕುತ್ತಿದೆ.


ಇದು ಹಳೇ ಪರಂಪರೆಯ ಮುಂದುವರಿಕೆ ಮಾತ್ರ. ದೇವೇಗೌಡ ಒಕ್ಕಲಿಗ ಜಾತಿ ಪ್ರಜ್ಞೆ ಕೆರಳಿಸಿ ಸಿಎಂ ಆದಹಾಗೆ. ಜೆ.ಎಚ್. ಪಟೇಲ್ ಸಿಎಂ ಆದಮೇಲೆ ತನ್ನ ಕುರ್ಚಿ ಭದ್ರಪಡಿಸಿಕೊಳ್ಳಲು, ಗೌಡರ ದಾಳಿಯಿಂದ ತನ್ನ ಕುರ್ಚಿ ರಕ್ಷಿಸಿಕೊಳ್ಳಲು ಲಿಂಗಾಯತ ಗುರಾಣಿ ಬಳಸಿಕೊಂಡ ಹಾಗೆ.....

ಈ ದಿನ ಯಡಿಯೂರಪ್ಪನೂ ಲಿಂಗಾಯತ ಜಾತಿಯನ್ನು ದುರ್ಬಳಕೆ ಮಾಡಿಕೊಂಡೇ ಸಿಎಂ ಆಗುತ್ತಿದ್ದಾರೆ. ಈ ಜಾತಿ ಲಾಬಿಯ ತೀವ್ರತೆ ಎಷ್ಟಿತ್ತೆಂದರೆ ಕಾಂಗ್ರೆಸ್ ಇದನ್ನು ನೋಡಿಕೊಂಡು ಕೈಕಟ್ಟಿ ಸುಮ್ಮನೆ ಕೂರಬೇಕಾಗಿ ಬಂತು. ಇಷ್ಟವಿರದಿದ್ದಾಗ್ಯೂ ದೇವೇಗೌಡ ಸಮ್ಮತಿಸಬೇಕಾಗಿ ಬಂತು.

ಒಟ್ಟಿನಲ್ಲಿ ಲಿಂಗಾಯತ ಮಠಾಧೀಶರು ನಡೆಸಿದ ಲಾಬಿಯ ಪರಿಣಾಮ ಇದು.

ಶಿವಪೂಜೇಲಿ ಕರಡಿ....

ಹಾಗೆ ನೋಡಿದರೆ ಈಗ ಪಾರ್ಟ್‌ಟೈಂ ರಾಜಕಾರಣಿಗಳಾಗಿರುವ ಈ ಲಿಂಗಾಯತ ಸ್ವಾಮಿಗಳಿಗೆ ಬಸವ ತತ್ವದಲ್ಲಿ ನಂಬಿಕೆ ಇದ್ದಿದ್ದೇ ನಿಜವಾಗಿದ್ದರೆ ಹಿಂದೂತ್ವವಾದದ ರಕ್ತರಾಜಕಾರಣ ನಡೆಸುವ ಬಿಜೆಪಿಯ ಯಡ್ಡಿಯನ್ನು ಉಗಿದು ದೂರ ಇಡಬೇಕಿತ್ತು, ಆದರೆ ಈ ಮಠಾಧೀಶರೂ ಕೂಡ ತತ್ವಕ್ಕೆ ಎಳ್ಳುನೀರು ಬಿಟ್ಟು ಜಾತಿ ವೈರಸ್ ಅಂಟಿಸಿಕೊಂಡವರೆ ತಾನೆ?



ಶಿವರಾಜ್ ಪಾಟೀಲ್

2006 ರ ಫೆಬ್ರವರಿಯಲ್ಲಿ ಕೋ-ಜಾ ಮೈತ್ರಿ ಸರ್ಕಾರ ರಚನೆಯಾಗಿ ಯಡ್ಡಿ ಉಪ ಮುಖ್ಯಮಂತ್ರಿಯಾದಾಗ ಇನ್ನೂ ಇಪ್ಪತ್ತು ತಿಂಗಳು ಕಾದರೆ ಲಿಂಗಾಯತನೊಬ್ಬ ರಾಜ್ಯದ ಸಿಎಂ ಆಗುತ್ತಾನಲ್ಲ ಎಂಬ ಗುಪ್ತ ಸಂತೋಷ ಇವರಿಗಿತ್ತು. ಆದರೆ ಆ ಸಮಯ ಹತ್ತಿರಾಗುತ್ತಿದ್ದಾಗಲೇ ಗೌಡರು ಅಖಾಡಕ್ಕಿಳಿದು ಮ್ಯೂಸಿಕಲ್ ಚೇರ್ ಆಟ ಶುರು ಮಾಡಿದಾಗ ಯಡ್ಡಿ ಕಂಗಾಲಾದರು. 'ಲಿಂಗಾಯತ' ಜಾತಿ ಕಾರ್ಡ್ ಚಾಲ್ತಿಗೆ ಬಂದಿದ್ದೇ ಆಗ. ಕಳೆದ ಏಪ್ರಿಲ್-ಮೇ ತಿಂಗಳಲ್ಲಿ ಬಂಜಗೆರೆಯವರ 'ಆನು ದೇವಾ ಹೊರಗಣವನು' ಪುಸ್ತಕದ ವಿವಾದವೆದ್ದಾಗ ಯಡ್ಡಿ ಲಿಂಗಾಯತ ವೀರನಂತೆ ಪೋಜು ನೀಡಿ ಜಾತಿ ಸೆಂಟಿಮೆಂಟ್ ಅನ್ನು ತಮ್ಮ ಮುಂದಿನ ರಾಜಕೀಯ ದಾಳಕ್ಕೆ ಬಳಸಿಕೊಳ್ಳುವ ಯತ್ನ ಮಾಡಿದ್ದರು. ಇದನ್ನು ತಕ್ಷಣ ಅರ್ಥ ಮಾಡಿಕೊಂಡ ಗೌಡರು ಅರ್ಜೆಂಟಾಗಿ ಪುಸ್ತಕ ನಿಷೇಧಿಸಿ ಯಡ್ಡಿ ಜಾತಿ ನಾಯಕನಾಗಿ ಅವತರಿಸುವ ಅವಕಾಶ ಸಿಗದಂತೆ ನೋಡಿಕೊಂಡಿದ್ದರು. ಆಗಲೇ ವೀರಶೈವ ಮಹಾಸಭಾದ ಭೀಮಣ್ಣ ಖಂಡ್ರೆ ಹೋರಾಟ ಮಾಡುತ್ತೇವೆಂದು ಯಡ್ಡಿಯಿಂದ ಹತ್ತಿರಶ್ಚಿ ಒಂದು ಕೋಟಿ ಕಿತ್ತು ತಿಂದದ್ದು. ಮಹಾಸಭಾದ ವಾಗೀಶ್ ಪ್ರಸಾದ್ ಥರದವರು ಗಾಜು ಒಡೆದು ಕೈ ಗಾಯ ಮಾಡಿಕೊಂಡರೂ ಯಡ್ಡಿಗೆ ಈ ವಿವಾದದಿಂದ ಅಷ್ಟೇನೂ ಗಿಟ್ಟಿರಲಿಲ್ಲ. ಆದರೆ ಯಡ್ಡಿಗೆ ಸಿಎಂಗಿರಿ ಬಿಟ್ಟುಕೊಡದಿದ್ದರೆ ಅದು ಲಿಂಗಾಯತರಿಗೆ ವಂಚನೆ ಮಾಡಿದಂತೆಯೇ ಸರಿ ಎಂಬ ಭಾವನೆ ಬೆಳೆಯುವಂತೆ ರಂಭಾಪುರಿ ಸ್ವಾಮಿ, ಕೊಳದ ಮಠದ ಶಾಂತವೀರಸ್ವಾಮಿ, ಮಾತೆ ಮಹಾದೇವಿ ಹೇಳಿ

ಬಿಳಿದಾಳಿ ಈಶ

ಕೊಂಡು ತಿರುಗಲು ಶುರು ಮಾಡಿದ್ದರು. ಈ ಮಧ್ಯೆ ಕುಮಾರಸ್ವಾಮಿ ಒಮ್ಮೆ ಸಿದ್ಧಗಂಗಾ ಸ್ವಾಮಿಗಳ ಸಮ್ಮುಖದಲ್ಲೇ 'ಅಧಿಕಾರ ಹಸ್ತಾಂತರ ಮಾಡುತ್ತೇನೆ' ಎಂದು ಘೋಷಿಸಿ ನಂತರ ಮಾತಿಗೆ ತಪ್ಪಿದ್ದನ್ನು ಬಿಜೆಪಿಗಳು ವ್ಯವಸ್ಥಿತವಾಗಿ ಬಳಸಿಕೊಂಡರು. ಅಕ್ಟೋಬರ್ ಮೊದಲ ವಾರದಲ್ಲಿ ಯಡ್ಡಿ ತಮ್ಮ ಧರ್ಮಯಾತ್ರೆ ಶುರು ಮಾಡಿದ್ದೂ ಸಿದ್ಧಗಂಗಾ ಸ್ವಾಮಿಗಳ ಆಶೀರ್ವಾದ ಪಡೆದೆ ತಾನೆ?

ಆಮೇಲೆ ಎಂ.ಪಿ. ಪ್ರಕಾಶ್‌ರ ಬಂಡಾಯ, ಕಾಂಗ್ರೆಸ್‌ನವರ ಹಾಸ್ಯಾಸ್ಪದ ತಂತ್ರಗಳೆಲ್ಲಾ ಮುಗಿಯುತ್ತಿದ್ದಂತೆ ಜೆಡಿಎಸ್ ಮತ್ತೆ ಬಿಜೆಪಿ ಜೊತೆ ನಂಟಿಗೆ ರೆಡಿಯಾಗಿ ಬೆಂಬಲ ಪತ್ರ ನೀಡಿದರೂ ಅದರಲ್ಲಿ ಹತ್ತಾರು ನ್ಯೂನತೆಗಳಿದ್ದವು.

ಕಾಂಗ್ರೆಸ್ ಮನಸ್ಸು ಮಾಡಿದಿದ್ದರೆ ವಿಧಾನಸಭೆ ವಿಸರ್ಜಿಸುವಂತೆ ಗೌಡರು ನೀಡಿದ್ದ ಪತ್ರ, ಪ್ರಕಾಶ್ ಸಿಂಧ್ಯಾರು JDLP ಸಭೆ ಅಸಿಂಧು ಎಂದಿದ್ದ ಅಜೆಂಡಾ, 39 ಶಾಸಕರ ಅನರ್ಹತೆ ವಿಚಾರಗಳನ್ನಿಟ್ಟುಕೊಂಡು ಯಡ್ಡಿಯನ್ನು ಇನ್ನೂ ಸತಾಯಿಸಬಹುದಿತ್ತು.

ಆದರೆ ಅಷ್ಟರೊಳಗೆ ಸುತ್ತೂರು ಸ್ವಾಮಿ, ರಂಭಾಪುರಿ ಜಗದ್ಗುರುಗಳ ರಂಗ ಪ್ರವೇಶವಾಗಿತ್ತು. ಶಿವಪೂಜೆ ಮಾಡುವುದನ್ನು ಬಿಟ್ಟು ಯಡ್ಡಿಯೆಂಬ ಕರಡಿ ಕುಣಿತಕ್ಕೆ ಹಿಮ್ಮೇಳ ನೀಡಲು ಇವರೂ ರೆಡಿಯಾದರು. ರಾಜ್ಯಪಾಲ ಠಾಕೂರ್‌ರ ಅಸ್ಪಷ್ಟ ವರದಿಯನ್ನಿಟ್ಟುಕೊಂಡು ಇನ್ನೂ ಮೀನಮೇಷ ಎಣಿಸುತ್ತಿದ್ದ ಕೇಂದ್ರ ಕ್ಯಾಬಿನೆಟ್ ಎರಡು ಬಾರಿ ನಿಗದಿಯಾಗಿದ್ದ ಸಭೆಯಲ್ಲೂ ಕರ್ನಾಟಕ ವಿಚಾರ ಚರ್ಚೆ ಮಾಡಿರಲಿಲ್ಲ. ವಿಧಾನಸಭೆ ಹೇಗೂ ವಿಸರ್ಜನೆಯಾಗುತ್ತೆ ಎಂದು ಗೌಡರು ಖುಷಿಯಾಗಿದ್ದರೆ ಅತ್ತ ಬಿಜೆಪಿ ಪಾಳೆಯದಲ್ಲಿ ಆತಂಕ ಬೆಳೆಯುತ್ತಿತ್ತು.

ಆಗ ಯಡ್ಡಿ ನೆರವಿಗೆ ಬಂದಿದ್ದೇ ಖೇಣಿ!

ಬಾಳೆಹೊನ್ನೂರು ಪೀಠದ ರಂಭಾಪುರಿ ಸ್ವಾಮಿಗಳ ಸಮ್ಮುಖದಲ್ಲಿ ಯಡ್ಡಿ ಕೈಗೆ 25 ಕೋಟಿ ಮಡಗಿ ಖೇಣಿ ಶಾಸಕರ ಪರೇಡ್‌ಗೆ, ಓಡಾಟದ ಖರ್ಚು

ದಳ ವಿಭಜನೆ ಖೇಣಿ-ರೆಡ್ಡಿ ಭಜನೆ

19 ತಿಂಗಳು ಪೂರ್ಣಗೊಳ್ಳುವ ಮೊದಲೇ ಗೌಡರೇನಾದರೂ ಯಡ್ಡಿಗೆ ನೀಡಿರುವ ಬೆಂಬಲ ವಾಪಸ್ ಪಡೆದುಬಿಟ್ಟರೆ!?

ಅದಕ್ಕೊಂದು ತಿರುಮಂತ್ರ ಹಾಕಲು ಯಡ್ಡಿ ಈಗಾಗಲೇ ಸ್ಕೆಚ್ ರೆಡಿ ಮಾಡಿಟ್ಟುಕೊಂಡಿದ್ದಾರೆ. ಕಳೆದ ವಾರ ರಂಭಾಪುರಿ ಜಗದ್ಗುರು ಸಮ್ಮುಖದಲ್ಲಿ ನೈಸ್ ಕಂಪನಿಯ ಅಶೋಕ್ ಖೇಣಿಯಿಂದ ಯಡ್ಡಿ 25 ಕೋಟಿ ಪಾಕೆಟ್ ಮನಿ ತಗೊಳ್ಳುವಾಗಲೇ ಈ ಸ್ಕೆಚ್ ರೂಪು ತಳೆದಿದೆ.



ಅಶೋಕ್ ಖೇಣಿ

ಅಂತಹ ಸಂದರ್ಭ ಬಂದರೆ ಜೆಡಿಎಸ್ ಅನ್ನೇ ವಿಭಜಿಸಿ 33 ಶಾಸಕರನ್ನು ಖರೀದಿಸಿ ಸರ್ಕಾರ ಮುಂದುವರೆಯುವಂತೆ ನೋಡಿಕೊಳ್ಳೋಣ ಎಂದು ಖೇಣಿ -ಜನಾರ್ದನ ರೆಡ್ಡಿ ಸೆಂಚುರಿ ಕ್ಲಬ್‌ನಲ್ಲಿ ಕಳೆದ ವಾರ ಮಾತಾಡಿಕೊಂಡಿದ್ದಾರೆಂದು ಹೇಳಲಾಗುತ್ತಿದೆ. ಇದಕ್ಕಾಗಿ ಇನ್ನೊಂದು 75 ಕೋಟಿ ಖರ್ಚು ಮಾಡಲೂ ಖೇಣಿ ತಯ್ಯಾರೆಂಬ ಪುಕಾರೂ ಇದೆ.

ಅಸಲಿಗೆ 2009 ರ ಜೂನ್‌ವರೆಗೂ ಯಾವ ದಳ ಶಾಸಕರಿಗೂ ಎಲೆಕ್ಷನ್ ಬೇಕಾಗಿಲ್ಲ, ಅಲ್ಲೀತನಕ ಅಧಿಕಾರ ಉಳಿಸಿಕೊಂಡು ಸಿಕ್ಕಷ್ಟು ಕಾಸು ಮಾಡಿಕೊಂಡು ಹೋಗೋಣ ಎಂಬ ಇರಾದೆ ಅವರಿಗೆ. ಜೊತೆಗೆ ಕ್ರೈಸಿಸ್ ಬಂದಾಗ ಖೇಣಿ ಬೆಂಬಲ ಸಿಕ್ಕು, ದಳ ವಿಭಜನೆಯಾಗೇ ಬಿಟ್ಟರೆ, ಆ ನಂತರ ತಮಗೆ ಬಿಜೆಪಿ ಟಿಕೆಟ್ ಸಿಗುವುದಾದರೆ ಗೌಡರ ಸಹವಾಸ ಯಾರಿಗೆ ಬೇಕು ಹೇಳಿ?

ಚಲುವರಾಯಸ್ವಾಮಿಯಿಂದಿಡಿದು ಬಿ.ಸಿ. ಪಾಟೀಲ್, ಮಲ್ಲಿಕಾರ್ಜುನ ಖೂಬ, ಬಾಲರಾಜ್, ಬಂಡೆಪ್ಪ ಕಾಶೆಂಪೂರ, ಅಲ್ಕೋಡ್, ವೆಂಕಟೇಶ್, ಪಾಂಡವಪುರ ಪುಟ್ಟರಾಜು, ರಾಜು ಕಾಗೆ, ಎ.ಟಿ. ರಾಮಸ್ವಾಮಿ.... ಹೀಗೆ ಡಜನ್‌ಗಟ್ಟಲೆ ದಳ ಶಾಸಕರು ಈ ಎರಡನೇ ಆಯ್ಕೆಯನ್ನು ಮುಕ್ತವಾಗಿಟ್ಟುಕೊಂಡಿದ್ದಾರೆ. ಈಗಿನ ಹೊಸ ಮಂತ್ರಿಗಿರಿ, ನಿಗಮ-ಮಂಡಳಿ ಕುರ್ಚಿ ಸಿಗದಿದ್ದರೆ ಅಂಥವರೂ ಈ ದಳದ ಎರಡನೇ ಗುಂಪು ಸೇರಬಹುದು.

ಇವರ ಈಗಿನ ಹಣದ ಅಗತ್ಯ, ನಾಳಿನ ಎಲೆಕ್ಷನ್ ಖರ್ಚುಗಳಿಗೆ ಕೇವಲ ಖೇಣಿ ಹಣ ಮಾತ್ರವಲ್ಲ, ಗಣಿಧಣಿ ಜನಾರ್ದನ್ ರೆಡ್ಡಿಯ ದುಡ್ಡೂ ಹರಿದುಬರಲಿದೆ.

ದುಡ್ಡಿನ ಲೆಕ್ಕದಲ್ಲಿ ಗೌಡರ ತಾಕತ್ತೂ ಇವತ್ತು ಕಡಿಮೆಯೇನಲ್ಲ. 2004 ಎಲೆಕ್ಷನ್‌ನಲ್ಲಿ ತನ್ನ ಪಕ್ಷದ ಅಭ್ಯರ್ಥಿಗಳಿಗೆ ತಲಾ ಒಂದು ಲಕ್ಷ ಕೊಡುವ ಸ್ಥಿತಿಯಷ್ಟೆ ಇತ್ತು ಗೌಡರಿಗೆ. ಆನಂತರ ಕೋ-ಜಾ ಸರ್ಕಾರವೆಂಬ ಡ್ಯಾಂ ಕಟ್ಟಿದ ಮೇಲೆ ಬಲದಂಡೆ ಕಾಲುವೆಯನ್ನು ಕುಟುಂಬದ ಆಸ್ತಿ ಬೆಳೆಸಲೂ, ಎಡದಂಡೆ ಕಾಲುವೇಲಿ ಹರಿದ ಹಣವನ್ನು ಪಕ್ಷಕ್ಕೆಂದು ಎತ್ತಿಟ್ಟುಕೊಂಡಿರುವ ಗೌಡರಿಗೆ ಈಗ ಹಣದ ಯೋಚನೆ ಇಲ್ಲ, ಜನಬೆಂಬಲದ ಬಗ್ಗೆಯೇ ಅವರಿಗೆ ಆತಂಕ. ದಳ ಶಾಸಕಗಿರುವ ಭೀತಿಯೂ ಅದೆ. ಹಾಗಾಗಿ ನಾಳೆ ಗೌಡರೇನಾದರೂ ಬೆಂಬಲ ವಾಪಸ್ಸಿನ ಮಾತೆತ್ತಿದರೆ ಯಡ್ಡಿ ಸುಮ್ಮನೆ ಒಪ್ಪಿಕೊಳ್ಳಲಾರರು. ತನ್ನ ನೈಸ್ ಕಂಪನಿಯ ಸಾವಿರಾರು ಕೋಟಿ ರೂ.ಗಳ ದಂಧೆಗೆ ಅಡ್ಡಗಾಲಾಗಿರುವ ಗೌಡರ ಬಗ್ಗೆ ಖೇಣಿಗೆ ಈಗಾಗಲೇ ನಖಶಿಖಾಂತ ಸೇದಿದೆ. ಜನಾರ್ದನ್ ರೆಡ್ಡಿಗೂ ಗೌಡರ ಮೇಲೆ ಸಿಟ್ಟಿದೆ. ನಾಳೇ ಇವೇ ಜೆಡಿಎಸ್ ಅನ್ನು ವಿಭಜಿಸಿದರೂ ಆಶ್ಚರ್ಯವಿಲ್ಲ.



ಜನಾರ್ದನ ರೆಡ್ಡಿ

ಅಂದಹಾಗೆ ಈ ಖೇಣಿ-ರಂಭಾಪುರಿ-ಯಡ್ಡಿ ಕೂತು ಇಂಥ ಸಾಧ್ಯತೆಗಳ ಚರ್ಚೆ ಮಾಡಿಕೊಂಡಿರುವುದು ಗೌಡರಿಗೆ ಈಗಾಗಲೇ ಗೊತ್ತಾಗಿದೆ.

ಇದನ್ನು ಗೌಡರ ಕಿವಿಗೆ ಊದಿರುವುದು ಬೇರೆ ಯಾರೂ ಅಲ್ಲ,

ಯಡ್ಡಿಯ ಪರಮಾಪ್ತ ಗೆಳೆಯ ಹಾಗೂ ಹಿತೈಷಿ ಅನಂತ್‌ಕುಮಾರ್!

ಸಿಟ್ಟ್ಯಾಕೋ ಸಿಡುಕ್ಯಾಕೋ ರೇವಣ್ಣ...

ಕೇಲವರಿರುತ್ತಾರೆ. ಏನೇ ಲಾಗ ಹಾಕಿದರೂ, ಕೆಳಗಾಗಿ ನಿಂತರೂ ಬಯಸಿದ್ದು ...ದುವುದಿಲ್ಲ.

ಗೌಡರ ಪುತ್ರರತ್ನ ರೇವಣ್ಣನ ಹಣೆಬರಹವೂ ...ದೆ.

ಇನ್ನೇನು ಡಿಸಿಎಂ ಕುರ್ಚಿ ನಂದೆ ಅಂತ ...ದಿನಿ ಪೇಡಾ ತಿಂದು, ಹಾಲು ಕುಡಿದು ...ಮೊರೆಸಿಕೊಂಡು ಹೊರಡಬೇಕು ...ವಷ್ಟರಲ್ಲಿ ಜೆಡಿಎಸ್ ಶಾಸಕರು ಅದಕ್ಕೆ ಹುಳಿ ...ಬಿಟ್ಟಿದ್ದಾರೆ. ಕುಮಾರಸ್ವಾಮಿ ಡಿಸಿಎಂ ...ವುದೀಗ ಖಚಿತವಾಗಿದೆ, ಕೆಲವು ...ರ್ಮಾಲಿಟಿಗಳನ್ನು ಮುಗಿಸಿಕೊಂಡರೆ ಮಾತ್ರ.



ಭವಾನಿ

...ದರಲ್ಲಿ ರೇವಣ್ಣನಿಗಿಂತ ಮುಖ್ಯವಾಗಿ ...ಳಿಕಾದೇವಿಯಂತೆ ಹೂಂಕರಿಸುತ್ತಿರುವ ...ವಾನಮ್ಮನವರನ್ನು ಒಪ್ಪಿಸುವುದೂ ಒಂದು.

ಡಿಸಿಎಂ ಆಯ್ಕೆ ಕುರಿತಂತೆ ಜೆಡಿಎಸ್ ...ಸಕಾಂಗ ಸಭೆ, ಶಾಸಕರ ಅಭಿಪ್ರಾಯ, ...ತ್ರ-ಕುತಂತ್ರ, ಎಂದು ಏನೇ ನಾಟಕವಾಡಿದರೂ ...ದೀಗ ಗೌಡರ ಕುಟುಂಬದೊಳಗಿನ ...ಚಾರವಾಗಿ ಹೋಗಿದೆ. ಯಾರ್‍ಯಾರನ್ನೋ ಆಡಿಸಿ ...ಳಿಸಿ ಗೊತ್ತಿರುವ ಗೌಡರಿಗೂ ಇದೊಂದು ...ಡಿಸಲಾಗದ ಕಗ್ಗಂಟು.

ಕುಮಾರಸ್ವಾಮಿ, ಎಂಪಿ ಆಗಿ ಸಿಎಂ ಆಗಿದ್ದಾಯಿತು. ಅನಿತಾ ಟಿವಿ ಚಾನಲ್ ಮಾಡಿಕೊಂಡಿದ್ದಾಯಿತು. ನೂರಾರು ಕೋಟಿ ಆಸ್ತಿಯೂ ಗಳಿಸಿಯಾಯಿತು. ಆದರೆ ರೇವಣ್ಣನಿಗೆ ಸಿಕ್ಕಿದ್ದೇನು ಎಂಬ ಅಬ್‌ಜೆಕ್ಷನ್ ಸಣ್ಣ ವಿಚಾರ ವೇನಲ್ಲ, ಇದು ದುಡ್ಡು ಕಾಸಿಗೆ ಸಂಬಂಧಿಸಿದ್ದು ಮಾತ್ರವಲ್ಲ, ಕಿಲಾಡಿ ರೇವಣ್ಣ ತಾನೊಂದು ಕಾಲುವೆ ತೋಡಿಕೊಂಡು ಖಜಾನೆಯಿಂದ ಸಾಕಷ್ಟು ದುಡ್ಡು ಹರಿಸಿಕೊಂಡಿದ್ದಾನೆ.

ಆದರೆ ಅಧಿಕಾರ?

ಇವತ್ತಿಗೂ ರೇವಣ್ಣನ ಇಮೇಜ್ ನಂದಿನಿ ಹಾಲು ಮಾರುವ ಲೆವೆಲ್‌ಗಿಂತ ಮೇಲಕ್ಕೆದ್ದಿಲ್ಲ, ದಳ ಶಾಸಕರೊಂದಿಗೆ ಎಂದೂ ಗೆಳೆತನ ಬೆಳೆಸಿಕೊಳ್ಳದೆ ಅಧಿಕಾರ ನಡೆಸಿದ ರೇವಣ್ಣ ಹೊಳೆನರಸೀಪುರ ಕ್ಷೇತ್ರ ಬಿಟ್ಟು ಆಚೀಚೆ ನೋಡಿದವನೂ ಅಲ್ಲ, ಪಾರ್ಟಿ ಶಾಸಕರು, ನಾಯಕರು, ಕಾರ್ಯಕರ್ತರನ್ನು ಖುಷಿಪಡಿಸುವ ಕಲೆಯೂ ಈ ನಂದಿನಿ ಬ್ರಾಂಡಿಗಿಲ್ಲ,

ಅದೇ ಕುಮಾರಸ್ವಾಮಿ ಈ ರೇಸಿನಲ್ಲಿ ಕುದುರೆ ಏರಿ ವೇಗವಾಗಿ ಮುಂದಕ್ಕೆ ಸಾಗಿದ್ದರೆ, ರೇವಣ್ಣ ನಂದಿನಿ ಎಮ್ಮೆ ಮೇಲೆ ಕುಳಿತೇ 'ನಾನೇ ಡಿಸಿಎಂ' ಅಂತ ರಚ್ಚೆ ಹಿಡಿದಿದ್ದಾರೆ.

ನವೆಂಬರ್ 11 ರಂದು ವಿಟ್ರಿಯಾ ಹೋಟೆಲ್‌ನಲ್ಲಿ ನಡೆದ ದಳ ಶಾಸಕರ ಸಭೆಯಲ್ಲೂ ರೇವಣ್ಣನ ಪರವಾಗಿ ಯಾರೂ ಮಾತೇ ಆಡಲಿಲ್ಲ, ಅಲ್ಲಿ ಪಕ್ಷದ ಶಾಸಕಾಂಗದ ನಾಯಕನಾಗಿ ಕುಮಾರಸ್ವಾಮಿ ಆಯ್ಕೆಯಾದರೂ ಡಿಸಿಎಂ ಯಾರೆಂಬ ನಿರ್ಧಾರ ಪ್ರಕಟಿಸಲಿಲ್ಲ, ಗೌಡರ ಮನೆಯಲ್ಲಿ ಹಿರಿಯ ನಾಯಕರು ಇನ್ನೊಂದು ಸಭೆಯಲ್ಲಿ ತೀರ್ಮಾನಿಸುತ್ತಾರೆ ಎಂದು ಶಾಸಕರನ್ನು ಬೀಳ್ಕೊಡಲಾಯಿತು. ಮತ್ತೆ ಗೌಡರ ಮನೆಯಲ್ಲಿ ಸಭೆ ಅಂದರೆ ರೇವಣ್ಣನನ್ನು (ಪ್ಲಸ್ ಭವಾನಿ) ಈಗ ಸುಮ್ಮನಿರುವಂತೆ ಒಪ್ಪಿಸಲು ಸಮಯಾವಕಾಶ ಪಡೆದುಕೊಳ್ಳುವ ಪ್ರಯತ್ನ ಅಷ್ಟೆ.

ಆದರೆ ರೇವಣ್ಣ ಒಪ್ಪಬೇಕಲ್ಲ,

ದಳ-ಬಿಜೆಪಿ ಮರುಮೈತ್ರಿ ಖಚಿತ ಎಂದಾಗುತ್ತಿದ್ದಂತೆ ಚುರುಕಾದ ರೇವಣ್ಣ ಡಿಸಿಎಂ ಆಗಲು ತನ್ನ ಅರ್ಹತೆ ತೋರಿಸಿಕೊಳ್ಳಲು ಕೆಲವು





ಹಾಸ್ಯಾಸ್ಪದ ಪ್ರಯತ್ನ ನಡೆಸಿದರು. ಕನ್ನಡದ ಎಲ್ಲಾ ದಿನಪತ್ರಿಗಳಲ್ಲೂ KMF ನ ಸಾಧನೆ ಬಗ್ಗೆ ಫುಲ್‌ಪೇಜ್ ಕಲರ್ ಜಾಹೀರಾತು ಕೊಟ್ಟು ಅದರಲ್ಲಿ ತಮ್ಮ ಫೋಟೋ ಹಾಕಿಸಿಕೊಂಡಿದ್ದರು. ಆಮೇಲೆ ಮೊನ್ನೆ ಶನಿವಾರ ರಾತ್ರೋರಾತ್ರಿ ತಮಿಳುನಾಡಿನ ಶ್ರೀರಂಗಂಗೆ ಹೋಗಿ ಜಾತಕ ತೋರಿಸಿಕೊಂಡು ತನಗೆ ಡಿಸಿಎಂ ಯೋಗ ಇದೆಯಾ ಅಂತ ಚೆಕ್ ಮಾಡಿಸಿಕೊಂಡು ಬಂದಿದ್ದಾರೆ.

ಆ ಪುರೋಹಿತ ಏನೇ ಬೊಗಳಿರಲಿ ರೇವಣ್ಣನಿಗೆ ಆ ಕುರ್ಚಿ..... ಉಹುಂ ಕಷ್ಟಸಾಧ್ಯ, ಮೆರಾಜುದ್ದೀನ್, ಚೆಲುವರಾಯಸ್ವಾಮಿ ಹೆಸರು ಕೇಳಿಬಂದಷ್ಟೂ ಆ ಹುದ್ದೆಗೆ ರೇವಣ್ಣನ ಪ್ರಸ್ತಾಪ ಬರುತ್ತಿಲ್ಲ. ಪಕ್ಷದ ಹಿತದೃಷ್ಟಿಯಿಂದಲೂ ಯೋಚಿಸಬೇಕಾದ ಗೌಡರು ಕೊನೆಗೆ ಕುಮಾರಸ್ವಾಮಿಯೇ ಆ ಜವಾಬ್ದಾರಿ ಹೊರಲಿ ಅಂದುಬಿಟ್ಟರೆ ರೇವಣ್ಣನಿಗೆ ಪಿಡಬ್ಲ್ಯೂಡಿ ಕಾಮಗಾರಿ ಹಾಗೂ ನಂದಿನಿ ಪೇಡಾ ಎರಡೇ ಗತಿ. ■

ಯಡ್ಡಿ ಎಷ್ಟು ಪರ್ಸೆಂಟ್ ಲಿಂಗಾಯತ?

ಮುಖ್ಯಮಂತ್ರಿ ಹುದ್ದೆ ಕೈ ತಪ್ಪುತ್ತಿದೆ ಎನಿಸಿದಾಗ 'ನಾನು ಲಿಂಗಾಯತ, ನನಗೆ ಅನ್ಯಾಯ ಮಾಡಿಬಿಟ್ರು' ಅಂತ ಗೋಳಾಡಿದ್ದರು. ಆಮೇಲೆ ಯಾವಾಗ ಪರಿಸ್ಥಿತಿ ತಿರುಗಾ ಮುರುಗಾ ಆಗಿ ಸಿಎಂ ಪಟ್ಟ ಗ್ಯಾರಂಟಿ ಆಯಿತೋ ಯಡ್ಡಿಗೆ ತಾನು ಲಿಂಗಾಯತನೆಂಬ ವಿಚಾರವೇ ಮರೆತುಹೋಗಿದೆ.

ಉದಾಹರಣೆಗೆ ಕಳೆದ ಗುರುವಾರದಿಂದೀಚೆಗೆ ಯಡ್ಡಿ ನಡೆಸಿರುವ ದೈವಾರಾಧನೆ, ಪೂಜಾ ಕೈಂಕರ್ಯಗಳನ್ನೇ ನೋಡಿ. ಜಮ್ಮುವಿನ ವೈಷ್ಣೋದೇವಿ ತೀರ್ಥ ಕ್ಷೇತ್ರಕ್ಕೆ ಭೇಟಿ, ಶುಕ್ರವಾರ ಶ್ರೀರಂಗಪಟ್ಟಣದಲ್ಲಿ ಸೂರ್ಯನಾರಾಯಣ ಯಾಗ, ಆಮೇಲೆ ಬ್ರಾಹ್ಮಣ ಮಠಾಧೀಶ ಪೇಜಾವರ ಭೇಟಿ, ಆಮೇಲೆ ಬ್ರಾಹ್ಮಣ ಸಂಘಟನಾ ಹೆಡ್‌ಕ್ವಾಟ್ರಸ್ ಕೇಶವಕೃಪಾಕ್ಕೆ ಭೇಟಿ, ನಂತರ ಶನಿವಾರ ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ್ ಪಾದಪೂಜೆ....

ಇದರಲ್ಲಿ ನಯಾಪೈಸೆಯಷ್ಟಾದರೂ ಲಿಂಗಾಯತ ಧರ್ಮ, ನಂಬಿಕೆಗಳು ಕಾಣುತ್ತವೆಯಾ? ಯಾರೇ ಲಿಂಗಾಯತರಾದರೂ ಯಜ್ಞ ಯಾಗ ಮಾಡುತ್ತಾರೆಯೇ?

ಅದರಲ್ಲೂ ಸೂರ್ಯನಾರಾಯಣ ಯಾಗ!

ಈ ಯಾಗ ನಡೆಸಿಕೊಟ್ಟದ್ದು ವೇದಬ್ರಹ್ಮನೆಂಬ ಬಿರುದಾಂಕಿತ ಭಾನುಪ್ರತಾಪ ಶರ್ಮ.

ಅಲ್ಲಾ, ಅಲ್ಲಮಪ್ರಭು 'ವೇದವೆಂಬುದು ಓದಿನ ಮಾತು. ಶಾಸ್ತ್ರವೆಂಬುದು ಪುಂಡರ ಗೋಷ್ಠಿ' ಎಂದು ಗೇಲಿ ಮಾಡಿದ್ದರೆ ಈ ಬೆರಕೆ ಶರಣ ಯಡ್ಡಿ ಅಧಿಕಾರದ ಆಸೆಗೆ ಬಿದ್ದು ಓಡಿಹೋಗಿ ಸಿಕ್ಕಸಿಕ್ಕ ಬ್ರಾಹ್ಮಣರ ಕಾಲಿಗೆ ಬೀಳುತ್ತಿದ್ದಾರೆ. ಪುರೋಹಿತರಿಗೆ ಲಕ್ಷಾಂತರ ರೂಪಾಯಿ ದಕ್ಷಿಣೆ ಹಂಚುತ್ತಾ ಹೋಮ, ಹವನ, ಯಜ್ಞ ಯಾಗಾದಿಗಳಲ್ಲಿ ಮುಳುಗಿಹೋಗಿದ್ದಾರೆ.

ನಿಜವಾದ ಲಿಂಗಾಯತನ ಲಕ್ಷಣವಾ ಇದು?

...ಳಿಸಿಕೊಳ್ಳಿ ಎಂದು ಬೆಂಬಲ ಕೊಟ್ಟ. ರಂಭಾಪುರಿ ...ತ್ತು ಸುತ್ತೂರು ಮಠಾಧೀಶರ ನಡುವೆ ಓಡಾಡಿ ...ವರಾಜ್ ಪಾಟೀಲರ ಮೇಲೂ ಒತ್ತದ ತರಲು ...ರಿದುಂಬಿಸಿದ.

ವಾಸ್ತವವಾಗಿ ರಾಜ್ಯಪಾಲರ ವರದಿ ಏನೇ ಇದ್ದರೂ ...ಹ ಸಚಿವ ಶಿವರಾಜ್‌ಪಾಟೀಲರ ವರದಿಯೇ ಕೇಂದ್ರ ...ಜಕೀಯ ವ್ಯವಹಾರಗಳ ಸಂಪುಟ ಸಮಿತಿಗೆ ...ಮುಖ್ಯವಾಗಿತ್ತು.

ಶಿವರಾಜ್ ಪಾಟೀಲರ ಅಭಿಪ್ರಾಯದ ಮಹತ್ವ ...ರಿದ್ದ ಸುತ್ತೂರು-ರಂಭಾಪುರಿಗಳು "ನೀವು ...ಂಗ್ರೆಸ್) ಯಡಿಯೂರಪ್ಪನವರಿಗೆ ಈ ಅವಕಾಶ ...ದರೆ ಶಾಶ್ವತವಾಗಿ ಲಿಂಗಾಯತರ ವಿರೋಧ ...ಕಟ್ಟಿಕೊಳ್ಳುತ್ತೀರಿ" ಎಂದು ಪಯವಾದ ಬೆದರಿಕೆ ...ಹಾಕಿದ್ದರು. ಒಕ್ಕಲಿಗರು ಜೆಡಿಎಸ್ ಜೊತೆ ಇದ್ದಾರೆ, ...ಲಿಂಗಾಯತರು ಈಗಾಗಲೇ ಬಿಜೆಪಿಯಲ್ಲಿ ಗುರುತಿಸಿ...ಕೊಂಡಿದ್ದಾರೆ, ದಲಿತ-ಮುಸ್ಲಿಮರು ಕಾಂಗ್ರೆಸ್ ನಂಬು... ಅವರಿಗೆ ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ನೆಟ್ಟಗಿರುವ ... ನಾಯಕನೂ ಇಲ್ಲ, ಹೀಗಿರುವಾಗ ಯಾವ ...ಮುಖಾರ್ಥಕ್ಕೆ ವಿಧಾನಸಭೆ ವಿಸರ್ಜಿಸುತ್ತೀರಿ ಎಂದೂ ...ಳಿಸಿದ್ದಾರೆ.

ಜೊತೆಗೆ ಶಿವರಾಜ್ ಪಾಟೀಲರ ಜಾತಿ ಬಂಧುಗ... ...ರು, ತಲೆ ಸವರುವ ಮಾತಾಡಿದ್ದಾರೆ. ಇದರಾಚೆಗೆ [illegible] ಇನ್ನೊಬ್ಬ ಸ್ವಾಮಿಯೂ ಯಡ್ಡಿ ಪರ ತಲೆ ತೂರಿಸಿದ್ದರು.

ಅದು ರಾವಲ್ ಭೀಮಶಂಕರ ಲಿಂಗ ಶಿವಾಚಾರ್ಯ ಮಹಾಸ್ವಾಮಿ!

ಈತ ವೀರಶೈವ ಪಂಚಪೀಠಗಳಲ್ಲಿ ಒಂದಾದ ಕೇದಾರ ಪೀಠದ ಜಗದ್ಗುರು. ಜಗದ್ಗುರು ಅಂದರೆ ಆರ್ಡಿನರಿ ಜಗದ್ಗುರು ಅಲ್ಲ, ಇವರು ತಮ್ಮನ್ನು ತಾವೇ 1008 ಜಗದ್ಗುರು ಎಂದು ಅನೌನ್ಸ್ ಮಾಡಿಕೊಂಡಿದ್ದಾರೆ. ಕಳೆದ ವಾರ ದೆಹಲಿಗೆ ಹೋಗಿದ್ದ ಯಡ್ಡಿ ಹಾಗೆ ವೈಷ್ಣೋದೇವಿಗೆ ಹೋದರೆಂದು ದಿನಪತ್ರಿಕೆಗಳಲ್ಲಿ ವರದಿ ಬಂತು. ಅವತ್ತು ಈ 128 ಎಂಎಲ್‌ಎಗಳ ನಾಯಕ ಯಡ್ಡಿ ಹೋಗಿದ್ದು ಈ 1008 ಜಗದ್ಗುರುವನ್ನು ನೋಡಲು. ಅಲ್ಲಿ ಭೀಮಶಂಕರ ಸ್ವಾಮಿ ಕಾಲಿಗೆ ಬಿದ್ದ ಯಡ್ಡಿ ಲಿಂಗಾಯತ ಪುರಾಣವನ್ನೆಲ್ಲಾ ಒದರಿ ಇನ್ನೊಬ್ಬ ಪಂಚ ಪೀಠ ಧ್ಯಾಕ್ಷ ಬಾಳೆ ಹೊನ್ನೂರಿನ ಸ್ವಾಮಿಗಳ ಬೆಂಬಲವಿರುವ ವಿಚಾರ ಹೇಳಿ, ಸುತ್ತೂರು ಮಠದ ಪ್ರಸ್ತಾಪ ಮಾಡಿ ಅಲ್ಲಿಂದಲೇ ಶಿವರಾಜ್ ಪಾಟೀಲರಿಗೆ ಫೋನ್ ಮಾಡಿಸಿ ಬಂದಿದ್ದರು.



ಯಾವಾಗ ಈ ಲಿಂಗಾಯತ [illegible] ಒತ್ತಡ [illegible] ಒಳಗಿದ್ದ ಲಿಂಗಾಯತನೂ ಎದ್ದು ನಿಂತ. ಈ ಜಾತಿ ಪ್ರೇಮ ಹೊರತಾಗಿ ಈ ಸ್ವಾಮಿಗಳು ಏನಾದರೂ ಡೀಲು ಕುದುರಿಸಿಕೊಟ್ಟರಾ ಗೊತ್ತಿಲ್ಲ, ಆದರೆ ಶಿವರಾಜ್ ಪಾಟೀಲರು ಮಾತ್ರ 'ಯಡ್ಡಿ ನೇತೃತ್ವದ ಸರ್ಕಾರ ರಚನೆಗೆ ಅವಕಾಶ ನೀಡುವುದೇ ಸೂಕ್ತ' ಎಂದು ವರದಿ ಕೆತ್ತಿ ಕಾನೂನು ಸಚಿವ ಭಾರದ್ವಜ್‌ಗೆ ರವಾನಿಸಿ ತಮ್ಮ ಲಿಂಗಾಯತ ಜನ್ಮ ಪಾವನ ಮಾಡಿಕೊಂಡು ಬಿಟ್ಟರು.

ಅತ್ತ ಕಾಂಗ್ರೆಸ್ ಹೈಕಮಾಂಡ್ ತನ್ನ ಮೇಲೆ ಯಾವುದೇ ಅಪವಾದ ಬರದಂತೆ ವಿಧಾನಸಭೆ ವಿಸರ್ಜನೆಗೆ ಹತ್ತಾರು ನೆಪಗಳಿರುವುದನ್ನು ಪತ್ತೆಹಚ್ಚಿ ಕಾಯುತ್ತಿದ್ದರೆ ಇತ್ತ ಶಿವರಾಜ್ ಪಾಟೀಲರ ಲಿಂಗಾಯತ ಪ್ರೇತ ಹೊಸ ಅನಿರೀಕ್ಷಿತ ತಿರುವಿಗೆ ಕಾರಣವಾಯಿತು. ಸ್ವತಃ ಕಾನೂನು ಮಂತ್ರಿ ಭಾರದ್ವಾಜ್ "ಗೃಹ ಸಚಿವರು ಹೀಗೆ ವರದಿ ನೀಡಿದ ಮೇಲೆ ನಾನು ಹೇಗೆ ವ್ಯತಿರಿಕ್ತ ಅಭಿಪ್ರಾಯ ಬರೆಯಲಿ" ಎಂದು ಕೆಲವು ಕಾಂಗ್ರೆಸ್ ನಾಯಕರ ಹತ್ತಿರ ಗೊಣಗಿದ್ದು ಈಗ ಗುಟ್ಟಾಗಿ ಉಳಿದಿಲ್ಲ, ಅಲ್ಲಿಂದಾ ಚೆಗೆ ಯಡ್ಡಿ [illegible] ಹೋಯಿತು. ರಾಷ್ಟ್ರಪತಿ ಆಳ್ವಿಕೆ [illegible] ಸರ್ಕಾರ ರಚನೆಗೆ [illegible]

[illegible]

ಹೈಕಮಾಂಡಿಗೂ ಕೆಲವು ಲೆಕ್ಕಾಚಾರಗಳು ಇರುತ್ತವಲ್ಲ?

ಅದರಲ್ಲಿ ಮೊಟ್ಟ ಮೊದಲನೆಯ ತರ್ಕ ಏನೆಂದರೆ

ಯಾವುದೇ ದಿನ ಕೈಕೊಡಬಹುದಾದ ಗೌಡರನ್ನು ನಂಬಿ ನಾಲ್ಕಾರು ತಿಂಗಳ ಕಾಂ-ದಳ ಮೈತ್ರಿ ಸರ್ಕಾರ ರಚಿಸುವುದಕ್ಕಿಂತ ಗೌಡರು ಬಿಜೆಪಿ ಜೊತೆಯೇ ಸೇರಿ ಕಿತ್ತಾಡಿಕೊಳ್ಳಲಿ ಎಂಬುದೂ ಒಂದಾಗಿತ್ತು.

ಈ ಗೊಂದಲಕಾರಿ ಸ್ಥಿತಿಯಲ್ಲಿ ಕಾಂಗ್ರೆಸ್ ಅಧಿಕಾರದಿಂದ ದೂರ ಉಳಿದು ವಿರೋಧ ಪಕ್ಷವಾಗಿ ದಕ್ಷತೆಯಿಂದ ಕೆಲಸ ಮಾಡಿದರೆ ನಾಳೆ ಅದೇ ಪೂರ್ಣ ಪ್ರಮಾಣದ ಅಧಿಕಾರ ತಂದುಕೊಡಬಹುದು ಎಂಬುದು ಇನ್ನೊಂದು ತರ್ಕವಾಗಿತ್ತು. ಉಳಿದಂತೆ ವಿನಾಕಾರಣ ಲಿಂಗಾಯತರ ವಿರೋಧ ಕಟ್ಟಿಕೊಂಡು, ಹೇಳಿಕೊಳ್ಳಲಿಕ್ಕೆ ಯಾವ ಸಾಧನೆಗಳಿಲ್ಲದೆ, ತೋರಿಸಲಿಕ್ಕೆ ಖಡಕ್ ಲೀಡರ್‌ಗಳಿಲ್ಲದೆ ಇರುವಾಗ ಸುಖಾಸುಮ್ಮನೆ ಯಾಕೆ ವಿಧಾನಸಭೆ ವಿಸರ್ಜಿಸಿ ಎಲೆಕ್ಷನ್ ಎಂಬ ಅಪತ್ತನ್ನು ತಂದುಕೊಳ್ಳಬೇಕು [illegible]

ಹಾಗಾಗಿ ವೈದ್ಯ ಹೇಳಿದ್ದೂ, ರೋಗಿ ಬಯಸಿದ್ದೂ ಒಂದೇ ಆಗಿ ಯಡ್ಡಿ ಸಿಎಂ ಆಗುತ್ತಿದ್ದಾರೆ

[illegible] ●

ಜವಳಿ ಕದ್ದ ಐತಿಹಾಸಿಕ ವಿಮಾನ ಇಂಗ್ಲೆಂಡ್‌ನಲ್ಲಿ ಪ್ರತ್ಯಕ್ಷ!




ನಮ್ಮ ರಾಜಕಾರಣಿಗಳ ಧನದಾಹ ಎಷ್ಟಿದೆಯೆಂದರೆ ಅವರಿಗೆ ಸಣ್ಣ ಅವಕಾಶ ಸಿಕ್ಕರೆ ಯಾರಿಗೂ ಗೊತ್ತಾಗದಂತೆ ಇಡೀ ದೇಶವನ್ನೇ ಮತ್ತೊಂದು ರಾಷ್ಟ್ರಕ್ಕೆ ಪರಭಾರೆ ಮಾಡಿ ಒಂದಿಷ್ಟು ಲಂಚ ಗಿಂಜಿ ಸುಮ್ಮನಾಗುತ್ತಾರೆ. ಇದಕ್ಕೆ ಐದು ವರ್ಷಗಳ ಹಿಂದೆ ಗುಲ್ಬರ್ಗಾದಿಂದ ನಾಪತ್ತೆಯಾದ ಐತಿಹಾಸಿಕ ವಿಮಾನದ ಡೀಲೇ ಪ್ರತ್ಯಕ್ಷ ಸಾಕ್ಷಿ.

ಕಳೆದ ವರ್ಷ ಈ ವಿಮಾನವು ಇಂಗ್ಲೆಂಡಿನ ದಾಖಲೆಗಳಲ್ಲಿ ಪ್ರತ್ಯಕ್ಷವಾಗಿದ್ದು ಮೊನ್ನೆ ಅದರ ನಾಪತ್ತೆಯನ್ನು ಕುರಿತಂತೆ ಸಿಒಡಿ ತನಿಖಾ ತಂಡವು ಡಾ. ಬಿ.ಜಿ. ಜವಳಿ ಸೇರಿದಂತೆ ಹಲವಾರು ಜನರ ಮೇಲೆ ಚಾರ್ಜ್‌ಶೀಟನ್ನು ದಾಖಲಿಸಿದೆ.

ಪ್ರಕರಣದ ಹಿನ್ನೆಲೆ

ದ್ವಿತೀಯ ವಿಶ್ವ ಸಮರ ಸಂದರ್ಭದಲ್ಲಿ ಜರ್ಮನಿಯ ಹಿಟ್ಲರನ ನಾಝಿ ಸೈನ್ಯದ ಯುದ್ಧ ವಿಮಾನ ಬಿ.ಎಫ್. 109 ಮೆಸರ್ಮಿಟ್ 1939 ರಲ್ಲಿ ಲಂಡನ್ನಿನ ಹೊರವಲಯದಲ್ಲಿ ಪತನಗೊಂಡಿತ್ತು. ಇದನ್ನು ಜರ್ಮನಿಯ ಪೈಲಟ್ ಕೇವಿಯರ್ ರೇ ಎಂಬುವವನು ಚಾಲನೆ ಮಾಡುತ್ತಿದ್ದನು ಎಂದು ಆನಂತರ ನಾಝಿ ದಾಖಲೆಗಳಿಂದ ತಿಳಿದುಬಂದಿತ್ತು. ಆ ಯುದ್ಧದಲ್ಲಿ ಬ್ರಿಟನ್ನಿನ ರಾಯಲ್ ಏರ್ ಫೋರ್ಸ್‌ನ ಎರಡು ತುಕಡಿಗಳಿಗೆ ಹಣ ನೀಡಿ ಸಹಕರಿಸಿದ್ದಕ್ಕೆ ಆ ವಿಮಾನವನ್ನು 1941 ರಲ್ಲಿ ಬ್ರಿಟಿಷರು ಹೈದರಾಬಾದಿನ ನಿಜಾಮನಿಗೆ ಗೌರವ ಕಾಣಿಕೆಯನ್ನಾಗಿ ನೀಡಿದ್ದರು. ಹಲವು ದಿನಗಳ ನಂತರ ಆ ವಿಮಾನವನ್ನು ಗುಲ್ಬರ್ಗಾದ ಮೆಹಬೂಬ್ ಗುಲ್ಷನ್ ಗಾರ್ಡನ್‌ನಲ್ಲಿ ಸಾರ್ವಜನಿಕರ ಪ್ರದರ್ಶನಕ್ಕೆಂದು ನಿಜಾಮ ಇಟ್ಟಿದ್ದನು. ಸ್ವಾತಂತ್ರ ಬಂದನಂತರ 1961 ರಲ್ಲಿ ಗುಲ್ಬರ್ಗಾದ ಮಹಾನಗರ ಪಾಲಿಕೆ ಅದನ್ನು ಹೈದರಾಬಾದ್ ಕರ್ನಾಟಕ ಎಜುಕೇಷನ್ ಸೊಸೈಟಿ ನಡೆಸುತ್ತಿರುವ ಪೂಜ್ಯ ದೊಡ್ಡಪ್ಪ ಅಪ್ಪ ಎಂಜಿನಿಯರಿಂಗ್ ಕಾಲೇಜಿಗೆ ವರ್ಗಾಯಿಸಿತು.

ಅಂದಿನಿಂದ 2002ರ ತನಕ ಆ ಕಾಲೇಜಿನ ಆವರಣದಲ್ಲಿ ಬಿದ್ದಿದ್ದ ವಿಮಾನದ ಬಗ್ಗೆ ಯಾರಿಗೂ ಕಾಳಜಿ ಇರಲಿಲ್ಲ. ಅದ್ಯಾವುದೋ ಹಳೇ ವಿಮಾನ, ಅದಕ್ಕೆ ಯಾವ ಬೆಲೆಯೂ ಇಲ್ಲ ಎಂದೇ ಎಲ್ಲರೂ



ಭಾವಿಸಿದ್ದರು. ಬಿಸಿಲು, ಮಳೆ ಇತ್ಯಾದಿ ನೈಸರ್ಗಿಕ ವಿಕೋಪಗಳನ್ನು ಎದುರಿಸುತ್ತಲೇ ಬಿದ್ದಿದ್ದ ವಿಮಾನದ ಹಿಂಭಾಗದಲ್ಲಿ ನಾಝಿಗಳ ಸ್ವಾಸ್ತಿಕ ಚಿಹ್ನೆ ಮತ್ತು ಅದರ ತಯಾರಿಕಾ ಸಂಖ್ಯೆಯೂ ಮಾಸದೇ ಉಳಿದಿತ್ತು.

2001ರಲ್ಲಿ ಜಗ್ಗನ್ ಪಿಲ್ಲರಶೆಟ್ಟಿ ಎಂಬ ವಿಮಾನ ಯಾನ ತಜ್ಞ ಆಕಸ್ಮಿಕವಾಗಿ ಗುಲ್ಬರ್ಗಾಕ್ಕೆ ಭೇಟಿ ಇಟ್ಟಾಗ ಈ ಯುದ್ಧ ವಿಮಾನದ ಪಳೆಯುಳಿಕೆಯನ್ನು ಕಂಡು ದಂಗಾದರು. ಹಿಟ್ಲರನ ವಿಮಾನವೊಂದು ಕರ್ನಾಟಕಕ್ಕೆ ಬಂದದ್ದು ಹೇಗೆ ಎಂದು ಅವರು ವಿಚಾರಿಸಿದಾಗ ಅದರ ಐತಿಹಾಸಿಕ ಮೌಲ್ಯ ಗೊತ್ತಾಯಿತು. ಯಾಕೆಂದರೆ ಗುಲ್ಬರ್ಗಾದಲ್ಲಿ ಯಾರಿಗೂ ಬೇಡವಾಗದೆ ಬಿದ್ದಿದ್ದ ವಿಮಾನವು ಈಗ ಜಗತ್ತಿನಲ್ಲಿ ಉಳಿದಿರುವ ಎರಡನೆ ವಿಮಾನ ಮಾತ್ರ. ಆದ್ದರಿಂದ ಇವತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅದರ ಬೆಲೆ ಸುಮಾ... ಕೋಟಿ ರೂಪಾಯಿಗಳು! ಪಿಲ್ಲರಶೆಟ್ಟಿ ನಡೆಸುವ ... ಪ್ಲೇನ್ಸ್ ಆಫ್ ಇಂಡಿಯಾ ಎಂಬ ವೆಬ್‌ಸೈಟಿನಲ್ಲಿ ವಿಮಾನದ ವಿಷಯ ಪ್ರಕಟಗೊಂಡು ಐತಿಹಾ... ವಿಮಾನಯಾನ ವಲಯದಲ್ಲಿ ರೋಮಾಂಚನ... ಮೂಡಿಸಿತ್ತು.

ಈ ವಿಮಾನದ ಬಗ್ಗೆ ಭಾರತದ ವಾಯುಪ... ಯವರಿಗೂ ಗೊತ್ತಾಗಿ ಅವರು ಅದನ್ನು ತಮ್ಮ ವಶ... ತೆಗೆದುಕೊಳ್ಳಲು ಪ್ರಯತ್ನಗಳನ್ನು ಶುರುಮಾಡಿದರ... ಅಂದಿನ ಏರ್ ಕಮಾಂಡರ್ ಟಿ. ಜೆ. ಮಾಸ್ಟ... ಎಂಬುವವರು ಕರ್ನಾಟಕದ ಅಂದಿನ ಮುಖ್ಯ ಕಾಯ... ದರ್ಶಿ ರವೀಂದ್ರರವರಿಗೆ ಪತ್ರ ಬರೆದು "ಆ ವಿಮಾನ... ಒಂದು ರಾಷ್ಟ್ರೀಯ ಐತಿಹಾಸಿಕ ಸ್ವತ್ತು, ಅದನ್ನು ಕೂಡ... ವಶಪಡಿಸಿಕೊಂಡು ಭಾರತದ ವಾಯುದಳಕ್ಕೆ ವರ್ಗಾ... ಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿ" ಎಂದು ಹೇಳಿದ್ದ... ಆದರೆ ರಾಜ್ಯ ಸರಕಾರವು ಎಂದಿನಂತೆ ಈ ವಿಷಯದಲ... ನಿಧಾನಗತಿಯಲ್ಲಿ ಸಾಗಿತ್ತು.

ಇದೆಲ್ಲ ನಡೆಯುತ್ತಿದ್ದಾಗಲೇ ಎಚ್.ಕೆ.ಇ ಸೊಸೈಟಿ... ಅಧ್ಯಕ್ಷ ಮತ್ತು ಮಾಜಿ ಸಂಸದ ಬಿ.ಜಿ. ಜವಳಿಗೆ ... ವಿಮಾನದ ಆರ್ಥಿಕ ಬೆಲೆ ಗೊತ್ತಾಗಿದ್ದು. ಆಗ ಅ... ತನ್ನ ಆಟವನ್ನು ಪ್ರಾರಂಭಿಸಿದ. "ಈ ವಿಮಾನ ನಮ್ಮದ... ಬದಲಾಗಿ ಗುಲ್ಬರ್ಗಾ ನಗರ ಪಾಲಿಕೆಗೆ ಸೇರಿದ... ನಮ್ಮ ಕಾಲೇಜಿನಲ್ಲಿ ಪ್ರದರ್ಶಿಸಲು ಪಾಲಿಕೆ ನೀಡಿತ್ತ... ಅವರನ್ನೇ ಕೇಳಿ" ಎಂದು ಒಂದೆಡೆ ತಿಪ್ಪೆ ಸಾರಿಸಿ... ಜವಳಿ ಇನ್ನೊಂದೆಡೆ ಗಿರೀಶ್ ನಾಯ್ಡು ಎಂಬ ಪ್ರಾಚೀ... ವಸ್ತುಗಳ ವ್ಯಾಪಾರಗಾರನೊಂದಿಗೆ ವ್ಯವಹಾ... ಕುದುರಿಸಲಾರಂಭಿಸಿದ.

ಇದರ ಬಗ್ಗೆ ಸರ್ಕಾರಕ್ಕೆ ಗೊತ್ತಾಗುವ ಮುನ್ನವೇ... ಒಂದು ಹಳೇ ಮೋರಿಸ್ ಮೈನರ್ ಕಾರು, ಒಂದ... ಓಬರಾಯನ ಮೋಟರ್ ಸೈಕಲ್ಲು ಮತ್ತು ಒಂದ... ಭಾರತ ನಿರ್ಮಿತ ಹಳೇ ವಿಮಾನ... ಇಷ್ಟು ಚಿಲ್ಲ... ವಸ್ತುಗಳ ಮೋಹಕ್ಕೆ ಬಿದ್ದ ಜವಳಿ ರಾತ್ರೋರಾ... ವಿಮಾನವನ್ನೇ ಕಾಲೇಜಿನ ಆವರಣದಿಂದ ನಾಪ... ಮಾಡಿಸಿದ್ದ! ಎಲ್ಲಿಯ ಏಳು ಕೋಟಿ ರೂಪಾ...

'ಪ್ರೀತಿ'ಯನ್ನು ಉಂಡೂಹೋದ, ಕೊಂಡೂಹೋದ ಭಂಡಾರಿ

ಬಾಗಲಕೋಟೆ

ಬಹುಶಃ ಮಧ್ಯರಾತ್ರಿ ಆಗಿರಬೇಕು. ಒಮ್ಮಿಂದೊಮ್ಮೆ ಫೋನ್ ರಿಂಗುಣಿಸಿತು. ಆ ನಂಬರ್ ನೋಡಿದಾಕ್ಷಣ ಅದು ಅಪರಿಚಿತರ ಕರೆ ಎಂಬುದು ಗೊತ್ತಾಯಿತು. ಹಾಗಾಗಿ ಅದನ್ನು ಬೇಕೆಂತಲೇ ರಿಸೀವ್ ಮಾಡಿಕೊಳ್ಳಲಿಲ್ಲ. ಆದರೇನಂತೆ? ಫೋನ್ ರಿಂಗುಣಿಸುವುದು ಮಾತ್ರ ನಿಲ್ಲಲಿಲ್ಲ. ಕೊನೆಗೆ ಫೋನ್ ಎತ್ತಿ "ಹಲೋ" ಎಂದದ್ದೇ ತಡ, ಆ ಕಡೆಯಿಂದ ಹೆಣ್ಣು ಮಗುವೊಂದು ಬಿಕ್ಕಿ ಬಿಕ್ಕಿ ಅಳುವ ಸದ್ದನ್ನು ಬಿಟ್ಟು ಬೇರೇನೂ ಕೇಳುತ್ತಿಲ್ಲ. ಬಹುಶಃ ಯಾರಿಗೋ ಮಾಡಬೇಕಾದ ಫೋನ್ ತಪ್ಪಿ ನನಗೆ ಬಂದಿರಬೇಕು ಅನ್ನಿಸಿ, "ಅಲ್ಲಾರಿ.... ನೀವು ಯಾರಿಗೆ ಫೋನ್ ಮಾಡಿದ್ದೀರಿ? ನಂಬರನ್ನು ಸರಿಯಾಗಿ ನೋಡಿಕೊಳ್ಳಿ" ಎಂದೆ.

ಬಿಕ್ಕಳಿಸಿ ಅಳುವುದನ್ನು ನಿಲ್ಲಿಸಿದ ಆ ಮಹಿಳೆ "ನೀವು ಗೌರಿ ಲಂಕೇಶ್ ಪತ್ರಿಕೆಯವರಲ್ಲವೆ?" ಎಂದು ಕೇಳಿದಳು. ನಾನು ಗಾಬರಿಯಿಂದ "ಹೌದು?" ಎಂದುತ್ತರಿಸಿದೆ. ಅದಕ್ಕೆ ಆಕೆ "ನಾನು ನಿಮಗೇ ಫೋನ್ ಮಾಡಿದ್ದು, ನನ್ನ ನೋವನ್ನು ನಿಮ್ಮ ಮುಂದೆ ತೋಡಿಕೊಳ್ಳುವುದಕ್ಕೆ, ನನ್ನ ಪಾಲಿಗೆ ಎಲ್ಲರೂ ಸತ್ತು ಹೋಗಿದ್ದಾರೆ. ನೀವೂ ಕೇಳಿಸಿಕೊಳ್ಳುವುದಿಲ್ಲವೆ? ನನಗೆ ಯಾರೂ ಇಲ್ಲ, ನಾನು ಯಾಕಾದರೂ ಬದುಕಬೇಕು?" ಎಂದು ಆಕೆ ಬಿಕ್ಕಳಿಸುತ್ತಾ ಹೇಳಿದಳು. ಆಗ ಅನಿವಾರ್ಯವಾಗಿ ಆಕೆಯ ಮಾತಿಗೆ ಸ್ಪಂದಿಸಬೇಕಾಯಿತು. ಆಕೆಯ ದುಃಖವನ್ನು ಶಮನಗೊಳಿಸುವ ನಾಲ್ಕಾರು ಮಾತಾಡಿ ಫೋನ್ ಕೆಳಗಿಟ್ಟೆ.


ಮರುದಿನ ಮುಂಜಾನೆ ಆಕೆಗೆ ಇರಬಹುದಾದ ತೊಂದರೆಯಾದರೂ ಯಾವುದು? ಪಾಪ ಎಂಥ ಅಪಾಯದಲ್ಲಿ ಸಿಕ್ಕಿದ್ದಾಳೋ ಏನೋ, ನೋಡಿ ಸಾಂತ್ವನ ಹೇಳಿ ಬಂದರಾಯಿತು ಎಂದು ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಇಳಕಲ್ಲ ಬಸ್ ಹತ್ತಿದೆ. ನೇರ ಅವಳು ಇರುವಲ್ಲಿಗೆ ಹೋದರೆ ಏನಾದರೂ ಅವಗಡ ಘಟಿಸಬಹುದೆಂದು ಬಸ್ ಸ್ಟಾಂಡ್ ಎದುರಿಗೇ ಇರುವ ಪೊಲೀಸ್ ಠಾಣೆಗೆ ಹೋದೆ. ಅಲ್ಲಿನ ಪಿ.ಎಸ್.ಐ. ಪಿ.ಆರ್. ರಾಘವೇಂದ್ರರೊಂದಿಗೆ ಮಾತಾಡಿ ಜೆ.ಡಿ.ಬಿಮಾಣಿ ಎಂಬ ಪೋಲಿಸ್‌ನನ್ನು ಜೊತೆ ಕರೆದುಕೊಂಡು ನಗರದ ಮಹಾಂತೇಶ್ವರ ಮಠದ ಸಮೀಪವಿರುವ, ಜೈನರ ಮನೆಗಳಿರುವ ಬಿಜ್ಜಳ ಗಲ್ಲಿಯತ್ತ ಕಾಲು ಹಾಕಿದೆ. ಅಲ್ಲಿ ರತನಲಾಲ್ ಭಂಡಾರಿ ಮನೆ ಹುಡುಕುವುದೇನೂ ಕಷ್ಟವಾಗಿರಲಿಲ್ಲ, ಆಗಾಗ ಜೆ.ಡಿ.ಬಿಮಾಣಿ ಈ ಮನೆಗೆ ಹೋಗಿ ಬರುವುದನ್ನು ಮಾಡುತ್ತಿದ್ದರಾದ್ದರಿಂದ ನೇರವಾಗಿ ಅವರ ಮನೆ ಅಂಗಳದಲ್ಲೇ ನಿಂತು "ಭಂಡಾರಿಯವರೆ...." ...ವು ಕೂಗುತ್ತಿದ್ದಂತೆ, ವ್ಯಕ್ತಿಯೊಬ್ಬ ಮನೆಯಿಂದ ಇಣುಕಿಹಾಕಿ ನೋಡಿ, ವಿಚಾರಿಸಿ, ಮನೆಯೊಳಗೆ ಅನಿವಾರ್ಯ ಕರೆದೊಯ್ದ.

ಸುಮಾರು 20-21 ವರ್ಷದ ಹುಡುಗಿಯೊಬ್ಬಳು ಎದ್ದು ನಿಲ್ಲುವುದಕ್ಕೂ ತ್ರಾಣವಿಲ್ಲದೆ ತೀರಾ ನಿಸ್ತೇಜವಾಗಿ ನೆಲ ಹಿಡಿದು ಕುಳಿತಿದ್ದಳು. ಕಂಗಳು ಅತ್ತು ಅತ್ತು ಕೆಂಪಾಗಿರುವಂತೆ ಕಂಡವು. ಉಟ್ಟ ಬಟ್ಟೆ ಮಾಸಿಹೋಗಿದ್ದವು. ಎಂದೋ ಎಣ್ಣೆ ಕಂಡಿದ್ದ ಕೂದಲು ಕೆದರಿಕೊಂಡಿದ್ದವು. ಉಮ್ಮಳಿಸಿ ಬರುತ್ತಿದ್ದ ವಾಂತಿಯನ್ನು ತಡೆತಡೆದು ನಿಲ್ಲಿಸುವುದಕ್ಕೆ ಹರಸಾಹಸ ಪಡುತ್ತಿದ್ದಳು. ಇದನ್ನೆಲ್ಲ ಸೂಕ್ಷ್ಮವಾಗಿ ನಾನು ಗಮನಿಸುತ್ತಿರುವಾಗ ಅಲ್ಲೇ ಕುಳಿತಿದ್ದ ದಢೂತಿ ಹೆಂಗಸೊಬ್ಬಳು ನಾಟಕೀಯವಾಗಿ "ನೋಡ್ರಿ ನಾವೇ ಪೊಲೀಸ್ ಸ್ಟೇಷನ್‌ಕ ಬರಬೇಕಂದೀವ್ರಿ. ನೀವ್ ಬಂದದ್ದ ಚೋಲೋ ಆತು. ಈಕೆ ಎರಡೂ ಮೂರು ದಿನಾ ಅಯ್ತು ಊಟಾನೇ ಮಾಡವಲ್ಲಳು......" ಎಂದು ಹೇಳಲಾರಂಭಿಸಿದಳು.

ಅವಳ ಪ್ರವರ ಹೀಗೆ ಮುಂದುವರೆಯುತ್ತಿದ್ದಂತೆ ಆ ಹುಡುಗಿ ವ್ಯಗ್ರಳಾಗಿ ಇದ್ದ ಬಿದ್ದ ತನ್ನ ಶಕ್ತಿಯನ್ನು ಒಟ್ಟುಗೂಡಿಸಿಕೊಂಡು ಏನೋ ಹೇಳುವುದಕ್ಕೆ ಪ್ರಯತ್ನಿಸುತ್ತಿದ್ದಳು. ಆದರೆ ಹೇಳುವುದಕ್ಕೆ ಸಾಧ್ಯವಾಗದಂತೆ ದುಃಖ ಉಮ್ಮಳಿಸಿ ಬರುತ್ತಲೇ ಇತ್ತು. ನಾವು ಸಾಂತ್ವನ ಹೇಳಿದ ನಂತರ ಸಾವರಿಸಿಕೊಂಡು ಮಾತಾಡತೊಡಗಿದಳು.

"ಅಂವ್ನ ದೀಪಕ ನನಗ ಮದುವೆ ಆಗ್ತಿನಂತ ಹೇಳಿ ಮೋಸ ಮಾಡಿ ಕಲಬುರ್ಗಿಯಿಂದ ಕರಕೊಂಡು ಬಂದು ಇಲ್ಲಿ ಬಿಟ್ಟು ದೂರ ಎಲ್ಲೋ ಹೋಗ್ಯಾನ್ರೀ..... ಅಂವ್ನ ಮನೆಯವರೆಲ್ಲೂ ಸೇರಿ ಅಹ್ಮದ ನಗರಕ್ಕ ಕಳಿಸ್ಯಾರ. ಮಂದಿ ಮುಂದ ತಮ್ಮ ಮಗ ಓಡಿ ಹೋಗ್ಯಾನ ಅಂತ ಹೇಳಿಕೊಂಡ ತಿರಗತಾರ್ರೀ. ಅಂವ್ನ ನನ್ನ ಕೈಯಾಗ ಸಿಗಬೇಕು. ಇಳಕಲ್ಲಿನ ಬಜಾರದಾಗ ಅಂವ್ನ ಚಪ್ಲಿ ಚಪ್ಲಿಲೇ ಹೊಡದು ನನ್ನ ಸೇಡು ತೀರಿಸ್ಕೋಳಿಲ್ಲಾಂದ್ರ ನನ್ ಹೆಸ್ರು ಪ್ರೀತಿನೆ ಅಲ್ಲಾರಿ.....


"ನಿವ್ ಬಂದೀರಿ ಅಂತ ಇವ್ರು ನಾಟಕ ಮಾಡಾಕ ಹತ್ಯಾರ. ನನಗ ಇವ್ರ ಮನೆಯವರೆಲ್ಲ ಸೇರಿ 8-10 ತಿಂಗಳ ಇದೇ ರೂಮ್‌ನಲ್ಲಿ ಕೂಡಿ ಹಾಕ್ಯಾರ. ನಾನು ಲ್ಯಾಟ್ರಿನ್, ಬಾತ್‌ರೂಮ್‌ಗೆ ಹೋಗಬೇಕಂದ್ರು ಬಾಗ್ಲಾ ಬಡ್ದು ಬಡ್ದು ಸಾಕಾಗಿ ಹೋಗ್ತಿತ್ತು. ನೀವೇ ತಿರುಗಾಡಿ ಆಜು-ಬಾಜು ಮನೆಯಾಗಾರೆ ಕೇಳ್ರಲ....! ನಾನು ದಿನಾ ಬಾಗಿಲ ಬಡಿಯೋ ಸದ್ದು ಎಲ್ಲೋರು ಕೇಳಿರಲೇಬೇಕು. ನೋಡ್ರೀ ಅಣ್ಣಾವ್ರ, ನಾನು ಈ ಮನಿಗೆ ಬಂದ ಎರಡು ವರ್ಷ ಆಗಾಕ ಬಂತು. ನಾ ಉಟಗೊಂಡಬಂದ ಬಟ್ಟಿ ಬಿಟ್ರ ಇನ್ನೊಂದು ಇವ್ರು ಕೊಟ್ಟಿಲ್ಲ, ಕೈಯಾಗ ಬಳಿ ಇಲ್ಲ, ಹಣಿ ಮ್ಯಾಲ ಟಿಕಳಿ ಇಲ್ಲ, ಹೋಗ್ಲಿ ತಲೆ ಕೂದಲಿಗೆ ಒಂದೇ ಒಂದು ರಬ್ಬರ ಬ್ಯಾಂಡ ಇಲ್ಲ, ನಾನು ಅಪ್ಪ ಅವ್ವನ ತೊರದು ಇಂವ್ನ ನಂಬಕೊಂಡು ಇವ್ರ ಮನಿಗಿ ಬಂದ್ರ, ಇವ್ರ ಮಗನ ದೂರ ಯಾವ್ದೋ ಊರಾ... ಮುಚ್ಚಿಟ್ಟು ನಾಟಕ ಮಾಡಾಕ ಹತ್ಯಾರ. ಇಂತವ್ರ... ನಾನ ಪಾಠ ಕಲಸಾದೇ ಬಿಡಾದೇ ಇಲ್ಲ....."



ರತನ್‌ಲಾಲ್ ಭಂಡಾರಿ

ಹೀಗೆ ಒಂದೇಸಮ ನಮ್ಮ ಮುಂದೆ ರೋದಿಸು... ಕುಳಿತಿದ್ದ ಪ್ರೀತಿ ಗುಲಬರ್ಗಾದ ಶಿವಶರಣಪ್ಪ ಹಾ... ವಿಜಯಲಕ್ಷ್ಮಿ ದಂಪತಿಗಳ ಮಗಳ... ಇಳಕಲ್ಲಿನ ವ್ಯಾಪಾರಿ ರತನಲಾ... ಭಂಡಾರಿಯವರ ಪುತ್ರ ದೀಪ... ಭಂಡಾರಿಯ ಪ್ರೇಮಪಾಶಕ್ಕೆ ಬಲಿ ಬ... ನತದೃಷ್ಟೆ. ದೀಪಕ್ ಭಂಡಾರಿ ಎ... ಘಟಿಂಗ ಆಗಾಗ ಗುಲ್ಬರ್ಗಾದಲ್ಲಿರು... ತನ್ನ ಅಕ್ಕನ ಮನೆಗೆ ಹೋಗಿಬಂ... ಮಾಡುತ್ತಿದ್ದಾಗ ಹತ್ತಿರದಲ್ಲೇ ವಾಸಿಸುತ್ತಿ... ಹದಿಹರೆಯದ ಚಲುವೆ ಪ್ರೀತಿಯೊಂ... ಭೇಟಿಯಾದ. ಅದು ಕೊನೆಗೆ ಪ್ರೇ... ವಾಗಿ ಬೆಳೆದಿದೆ. ಸುಮಾರು ಮೂ... ವರ್ಷಗಳ ಕಾಲ ಕದ್ದುಮುಚ್ಚಿ ನಡೆ... ಇವರಿಬ್ಬರ ಪ್ರೇಮ ಪ್ರಕರಣ ಸಂದ... ದಲ್ಲಿ ಪ್ರೀತಿ ತನ್ನ ಭಾವಿ ಪತಿಗೆ ಟೂವೀಲ್ಲರ್ ಕೊಡಿಸಿದ್ದಾ... ದುಬಾರಿ ಬೆಲೆಯ ಮೊಬೈಲ್ ಅನ್ನೂ ಕೊಡಿಸಿದ್ದಾಳೆ...


ಕೊನೆಗೊಂದು ದಿನ ದೀಪಕ್ ಹೇಳಿದ್ದನ್ನೆಲ್ಲ ನಂಬಿ... ಪ್ರೀತಿ ತನ್ನ ಮನೆಯವರಿಗೆ ಹೇಳದೆ ಅವನೊಂದಿ... ಇಳಕಲ್ಲಿಗೆ ಬಂದಿದ್ದಾಳೆ. ಒಮ್ಮಿಂದೊಮ್ಮೆಲೇ ಈಕೆಯನ... ಮನೆಗೆ ಕರಕೊಂಡು ಹೋಗುವುದರ ಬಗ್ಗೆ ಹೆದರಿ...



ಪ್ರಿಯಕರನಿಂದ ವಂಚನೆಗೊಳಗಾದ ಪ್ರೀತಿ

ಲೇಯ ಐತಿಹಾಸಿಕ ವಿಮಾನ, ಎಲ್ಲಿಯ ಈ ಮೂರು ಕಾಸಿನ ವ್ಯವಹಾರ?!

ಅಲ್ಲಿಯತನಕ ಯಾರಿಗೂ ಬೇಡವಾಗಿದ್ದ, ಆದರೆ ಇದ್ದಕ್ಕಿದ್ದಂತೆ ಎಲ್ಲರಿಗೂ ಬೇಕಾಗಿದ್ದ ವಿಮಾನ ಮಾಯವಾದ ಕೂಡಲೇ ಗುಲ್ಬರ್ಗಾದ ಜನ ಹೌಹಾರಿದರು. ವಿಮಾನವೊಂದನ್ನು ಯಾರ ಕಣ್ಣಿಗೂ ಬೀಳದಂತೆ ಸಾಗಿಸುವುದು ಸುಲಭದ ಕೆಲಸವಲ್ಲ, ಆದರೂ ಅದನ್ನು ನಾಪತ್ತೆಯಾಗಿಸಿದ್ದು ಹೇಗೆ ಎಂದು ಜನ ಪ್ರಶ್ನಿಸಲಾರಂಭಿಸಿದರು. ಅದರಲ್ಲೂ ಮಾಜಿ ಸಚಿವ ಎಸ್. ಕೆ. ಕಾಂತಾರವರು ಈ ಪ್ರಕರಣ ಕುರಿತಂತೆ ವಿಚಾರಣೆ ನಡೆಯಬೇಕೆಂದು ಪಟ್ಟು ಹಿಡಿದರು. ಆದರೆ ಸರ್ಕಾರ ಅವರ ಮಾತನ್ನು ಕೇಳಲಿಲ್ಲ. ಯಾಕೆಂದರೆ ಜವಳಿ ರಾಜಕೀಯವಾಗಿ ಪ್ರಬಲರಾಗಿದ್ದರು ಮಾತ್ರವಲ್ಲ ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರ ಅಳಿಯ ಕೂಡ ಈತ.



ಆಂಧ್ರ ಮೂಲದ ಬೆಂಗಳೂರು ವಾಸಿಯಾದ, ಪ್ರಾಚೀನ ವಸ್ತುಗಳ ವ್ಯಾಪಾರಿ, ಹಾರ್ಸ್‌ಲೇಸ್ ಕ್ಯೂರಿಯೇಜಸ್ ಸಂಸ್ಥೆಯ ಗಿರೀಶ್ ನಾಯ್ಡು ಎಂಬ ವ್ಯಕ್ತಿಯೋರ್ವನ ಮೂಲಕ ಈ ವಿಮಾನವನ್ನು ಜವಳಿ ಗುಪ್ತವಾಗಿ ಸಾಗಿಸಿದ್ದರ ಬಗ್ಗೆ ಕಾಂತಾರವರು 2002 ರಲ್ಲಿ ಪೊಲೀಸರಿಗೆ ದೂರನ್ನು ನೀಡಿದರು. ಆಗಲೂ ಹೇತ್ಲಾಂಡಿ ಸರಕಾರಗಳು ಇದೊಂದು ಬಹುದೊಡ್ಡ ಪ್ರಕರಣವಲ್ಲ ಎಂಬಂತೆ ಸುಮ್ಮನಿದ್ದವು. ಆದರೆ ಕಾಂತಾ ಸುಮ್ಮನಿರಲಿಲ್ಲ, 2005 ರಲ್ಲಿ ಧರ್ಮಸಿಂಗ್ ಸರಕಾರವಿದ್ದಾಗ ಅವರ ಆಮೇಲೆ ಒತ್ತಡ ಹೇರಿ ಇದರ ತನಿಖೆಯನ್ನು ಸಿಓಡಿಗೆ ಒಪ್ಪಿಸುವಂತೆ ಮಾಡಿದರು.

ಈ ಮಧ್ಯೆ ಈ ವಿಮಾನವು ಆಶ್ಚರ್ಯಕರ ರೀತಿಯಲ್ಲಿ ಇಂಗ್ಲೆಂಡಿನಲ್ಲಿ ಮತ್ತೆ ಪ್ರತ್ಯಕ್ಷವಾಯಿತು. ಜವಳಿ ನೆರವಿನಿಂದ ಅದನ್ನು ಕದ್ದಿದ್ದ ಗಿರೀಶ್ ನಾಯ್ಡು ಅದನ್ನು ಮಾಲ್ಡೀವ್‌ನ ಉದ್ಯಮಿಯೊಬ್ಬನಿಗೆ ಕೇವಲ ಮೂರು ಲಕ್ಷ ರೂಪಾಯಿಗಳಿಗೆ ಮಾರಿದ್ದ. ಆ ಉದ್ಯಮಿ ಆನಂತರ ಅದನ್ನು ಇಂಗ್ಲೆಂಡಿನ ಚಾನೆಲ್ ಐಲ್ಯಾಂಡ್ಸ್ ಎಂಬ ಪ್ರದೇಶದಲ್ಲಿರುವ ರೇರ್ ಏರೋ ಲಿಮಿಟೆಡ್ ಎಂಬ ಕಂಪನಿಗೆ ಮಾರಿದ್ದ.


ಬ್ರಿಟನ್ ಮತ್ತು ಫ್ರಾನ್ಸ್ ನಡುವೆ ಇರುವ ಈ ಚಾನೆಲ್ ಐಲ್ಯಾಂಡ್ಸ್ ಎಂತಹ ಪ್ರದೇಶವೆಂದರೆ ಅದು ಹವಾಲಾ ಮಂದಿಗೆ ಸ್ವರ್ಗವಿದ್ದಂತೆ. ಅಲ್ಲಿನ ಅಧಿಕಾರಿಗಳು ಯಾರ ಆದಾಯದ ಮೂಲಗಳನ್ನು ಪ್ರಶ್ನಿಸುವುದಿಲ್ಲವಾದ್ದರಿಂದ ಹೀಗೆ ಕದ್ದ ಮಾಲುಗಳನ್ನು ಕೊಂಡದ್ದು ಹೇಗೆ ಎಂಬುದನ್ನೂ ಕೇಳುವುದಿಲ್ಲ. ಈ ವ್ಯವಸ್ಥೆಯ ಲಾಭ ಪಡೆದ ರೇರ್ ಏರೋ ಲಿಮಿಟೆಡ್ ಕಂಪನಿಯು ತನ್ನ ವಶಕ್ಕೆ ಬಂದಿದ್ದ ಹೊಸ ವಿಮಾನವನ್ನು ಇಂಗ್ಲೆಂಡಿನ ಖಾಸಗಿ ವಿಮಾನಯಾನ ಇಲಾಖೆಯ ಮುಂದೆ ಜಿ-ಸಿಡಿಟಿಐ ಎಂಬ ಹೆಸರಿನಲ್ಲಿ ನೊಂದಾಯಿಸಿತು.

ಗುಲ್ಬರ್ಗಾ

ಇದನ್ನು ಗಮನಿಸಿದ ಜಗ್ಗನ್ ಪಿಲ್ಲರಶೆಟ್ಟಿ ಕೂಡಲೇ ಆ ವಿಮಾನ ಬೇರೆ ಯಾವುದೂ ಅಲ್ಲ, ಬದಲಾಗಿ ಐದು ವರ್ಷಗಳ ಹಿಂದೆ ಗುಲ್ಬರ್ಗಾದಿಂದ ಕದ್ದ ವಿಮಾನವೇ ಇದು ಎಂಬುದನ್ನು ಅದರ ತಯಾರಿಕಾ ಸಂಖ್ಯೆಯ ಮೂಲಕ ದೃಢಪಡಿಸಿದರು. ಅಷ್ಟೇ ಅಲ್ಲದೆ, ಇಂಗ್ಲೆಂಡಿನಲ್ಲಿರುವ ವಿಮಾನ ತಂತ್ರಜ್ಞ ಲಿನ್ ರಿಟ್ಗರ್ ಎಂಬುವವರು ಕೂಡ ಈ ವಿಮಾನವು ಗುಲ್ಬರ್ಗಾದಲ್ಲಿದ್ದ ವಿಮಾನ ಎಂಬುದನ್ನು ಖಾತರಿಪಡಿಸಿದರು.

ವಿಚಿತ್ರದ ಸಂಗತಿ ಯಾವುದೆಂದರೆ ಈ ರೇರ್ ಏರೋ ಲಿಮಿಟೆಡ್ ಎಂಬ ಕಂಪನಿಯ ಮಾಲೀಕ ಯಾರೆಂಬುದನ್ನು ಇಲ್ಲಿಯವರೆಗೂ ಯಾರಿಂದಲೂ ಖಚಿತಪಡಿಸಲಾಗಿಲ್ಲ. ಗೈ ಬ್ಲಾಕ್ ಎಂಬ ಬ್ರಿಟಿಷ್ ಕೋಟ್ಯಾಧಿಪತಿ ಈ ಕಂಪನಿಯ ಒಡೆಯ ಎಂದು ಕೇಳಿಬರುತ್ತಿದೆಯಾದರೂ ಆತ ತನಗೂ ಆ ಕಂಪನಿಗೂ ಯಾವುದೇ ಸಂಬಂಧವಿಲ್ಲವೆಂದೂ, ಆದರೆ ಆ ವಿಮಾನವನ್ನು ಖರೀದಿಸುವ ಆಸಕ್ತಿ ತನಗಿದೆ ಎಂದೂ ಹೇಳಿದ್ದಾನೆ.

ಇದೆಲ್ಲ ಆದದ್ದು ಹೋದ ವರ್ಷ ನವೆಂಬರ್ ತಿಂಗಳಲ್ಲಿ, ಅಂದರೆ ಇವತ್ತಿಗೆ ಸರಿಯಾಗಿ ಒಂದು ವರ್ಷದ ಹಿಂದೆ. ಈ ವಿಷಯವನ್ನೂ ಕಾಂತಾರವರು ಸಿಓಡಿ ತನಿಖಾ ತಂಡದ ಗಮನಕ್ಕೆ ತಂದರು. ಆದಾದ ನಂತರ ಸಿಓಡಿ ಅಧಿಕಾರಿಗಳು ತನಿಖೆಯನ್ನು ಚುರುಕುಗೊಳಿಸಿ ಇದೇ 2007 ಅಕ್ಟೋಬರ್ 15 ರಂದು ಜವಳಿ ಸೇರಿದಂತೆ ಅಂದಿನ ಎಚ್.ಕೆ.ಇ ಸೊಸೈಟಿಯ ಸದಸ್ಯರಾದ ಡಾ. ಬಸವರಾಜ ಪಾಟೀಲ ಬೀದರ್, ಆರ್.ಎಸ್. ಹೊಸಗೌಡರ, ಬಿ.ಸಿ.ಪಾಟೀಲ ಗುಲ್ಬರ್ಗಾ, ಶಿವಶರಣಪ್ಪ ಮಂಠಾಳೆ, ಶಿವಶರಣಪ್ಪ ಅಲ್ಲಪುರ, ಬಸವರಾಜ ಬಿಜಾಪುರ, ಡಾ. ಸಂಪತ್ ಕುಮಾರ ಲೋಹಿಯಾ, ಡಾ. ಅಪ್ಪಾಸಾಹೇಬ, ಡಾ. ನಾಗಠಾಣ, ನಾಮದೇವ ಚಿಂಚೋಳಿ, ನಾಗಪ್ಪ ಎಲೇರಿ, ವಿಜಯಕುಮಾರ ದೇಶಮುಖ, ಡಾ. ಭೀಮಾಶಂಕರ ಬಿಲಗುಂದಿ, ಆಗ ಪ್ರಾಂಶುಪಾಲರಾಗಿದ್ದ ವಿ.ಡಿ. ಮೈತ್ರಿ ಹಾಗೂ ಗಿರೀಶ್ ನಾಯ್ಡು ಮೇಲೆ ಚಾರ್ಜ್‌ಶೀಟ್ ದಾಖಲಿಸಿದ್ದಾರೆ.




ಸಂವಿಧಾನದ ವಿವಿಧ ಕಲಂಗಳಡಿ ದಾಖಲಿಸಿರುವ ಚಾರ್ಜ್ ಶೀಟಿನಲ್ಲಿ ವಂಚನೆ, ಮೋಸ, ಸಾಕ್ಷ್ಯಾಧಾರಗಳನ್ನು ನಾಪತ್ತೆ ಮಾಡಿರುವುದು ಮತ್ತು ಸುಳ್ಳು ಪತ್ರದ ಸೃಷ್ಟಿ ಆರೋಪಗಳನ್ನು ಜವಳಿ ಮತ್ತು ಇತರರ ವಿರುದ್ಧ ಮಾಡಲಾಗಿದೆ. ಇವು ಸಾಬೀತಾದರೆ ಜವಳಿ ಕನಿಷ್ಠ ಐದು ವರ್ಷಗಳ ಕಾಲ ಜೈಲಿನಲ್ಲಿರಬೇಕಾಗುತ್ತದೆ.

ಇದೆಲ್ಲದರಿಂದ ಹಲವು ಅಂಶಗಳಂತೂ ಸ್ಪಷ್ಟವಾಗಿದೆ. ಅದೇನೆಂದರೆ ಜವಳಿ ಎಂಬ ಖದೀಮನೇ ಈ ಐತಿಹಾಸಿಕ ವಿಮಾನವನ್ನು ಕಳ್ಳತನದಿಂದ ಮಾರಾಟ ಮಾಡಿರುವುದು, ಗಿರೀಶ್ ನಾಯ್ಡು ಎಂಬ ದಳ್ಳಾಳಿ ಇದರ ವ್ಯಾಪಾರವನ್ನು ಕುದುರಿಸಿದ್ದು, ಎಚ್.ಕೆ.ಇ ಸೊಸೈಟಿಯ ಸದಸ್ಯರಿಗೆ ಇದು ಗೊತ್ತಿದ್ದೂ ಸುಮ್ಮನಿದ್ದದ್ದು ಮತ್ತು ಇಲ್ಲಿನ ಗುಲ್ಬರ್ಗಾದಿಂದ ಐದು ವರ್ಷಗಳ ಹಿಂದ ನಾಪತ್ತೆಯಾದ ವಿಮಾನ ಕಳೆದ ವರ್ಷ ಇಂಗ್ಲೆಂಡಿನಲ್ಲಿ ಪ್ರತ್ಯಕ್ಷವಾಗಿರುವುದು... ಇವೆಲ್ಲವೂ ನಿಜ.

ಹೀಗೆ ಹಾಡುಹಗಲೇ ಐತಿಹಾಸಿಕ ವಿಮಾನವೊಂದನ್ನು ಬಿ.ಜಿ.ಜವಳಿ ಎಂಬ ಖಬರಗೇಡಿ ಬೇರೆ ದೇಶಕ್ಕೆ ಮಾರುತ್ತಾನೆಂದರೆ ಈತ ಇನ್ನೆಂಥ ಕೆಲಸಗಳನ್ನು ಮಾಡಲಿಕ್ಕಿಲ್ಲ? ಐತಿಹಾಸಿಕ ಪ್ರಜ್ಞೆ ಕಾಳಜಿಗಳೇ ಇಲ್ಲದ ಇಂಥ ನಾಮರ್ದ ರಾಜಕಾರಣಿಗಳನ್ನು ಪಡೆದ ಕಲಬುರ್ಗಿ ಧನ್ಯ ಅಲ್ಲವೆ? ಇಂಥ ಕಳ್ಳರಿಗೆ ಎಂತಹ ಶಿಕ್ಷೆ ನೀಡಬೇಕು? ಅದು ಈ ದೇಶದಲ್ಲಿ ಸಾಧ್ಯವಾ? ಯಾರಿಂದ ಸಾಧ್ಯ ಎಂಬ ಪ್ರಶ್ನೆಗಳು ಮಾತ್ರ ಹಾಗೇ ಉಳಿಯುತ್ತವೆ.....

■ ವಿಶ್ವಾರಾಧ್ಯ ಸತ್ಯಂಪೇಟೆ



ಪ್ರೀತಿ ಹಾಗೂ ದೀಪಕ್ ಭಂಡಾರಿಯ ನಿಶ್ಚಿತಾರ್ಥದ ವೇಳೆ ಇಳಕಲ್ಲಿನ ಮಹಾಂತಸ್ವಾಮಿಗಳು

ದೀಪಕ್ ಆಕೆಯನ್ನು ಇಲಕಲ್ಲಿನ ದರ್ಶನ ಲಾಡ್ಜನಲ್ಲಿ ಕೆಲವು ದಿನ ಇರಿಸಿದ್ದಾನೆ. ಆನಂತರ ಧೈರ್ಯ ಮಾಡಿ ಪ್ರೀತಿಯನ್ನು ಮನೆಗೂ ಕರಕೊಂಡು ಹೋಗಿದ್ದಾನೆ. ಹೀಗೆ ಏಕಾಏಕಿ ಯಾರೋ ಒಬ್ಬ ಹುಡುಗಿಯನ್ನು ಆತ ಮನೆಗೆ ಕರೆತಂದುದು ಮನೆಯವರೆಲ್ಲರಲ್ಲೂ ಗಾಬರಿ ಹುಟ್ಟಿಸಿದೆ. ರಾದ್ಧಾಂತವೂ ಆಗಿದೆ. ಇದಕ್ಕೆ ಮುಖ್ಯ ಕಾರಣ ಹುಡುಗಿ ಲಿಂಗಾಯತ ಜಾತಿಯವಳಾಗಿದ್ದು ಮತ್ತು ಹುಡುಗ ಮಾರ್ವಾಡಿ ಸಮುದಾಯದವನಲ್ಲದೆ ಜೈನ್ ಧರ್ಮಕ್ಕೆ ಸೇರಿದ್ದು.

ಹೀಗಾಗಿ ಮನೆಯವರೆಲ್ಲ ಸೇರಿ ಹೇಗಾದರೂ ಸೈ ಹುಡುಗಿಯನ್ನು ಉಪಾಯವಾಗಿ ಇಳಕಲ್ಲಿನಿಂದ ಸಾಗಹಾಕುವ ಹುನ್ನಾರ ನಡೆಸಿದ್ದಾರೆ. ಆದರೆ ದೀಪಕನೆ ತನ್ನ ಸರ್ವಸ್ವ ಎಂದು ನಂಬಿ ತನ್ನ ಮನೆಯವರನ್ನು ತೊರೆದು ಬಂದಿದ್ದ ಪ್ರೀತಿಗೆ ಇದು ನುಂಗಲಾರದ ತುತ್ತಾಗಿದೆ. ಆಕೆ ಗುಲ್ಬರ್ಗಾದ ಡಿವೈಎಸ್‌ಪಿ ಛಾಳಿ ಮತ್ತು ಮುಂತಾದವರೊಂದಿಗೆ ಚರ್ಚಿಸಿ ಇಳಕಲ್ಲಿನ ವಿಜಯ ಮಹಾಂತೇಶ್ವರ ಮಠಕ್ಕೆ ಹೋಗಿ ಅಲ್ಲಿನ ಸ್ವಾಮಿಗಳ ಸಹಾಯವನ್ನು ಕೋರಿದ್ದಾಳೆ.

ಅಷ್ಟೊತ್ತಿಗೆ ಈ ಅಂತರ್‌ಜಾತಿಯ ಪ್ರೇಮ ಕಥೆ ಇಳಕಲ್ಲಿನ ತುಂಬೆಲ್ಲ ಹರಡಿ ಸಾರ್ವಜನಿಕರೆಲ್ಲ ಮಠದ ಅಂಗಳದಲ್ಲಿ ಜಮಾಯಿಸಿದ್ದರು. ಇಳಕಲ್ಲಿನ ಮಹಾಂತ ಸ್ವಾಮಿಗಳು ಮಠಕ್ಕೆ ದೀಪಕನ ತಂದೆ-ತಾಯಿ ಮುಂತಾದವರನ್ನು ಕರೆಸಿ ವಿಚಾರಣೆ ನಡೆಸಿದರು. ಕೊನೆಗೆ ದೀಪಕನ ಮನೆಯವರೆಲ್ಲ ಒಪ್ಪಿಕೊಂಡು ಲಗ್ನ ಮಾಡಿಕೊಡಲೇಬೇಕು ಎಂದು ಸ್ವಾಮಿಗಳು ತಿಳಿ ಹೇಳಿದರು. [illegible]


ಕಾಕ ಸುಭಾಷ ಭಂಡಾರಿ, ಸಹೋದರ ರಾಹುಲ್ ಭಂಡಾರಿ, ತಾಯಿ ಕಮಲಾ ಭಂಡಾರಿ ಎಲ್ಲರೂ ಒಪ್ಪಿದರು. ಇಳಕಲ್ಲಿನ ಜೈನ ಸಮಾಜದ ಮುಖಂಡರಾದ ಭರತ ಬೋರಾ, ಗೌತಮ ಬೋರಾ, ದಾಮೋದರ ಡಾಗಾ ಮುಂತಾದವರೆಲ್ಲ ಈ ಸಭೆಯಲ್ಲಿ ಭಾಗವಹಿಸಿ ಈ ಪ್ರೀತಿ ಪ್ರಕರಣ ಸುಖಾಂತ್ಯವಾಗುವ ನಿಟ್ಟಿನಲ್ಲಿ ಪ್ರಯತ್ನಿಸಿದವರಂತೆ ವರ್ತಿಸಿದರು.

ಆದರೆ ಅಂದು ಒಂದು ತಕರಾರೆತ್ತಿದರು. "ಈಗ ಚಾತುರ್‌ಮಾಸ ಇದೆ. ನಾವು ಈ ಸಂದರ್ಭದಲ್ಲಿ ಲಗ್ನಗಳನ್ನು ನೆರವೇರಿಸುವುದಿಲ್ಲ, ಇನ್ನೊಂದು ಆರು ತಿಂಗಳು ಕಳೆಯಲಿ. ನಾವೇ ವಿಜೃಂಭಣೆಯಿಂದ ಲಗ್ನ ಮಾಡಿಕೊಳ್ಳುತ್ತೇವೆ. ಈಗ ಸದ್ಯ ಬರೀ ಎಂಗೇಜ್‌ಮೆಂಟ್ ಮಾತ್ರ ಆಗಲಿ" ಎಂದು ಅವರೆಲ್ಲ ಸ್ವಾಮಿಗಳ ಮುಂದೆ ಅವಲತ್ತುಕೊಂಡರು.

ಇವರ ನಾಟಕದ ಹಿಂದಿನ ಉದ್ದೇಶವನ್ನು ಅರಿಯದೆ ಮಹಾಂತಸ್ವಾಮಿಗಳು ಅನಿವಾರ್ಯವಾಗಿ "ಇರಲಿ ಬಿಡ್ರಪ್ಪ... ನಮ್ ನಿಮ್ಮ ಎಲ್ಲೋರ ಎದುರೆ ಒಪ್ಪಿಕೊಂಡಾರ ಅಂದಮ್ಯಾಲೆ ಮುಂದ ಇವ್ರು ಲಗ್ನ ಮಾಡೆ ತೀರತಾರ..." ಎಂದು ಹೇಳಿದರು. ಅದಕ್ಕೆ ಅಲ್ಲಿದ್ದವರೆಲ್ಲ ಒಲ್ಲದ ಮನಸ್ಸಿನಿಂದ ಸುಮ್ಮನಾಗಬೇಕಾಯಿತು.

ಯಾವಾಗ ಮಠದ ಸ್ವಾಮಿಗಳ ನೇತೃತ್ವದಲ್ಲಿ ಪ್ರೀತಿ ಮತ್ತು ದೀಪಕ್ ಭಂಡಾರಿಯ ನಿಶ್ಚಿತಾರ್ಥ ನಡೆದು ಹೋಯಿತೋ ಆಗ ಆತನ ತಂದೆ ರತನ್‌ಲಾಲ್ ಭಂಡಾರಿ ಹೌಹಾರಿದ. ಅಂದೇ ರಾತ್ರಿ ತನ್ನ ಮುದ್ದು ಮಗನನ್ನು ರಾಜಸ್ಥಾನದ ಅಹ್ಮದ ನಗರಕ್ಕೆ ಅಟ್ಟಿಬಿಟ್ಟ. ದೀಪಕ್ ಭಂಡಾರಿ ಅಲ್ಲೊಂದು ವ್ಯಾಪಾರವನ್ನು ಶುರುಮಾಡಿ ಕೊಂಡು ಪ್ರೀತಿ ಇದ್ದ ಇಳಕಲ್ಲಿನ ಕಡೆಗೆ ತಲೆಯನ್ನೂ ಹಾಕದೆ ಇದ್ದುಬಿಟ್ಟ.

ಇತ್ತ ರಾಮನಿಗಾಗಿ ಶಬರಿ ಕಾಯ್ದಂತೆ ದೀಪಕನಿಗಾಗಿ ಪ್ರೀತಿ ಕಾಯ್ದದ್ದೆ ಬಂತು. ನಿಶ್ಚಿತಾರ್ಥದ ದಿನದಿಂದ ಇಂದಿನವರೆಗೂ ಮುಖ ತೋರಿಸುವುದಿರಲಿ, ಒಂದೇ ಒಂದು ಫೋನ್ ಕರೆ ಕೂಡ ಆತ ಮಾಡಿಲ್ಲ. ಇನ್ನು ಮದುವೆಯಂತೂ ಕನಸಿನ ಮಾತಾಯಿತು. ಆದರೆ ದೀಪಕನನ್ನೇ ನಂಬಿದ ಪ್ರೀತಿ ಮತ್ತೆ ತನ್ನ ತಂದೆ ತಾಯಿಯ ಮನೆಗೆ ಹೋಗಲೇ ಇಲ್ಲ, ಬದಲಾಗಿ ಭಂಡಾರಿಯವರ ಮನೆಯಲ್ಲೇ ಉಳಿದಳು. ರತನಲಾಲ್ ಭಂಡಾರಿಯ ಪತ್ನಿ, ಇನ್ನಿಬ್ಬರು ಪುತ್ರರು, ಮತ್ತೋರ್ವ ಸೊಸೆಯ ಅವಕೃಪೆಗೆ ಪಾತ್ರಳಾಗಿಯೂ ಪ್ರೀತಿ ದೀಪಕನಿಗೆ ಕಾಯುತ್ತಲೇ ಇದ್ದಾಳೆ.



ದೀಪಕ್‌ನ ಕಾಕ ಸುಭಾಷ್ ಭಂಡಾರಿ

ಈ ನಡುವೆ ಭಂಡಾರಿ ಕುಟುಂಬದವರೆಲ್ಲ ಸೇರಿ ಹೈಕೋರ್ಟ ಮೆಟ್ಟಲೇರಿದರು. "ನಮಗೆ ಸಂಬಂಧವೇ ಇಲ್ಲದ ಹುಡುಗಿಯೊಬ್ಬಳು ನಮ್ಮ ಮನೆಗೆ ಬಂದು ಕುಳಿತಿದ್ದಾಳೆ. ಅವಳನ್ನು ಪೊಲೀಸರು ಹಾಗೂ ಲಿಂಗಾಯತ ಸಮಾಜದ ಮುಖಂಡರು ನಮ್ಮ ಮನೆಗೆ ಕರಕೊಂಡು ಬಂದು ಬಿಟ್ಟಿದ್ದಾರೆ. ಇವಳನ್ನು ನಮ್ಮ ಮನೆಯಿಂದ ಹೊರಗೆ ಹಾಕಿ" ಎಂದು ನ್ಯಾಯಾಲಯವನ್ನು ಕೋರಿದರು. ಅಷ್ಟೇ ಅಲ್ಲದೆ "ನಮ್ಮ ಮಗ ನಮ್ಮ ಮನೆಯಲ್ಲೇ ಇಲ್ಲ, ಆತ ಎಲ್ಲೋ ಕಳೆದು ಹೋಗಿದ್ದಾನೆ" ಎಂದು ಅಪ್ಪಟ ಸುಳ್ಳು ಹೇಳಿಕೆಯನ್ನೂ ಕೋರ್ಟಿಗೆ ನೀಡಿದರು.

ಇದನ್ನು ಕುರಿತಂತೆ ನ್ಯಾಯಾಲಯವು ವಿಚಾರಣೆ ನಡೆಸುತ್ತಿದ್ದು ತೀರ್ಪು ಬರುವವರೆಗೂ ಪ್ರೀತಿಯು ಭಂಡಾರಿಯವರ ಮನೆಯಲ್ಲೇ ಇರಬೇಕೆಂದೂ, ಆಕೆಗೆ ಯಾವ ರೀತಿಯ ತೊಂದರೆಯನ್ನು ಕೊಡಬಾರದೆಂದೂ, ಯಥಾಸ್ಥಿತಿಯನ್ನು ಕಾಪಾಡಬೇಕೆಂದೂ ಆದೇಶಿಸಿದೆ. ಆದರೆ ಪ್ರೀತಿಯ ಬದುಕು ಆ ಮನೆಯಲ್ಲಿ ಪ್ರತಿ ದಿನದ ನರಕವಾಗಿದೆ.

ಪ್ರೀತಿಯ ಬದುಕಿನಲ್ಲಿ ಪ್ರೀತಿಯ ಭರವಸೆಯನ್ನು ಮೂಡಿಸಿ ಈಗ ಇದ್ದಕ್ಕಿದ್ದಂತೆ ಮಾಯವಾಗಿರುವ ದೀಪಕ್ ಭಂಡಾರಿ ಪ್ರೀತಿಯನ್ನು ಅಕ್ಷರಶಃ ಉಂಡೂ ಹೋಗಿದ್ದಾನೆ, ಕೊಂಡೂ ಹೋಗಿದ್ದಾನೆ. ಇಂಥ ಘಟಂಗನಿಗೆ ಸಮಾಜ ಯಾವ ಶಿಕ್ಷೆ ನೀಡಬೇಕು? ತಮ್ಮ ಮಗನಿದ್ದೂ ಆತನನ್ನು ಬಚ್ಚಿಟ್ಟುಕೊಂಡು ಮನೆಯಲ್ಲಿರುವ ಹುಡುಗಿ ಪ್ರೀತಿಗೆ ಕಿರುಕುಳ ಕೊಡುತ್ತ ಸಾಗಿರುವ ರತನಲಾಲ್ ಭಂಡಾರಿಯಂಥ ಕಟುಕರಿಗೆ ಯಾವುದರಿಂದ ಇಕ್ಕಬೇಕು? ತಮ್ಮ ಮನೆಯ ಹುಡುಗಿಗೇ ಹೀಗೆ ಬೇರೆ ಯಾರಿಂದಲೋ ಮೋಸವಾಗಿದ್ದರೆ ಭಂಡಾರಿ ಕುಟುಂಬದವರು ಸುಮ್ಮನೆ ಇರುತ್ತಿದ್ದರೆ? ಸ್ವಲ್ಪ ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

■ ವರದಿಗಾರ


ಮಾನವೀಯತೆ ಮರೆದ ಪೊಲೀಸರು


ಪೊಲೀಸರೆಂದರೆ ಜನಸಾಮಾನ್ಯರೆಲ್ಲ ರಾಕ್ಷಸರೆಂದೇ ಭಾವಿಸಿರುತ್ತಾರೆ. ಅವರಲ್ಲಿ ಮಾನವೀಯತೆ, ಅಂತಃಕರಣವಿರುವುದೂ ಅಪರೂಪವೆಂದೇ ತಿಳಿದಿರುತ್ತಾರೆ. ಆದರೆ ಪ್ರೀತಿಯ ವಿಷಯದಲ್ಲಿ ಮೊದಲಿಂದಲೂ ಮುತುವರ್ಜಿ ವಹಿಸಿದವರೆಂದರೆ ಆಗ ಠಾಣಾಧಿಕಾರಿಯಾಗಿದ್ದ ಎಸ್‌ಐ ಎಸ್.ವಿ.ಚಾಲದೆ, ಸಿಪಿಐ ವಿ. ಕುಮಾರ ಹುನಗುಂದ, ಡಿವೈಎಸ್‌ಪಿ ಬಿ.ಎ.ಪಾಟೀಲರು ಹಾಗೂ ಜೆ.ಡಿ.ಲಮಾಣಿ ಎಂಬ ಪೊಲೀಸರು.

ಪ್ರೀತಿಗೆ ಮೋಸ ಮಾಡಿ ಅವಿತುಕೊಂಡು ಕುಳಿತಿರುವ ದೀಪಕ್ ಭಂಡಾರಿಯನ್ನು ಹುಡುಕುವ ಶೋಧದಲ್ಲಿ ಇವರೆಲ್ಲರೂ ತೊಡಗಿದ್ದಾರೆ. ಅದೇ ವೇಳೆಗೆ ಭಂಡಾರಿಯ ಮನೆಯಲ್ಲಿಯೇ ಇರುವ ಪ್ರೀತಿಗೆ ಆಗಾಗ ಸಾಂತ್ವನ ನೀಡುತ್ತ, ಅವಳ ಬೇಕು, ಬೇಡಗಳಿಗೆ ಸ್ಪಂದಿಸುತ್ತಿದ್ದಾರೆ. ದೀಪಕ್‌ನನ್ನು ಹುಡುಕಿ ಆದಷ್ಟು ಬೇಗ ಪ್ರೀತಿಯ ಜೊತೆ ಕೂಡಿಸುತ್ತೇವೆ ಎಂದೇ ಹೇಳುತ್ತಿದ್ದಾರೆ.

[illegible]









ರಾಜ್ಯಕ್ಕೆ ಚೆಡ್ಡಿಗಳ ರಕ್ತಸಿಕ್ತ ಸ್ಕೆಚ್!

ಕರ್ನಾಟಕಕ್ಕೆ ಏನೋ ಒಂದು ದುರಂತ ಕಾದಿದೆ. ಅತ್ತ ಧಾರವಾಡದಲ್ಲಿ ಆರ್‌ಎಸ್‌ಎಸ್ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯು ಅಂತ್ಯಗೊಳ್ಳುತ್ತಿದ್ದಂತೆ ಇತ್ತ ಬೆಂಗಳೂರಿನಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಕಾರ್ಯಾರಂಭ ಮಾಡಲು ಸಜ್ಜಾಗಿದೆ. ಕಾರ್ಯಕಾರಿಣಿ ಸಭೆಯಲ್ಲಿ ಚೆಡ್ಡಿಗಳು ತೆಗೆದುಕೊಂಡ ಕೊಲೆಗಡುಕ ನಿರ್ಧಾರಗಳನ್ನು ಜಾರಿಗೊಳಿಸಿ ರಕ್ತಪಾತ ಹರಿಸಲು ಭಜರಂಗದಳದಂತಹ ಕ್ರಿಮಿನಲ್ ಗ್ಯಾಂಗ್‌ಗಳು ತುದಿಗಾಲಲ್ಲಿ ನಿಂತಿದ್ದರೆ, ಅವರಿಗೆ ಕಾನೂನಿನ ರಕ್ಷಣೆ ಒದಗಿಸಲು ಬಿಜೆಪಿಯಂತಹ ಕಾಚಾಗಳು ಸಿದ್ಧತೆ ನಡೆಸಿವೆ. ಇದನ್ನೆಲ್ಲಾ ಒಟ್ಟಾಗಿಟ್ಟು ವಿಶ್ಲೇಷಿಸಿದರೆ ಕರ್ನಾಟಕ ಕಾಣಲಿರುವ ರಕ್ತಸಿಕ್ತ ಭವಿಷ್ಯದ ದರ್ಶನವಾಗದಿರದು.

ದಕ್ಷಿಣ ಭಾರತಕ್ಕೆ ಚೆಡ್ಡಿಗಳ ಲಗ್ಗೆ

ಬಾಬ್ರಿ ಮಸೀದಿಯನ್ನು ಕೆಡವಿ, ಹಿಂದೂ-ಮುಸ್ಲಿಮ್ ಸಮುದಾಯಗಳ ನಡುವೆ ದ್ವೇಷ, ವೈರತ್ವಗಳ ಬೀಜ ಬಿತ್ತಿ ದೇಶದಾದ್ಯಂತ ಸಾವಿರಾರು ಅಮಾಯಕ ಮುಸ್ಲಿಮರ ನರಮೇಧ ನಡೆಸಿ ಉತ್ತರ ಭಾರತದಲ್ಲಿ ಸಂಘ ಪರಿವಾರ ಒಂದಿಷ್ಟು ಮಟ್ಟಿಗೆ ತಳವೂರುವಲ್ಲಿ ಯಶಸ್ವಿಯಾಗಿತ್ತು. ಗುಜರಾತ್‌ನಲ್ಲಿ ಇದಕ್ಕೂ ಪೈಶಾಚಿಕವೆನ್ನಬಹುದಾದ ಹತ್ಯಾಕಾಂಡಗಳನ್ನು ನಡೆಸಿ ಮತ್ತೊಮ್ಮೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತ್ತು.

ಆದರೆ ದಕ್ಷಿಣ ಭಾರತವು ಕೋಮುವಾದಿ ಸಂಘ ಪರಿವಾರಕ್ಕೆ ತೆರೆಯದ ಬಾಗಿಲಂತಿತ್ತು. ಪೆರಿಯಾರ್‌ರವರ ಬ್ರಾಹ್ಮಣ್ಯ ವಿರೋಧಿ ಪ್ರಜ್ಞೆಯು ತಮಿಳುನಾಡಿನಲ್ಲಿ ಗಟ್ಟಿಯಾಗಿತ್ತು, ಕೇರಳದಲ್ಲಿ ಎಡಪಂಥೀಯ ಚಿಂತನೆ ಬೇರು ಬಿಟ್ಟಿತ್ತು, ಆಂಧ್ರದಲ್ಲಿ ಊಳಿಗಮಾನ್ಯವಿರೋಧಿ ಹೋರಾಟಗಳು ಪ್ರಬಲವಾಗಿದ್ದವು, ಕರ್ನಾಟಕದಲ್ಲಿ ಬಸವಣ್ಣ ಕುವೆಂಪು, ಶಿಶುನಾಳ ಶರೀಫರ ಸೌಹಾರ್ದ ಮನೋಭಾವ ಜನರ ಮನಸ್ಸಿನಲ್ಲಿ ಹಾಸುಹೊಕ್ಕಿತ್ತು.

ಆದರೂ ಕರ್ನಾಟಕವನ್ನೇ ತಮ್ಮ ದಕ್ಷಿಣ ಭಾರತದ ಪ್ರಯೋಗಶಾಲೆಯನ್ನಾಗಿಸಿಕೊಂಡ ಚೆಡ್ಡಿಗಳು ಇಲ್ಲಿ ತಮ್ಮ ಕಿತಾಪತಿಗಳನ್ನು ಪ್ರಾರಂಭಿಸಿದರು. ಹುಬ್ಬಳ್ಳಿಯಲ್ಲಿ ಈದ್ಗಾ ಮೈದಾನ ಗಲಾಟೆ, ಉರ್ದು ವಾರ್ತೆಯ ದೊಂಬಿ, ಕರಾವಳಿಯ ಕೇಸರೀಕರಣ ಮತ್ತು ಬಾಬಾಬುಡನ್ ಗಿರಿಯಂತಹ ವಿಚಾರಗಳನ್ನು ವಿವಾದಗಳನ್ನಾಗಿ ಪರಿವರ್ತಿಸಿ ಸ್ವಲ್ಪಮಟ್ಟಿಗೆ ಪ್ರಚಾರ ಪಡೆದರು.

ಈಗ ಚೆಡ್ಡಿಗಳ ಅಧಿಕಾರದ ದಾಹ ಮತ್ತು ದೇವೇಗೌಡರ ಪುತ್ರ ಪ್ರೇಮದಿಂದಾಗಿ ದಕ್ಷಿಣ ಭಾರತದಲ್ಲಿ ಸಂಘಪರಿವಾರವು ತನ್ನ ಅಕೌಂಟನ್ನು ತೆರೆದಿದೆ. ಇದೇ ಸಮಯಕ್ಕೆ ಸರಿಯಾಗಿ ಸಂಘಪರಿವಾರವು ರಾಜ್ಯದಲ್ಲಿ ತನ್ನ ಪೈಶಾಚಿಕ ಅಜೆಂಡಾವನ್ನು ಜಾರಿಗೊಳಿಸಲು ಒಂದು ಕಾರ್ಯಕಾರಿಣಿ ಸಭೆಯನ್ನು ನಡೆಸಿದೆ.

ಧಾರವಾಡ ಚೆಡ್ಡಿ ಸಭೆ



ಈ ಬಾರಿಯ ಆರ್‌ಎಸ್ಸೆಸ್ ಕಾರ್ಯಕಾರಿಣಿಯ ಬೈಠಕ್ ಧಾರವಾಡದಿಂದ 12 ಕಿ.ಮೀ. ದೂರದಲ್ಲಿರುವ ಗರಗ ಗ್ರಾಮದಲ್ಲಿ ಇದೇ ತಿಂಗಳ 2 ರಿಂದ 4 ರ ವರೆಗೆ ನಡೆಯಿತು. ಇಡೀ ದೇಶಕ್ಕೆ ರಾಷ್ಟ್ರಧ್ವಜವನ್ನು ಪೂರೈಸುವ ಗರಗ ಗ್ರಾಮದಲ್ಲಿ ಭಗವಧ್ವಜದ ಭಕ್ತರು ಸೇರಿದ್ದು ನಮ್ಮ ತ್ರಿವರ್ಣಕ್ಕೆ ಅವಮಾನವೆಸಗಿದಂತಿತ್ತು. ಗಾಂಧಿಯ ಚರಕ ವಿಜೃಂಭಿಸುವ 'ಈ ಗ್ರಾಮದಲ್ಲಿ ಅವರನ್ನು ಕೊಂದ ಗೋಡ್ಸೆಯ ಶನಿಸಂತಾನದ ಸಭೆ ನಡೆದದ್ದೂ ನಮ್ಮ ರಾಜ್ಯವು ಬರುವ ದಿನಗಳಲ್ಲಿ ತುಳಿಯಲಿರುವ ದುರಂತ ಹಾದಿಯ ದ್ಯೋತಕದಂತಿತ್ತು.



ಈ ಸಭೆ ಜರುಗುವ ಮುನ್ನ ಅಕ್ಟೋಬರ್ 29ರಿಂದಲೇ ಇಲ್ಲಿ ಠಿಕಾಣಿ ಹೂಡಿದ ಸಂಘದ ಸರಸಂಘ ಚಾಲಕ ಕೆ.ಸಿ. ಸುದರ್ಶನ್, ಪ್ರಧಾನ ಕಾರ್ಯದರ್ಶಿ ಮೋಹನ್ ಭಾಗವತ್, ಮದನ್‌ದಾಸ್ ದೇವಿ, ಭಾಯೂಜಿ ಜೋಶಿ, ವಿಶ್ವಹಿಂದೂ ಪರಿಷತ್ತಿನ ಅಧ್ಯಕ್ಷ ಅಶೋಕ್ ಸಿಂಘಾಲ್, ಪ್ರವೀಣ್ ತೊಗಾಡಿಯ, ಕೊಲ್ಕತ್ತಾದ ಮೋಟಲ್ ಘಾಜಿ, ಶ್ರೀಕಾಂತ್ ಜೋಶಿ, ಸುರೇಶ್‌ರಾವ್ ಕೇಟ್ಕರ್, ಹೈದರಾಬಾದಿನ ಭಾಣಯ್ಯ ಮತ್ತು ಗುಜರಾತ್‌ನ ಮಧು ಕುಲ್ಕರ್ಣಿ ಇದ್ದ ಹತ್ತು ಜನರ ಸಮಿತಿಯು ಪೂರ್ವಭಾವಿ ಸಭೆಯನ್ನು ನಡೆಸಿತ್ತು.

ಸಂಘಪರಿವಾರಕ್ಕೆ ಸೇರಿದ 23 ಸಂಘಟನೆಗಳ ಸುಮಾರು 316 ಪ್ರತಿನಿಧಿಗಳು ಕಾರ್ಯಕಾರಿಣಿ ಸಭೆಯಲ್ಲಿ ಭಾಗವಹಿಸಿದ್ದರು. ಕರ್ನಾಟಕದ ಕುರುಬ ಜನಸಮುದಾಯವನ್ನು ಮರುಳು ಮಾಡುವ ಉದ್ದೇಶದಿಂದ ಸಭೆಯ ವೇದಿಕೆಗೆ ಕನಕದಾಸರ ಭಾವಚಿತ್ರವಿರುವ ದೊಡ್ಡಬ್ಯಾನರನ್ನು ಬಳಸಲಾಗಿತ್ತು, ಇದಕ್ಕೆ ಸಾರ್ವಜನಿಕರಿಂದ ದೊಡ್ಡ ಪ್ರಮಾಣದಲ್ಲಿ ವಿರೋಧವೂ ವ್ಯಕ್ತವಾಯಿತು. ಅದಕ್ಕೆ ಮೋಹನ್ ಭಾಗವತ್ ಟೋಪಿ ಹಾಕುವ ಉತ್ತರ ನೀಡಿದ್ದೂ ಆಯಿತು. ಒಟ್ಟಿನಲ್ಲಿ ಆರ್‌ಎಸ್‌ಎಸ್ ಬೈಠಕ್ ಕರ್ನಾಟಕದ ಜನ ಪ್ರತಿಭಟನೆಯ ಮೂಲಕ ಸ್ವಾಗತಿಸಿದ್ದು ನೆಮ್ಮದಿ ನೀಡುವಂತಿತ್ತು.

ರಕ್ತದೋಕುಳಿ ನಡೆಸುವ ನಿರ್ಧಾರಗಳು

ಮೂರು ದಿನಗಳ ಬೈಠಕ್‌ನಲ್ಲಿ ನಿರೀಕ್ಷೆಯಂತೆ ಕರ್ನಾಟಕದ ಶಾಂತಿಪ್ರಿಯ ಜನರು ಆತಂಕಕ್ಕೊಳಗಾಗುವ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಅವರು ಸಿದ್ಧಪಡಿಸಿರುವ ಪಟ್ಟಿಯಲ್ಲಿ ಬಾಬಾಬುಡನ್‌ಗಿರಿಯನ್ನು ದಕ್ಷಿಣ ಭಾರತದ ಅಯೋಧ್ಯೆಯನ್ನಾಗಿ ಪರಿವರ್ತಿಸುವುದಕ್ಕೆ ಮೊದಲ ಆದ್ಯತೆ ನೀಡಲಾಗಿದೆ. ಅದರ ನಂತರದ ವಿಷಯ ಹಂಪಿಯ ಹೊನ್ನೂರುವಲಿ ದರ್ಗಾಕ್ಕೆ ಸಂಬಂಧಿಸಿದ್ದು. ಅದು ಮೂಲತಃ ಈರಣ್ಣ ದೇವರ ಗುಡಿ ಎಂದೂ, ಅದನ್ನು ಮುಸ್ಲಿಮರು ಕೆಡವಿ ದರ್ಗಾ ಸ್ಥಾಪಿಸಿದ್ದಾರೆಂದೂ ಹಸಿಹಸಿ ಸುಳ್ಳುಗಳನ್ನು ಸೃಷ್ಟಿಸಿ ಅದನ್ನು ಮುಸ್ಲಿಮರಿಂದ ವಿಮೋಚನೆ ಮಾಡಬೇಕೆಂಬ ಕರೆಯನ್ನು ನೀಡಲಾಗಿದೆ. ಮೂರನೆಯ ನಿರ್ಧಾರದಲ್ಲಿ ಮತಾಂತರಗೊಂಡ ದಲಿತ ಮುಸ್ಲಿಮರಿಗೆ ಮೀಸಲಾತಿ ನೀಡಬಾರದು ಎಂಬ ತನ್ನ ಹಳೆಯ ಮನುವಾದಿ ನೀತಿಯನ್ನು ಮತ್ತೊಮ್ಮೆ ಪುನರುಚ್ಚರಿಸಲಾಗಿದೆ. ಇಷ್ಟೇ ಅಲ್ಲದೆ, ಸೇತುಸಮುದ್ರಂ ಯೋಜನೆಯ ವಿರುದ್ಧವಾಗಿ ಹಳ್ಳಿಹಳ್ಳಿಗಳಲ್ಲಿ ಜನಾಭಿಪ್ರಾಯ ಮೂಡಿಸುವ ಕೆಲಸವನ್ನು ಮಾಡಬೇಕೆಂದು ತೀರ್ಮಾನಿಸಲಾಗಿದೆ.


ರಕ್ತ ಹರಿಸುವುದು ಭಜರಂಗಿಗಳ ಕೆಲಸ

ಈ ನಿರ್ಧಾರಗಳನ್ನು ಜಾರಿಗೆ ತರುವುದಕ್ಕಾಗಿ ಒಂದು ರೋಡ್ ಮ್ಯಾಪ್‌ನ್ನು ಸಿದ್ಧಪಡಿಸಿರುವ ಆರ್‌ಎಸ್‌ಎಸ್ ಅದನ್ನು ಭಜರಂಗದಳ ಎಂಬ ಕಪಿಸೈನ್ಯಕ್ಕೆ ಒಪ್ಪಿಸಿದೆ. ಭಜರಂಗದಳ ಮತ್ತು ಇನ್ನಿತರ ಚೆಡ್ಡಿ ಸಂಘಟನೆಗಳು ಗುಜರಾತ್ ಮಾದರಿಯಲ್ಲಿ ಕರ್ನಾಟಕದಲ್ಲೂ ದೊಂಬಿಗಳನ್ನು ಎಬ್ಬಿಸಿ ಅಲ್ಪಸಂಖ್ಯಾತರ ಹತ್ಯಾಕಾಂಡಗಳನ್ನು ನಡೆಸಿದರೆ ಆ ಸಂಘಟನೆಗಳ ಕ್ರಿಮಿನಲ್‌ಗಳನ್ನು ರಕ್ಷಿಸುವ ಜವಾಬ್ದಾರಿಯನ್ನು ಬಿಜೆಪಿಗೆ ವಹಿಸಲಾಗಿದೆ.

ಬಿಜೆಪಿ-ಜೆಡಿಎಸ್ ಸರ್ಕಾರ ಅಸ್ತಿತ್ವಕ್ಕೆ ಬಂದು ತಾನು ಮುಖ್ಯಮಂತ್ರಿಯಾಗುವುದು ಖಾತ್ರಿಯಾಗುತ್ತಿದ್ದಂತೆ ಯಡ್ಡಿ ಬೆಂಗಳೂರಿನ ಕೇಶವ ಕೃಪಕ್ಕೆ ಹೋಗಿಬಂದಿರುವುದು ಈ ಎಲ್ಲಾ ವಿಚಾರಗಳನ್ನು ಚರ್ಚಿಸಲಿಕ್ಕೆಂದೇ ಇರಬಹುದು.

ಸಾರಾಂಶೀಕರಿಸಿ ಹೇಳುವುದಾದರೆ, ಬಿಜೆಪಿ ನೇತೃತ್ವದ ಸರ್ಕಾರ ರಾಜ್ಯದ ಅಧಿಕಾರ ಗದ್ದುಗೆ ಏರುತ್ತಿದೆ; ಭಜರಂಗಿಗಳು ಅಖಾಡಕ್ಕೆ ಇಳಿಯುತ್ತಿದ್ದಾರೆ. ಕರ್ನಾಟಕ ರಕ್ತಸಿಕ್ತವಾಗುವುದು ಬಾಕಿ ಇದೆ. ಇಂತಹದ್ದೊಂದು ದುರಂತ ಘಟಿಸದಂತೆ ತಪ್ಪಿಸುವ ಜವಾಬ್ದಾರಿ ರಾಜ್ಯದ ಪ್ರಗತಿಪರರು, ಪ್ರಜಾತಂತ್ರವಾದಿಗಳು, ಪತ್ರಕರ್ತರು ಹಾಗೂ ಶಾಂತಿಪ್ರಿಯ ಜನತೆಯ ಮೇಲಿದೆ.

■ ವರದಿಗಾರ



ಹಿಂದೂ ಲಾಡೆನ್ ಮುತಾಲಿಕ್ ಎಲ್ಲಿ?

ಕರ್ನಾಟಕದ ಶಾಂತಿಪ್ರಿಯ ಜನತೆಯ ಪಾಲಿಗೆ ಶಾಶ್ವತ ವಿಲನ್ ಆಗಿರುವ ನರಭಕ್ಷಕ ಪ್ರಮೋದ್ ಮುತಾಲಿಕ್‌ನ ನೆರಳಿಲ್ಲದಂತೆ ಮೊನ್ನೆಯ ಆರ್‌ಎಸ್‌ಎಸ್ ಬೈಠಕ್ ಮುಗಿದುಹೋಗಿದೆ. ಹುಬ್ಬಳ್ಳಿಯಲ್ಲಿ ನಿರ್ಮಾಣ ಮಾಡಿರುವ ಹಿಂದೂ ಭವನದ ಹೆಸರಲ್ಲಿ ಈತ ಹಣ ನುಂಗಿದ್ದರಿಂದ ಈತನಿಗೆ ಸಂಘಪರಿವಾರ ಗೇಟ್‌ಪಾಸ್ ನೀಡಿರುವುದೇ ಇದಕ್ಕೆ ಕಾರಣ.


ಆದರೆ ಒಂದಿಷ್ಟು ಮುಸ್ಲಿಮ್ ಹೆಣಗಳನ್ನು ಉರುಳಿಸಿದರೆ ಸಂಘಪರಿವಾರದ ಬಾಸ್‌ಗಳು ತೃಪ್ತಿಗೊಂಡು ಮತ್ತೆ ತನ್ನನ್ನು ಒಳಗೆ ಕರೆದುಕೊಳ್ಳುತ್ತಾರೆಂದು ಎಣಿಸಿರುವ ಈತ ಈಗ ಅದಕ್ಕಾಗಿ ತಯಾರಿ ನಡೆಸುತ್ತಿದ್ದಾನೆ. ಆ ನಿಟ್ಟಿನಲ್ಲೇ ಉತ್ತರ ಕರ್ನಾಟಕದ ತನ್ನ ಕಪಿಸೇನೆಗೆ "ಹಿಂದೂತ್ವಕ್ಕಾಗಿ ಖಡ್ಗ ಹಿಡಿ" ಎಂಬ ಸಂದೇಶ ಸಾರುತ್ತಿದ್ದಾನೆ. ಬಿಜಾಪುರ ಜಿಲ್ಲೆಯ ಸಿಂದಗಿ, ಬಾಗಲಕೋಟೆ ಜಿಲ್ಲೆಯ ರಬಕವಿ, ಬನಹಟ್ಟಿ, ಮುಧೋಳ್‌ಗಳಲ್ಲಿ ಅಮಾಯಕ ಜನರಿಗೆ ಹಿಂದೂತ್ವದ ವಿಷದ ಜೊತೆ ಬಂದೂಕು ಚಲಾಯಿಸುವ ಟ್ರೇನಿಂಗ್ ಕೂಡ ಮಾಡುತ್ತಿದ್ದಾನೆ. ಇವನ ಈ ದುಷ್ಕೃತ್ಯದ ಫಲಿತಾಂಶವಾಗಿಯೇ ಕಳೆದ ರಮ್ಜಾನ್ ಹಬ್ಬದ ದಿನದಂದು ಬನಹಟ್ಟಿ ಕೋಮುಜ್ವಾಲೆಯಲ್ಲಿ ಬೆಂದುಹೋಯಿತು.

ಇದಕ್ಕೂ ಮೊದಲು ಸೇತುಸಮುದ್ರಂ ವಿಚಾರವಾಗಿ ಬೆಂಗಳೂರಿನಲ್ಲಿ ಚೆಡ್ಡಿಗಳು ತಮಿಳುನಾಡಿನ ಬಸ್ಸೊಂದಕ್ಕೆ ಬೆಂಕಿ ಹಚ್ಚಿ ಇಬ್ಬರು ಅಮಾಯಕರನ್ನು ಬಲಿತೆಗೆದುಕೊಂಡಾಗ ಇದೇ ಮುತಾಲಿಕ್ ಅದನ್ನು ರಾಜಾರೋಷವಾಗಿ ಸಮರ್ಥಿಸಿಕೊಂಡು ತಾನು ನೈಜ ಹಿಂದೂತ್ವವಾದಿ ಎಂಬುದನ್ನು ಸಂಘಪರಿವಾರದ ಬಾಸ್‌ಗಳಿಗೆ ಮನವರಿಕೆ ಮಾಡಲು ಪ್ರಯತ್ನಿಸಿದ್ದ.

ಸಂಘಪರಿವಾರದ ಅಜೆಂಡಾವನ್ನು ಜಾರಿಗೆ ತರುವುದಕ್ಕಾಗಿ ಇಂಥ ರಕ್ತದಾಹಿ ಕ್ರಿಮಿನಲ್ಲುಗಳ ಅಗತ್ಯವಿರುವುದರಿಂದ ಸಂಘಪರಿವಾರದ ಬಿಗ್‌ಬಾಸ್‌ಗಳು ಅವನನ್ನು ಮತ್ತೆ ಒಳಗೆ ಕರೆದುಕೊಂಡರೂ ಆಶ್ಚರ್ಯವಿಲ್ಲ. ಇದರಿಂದ ಸಂಘಪರಿವಾರದ ಅಜೆಂಡಾವೂ ಈಡೇರುತ್ತದೆ, ಮುತಾಲಿಕ್‌ನ ಕಪ್ಪು ಹಣದ ಕಮಾಯಿಯೂ ಸಲೀಸಾಗಿ ಸಾಗುತ್ತದೆ. ಆದರೆ ಕರ್ನಾಟಕ ಮಾತ್ರ ರಕ್ತಸುರಿಸುತ್ತಿರುತ್ತದೆ.

ಹುಬ್ಬಳ್ಳಿಯ ಶನಿಸಂತಾನಗಳು

ಬಾಬ್ರಿ ಮಸೀದಿ ಧ್ವಂಸವಾಗಿ ದೇಶಾದ್ಯಂತ ಕೋಮುದಳ್ಳುರಿ ಹತ್ತಿದ ನಂತರದಲ್ಲಿ ಕರ್ನಾಟಕದಲ್ಲಿ ನಡೆದ ಕೋಮುಗಲಭೆಗಳಲ್ಲಿ ಹೆಚ್ಚಿನವು ಹುಬ್ಬಳ್ಳಿಯಲ್ಲಿ ನಡೆದಿವೆ. 1994ರಲ್ಲಿ ಈದ್ಗಾ ಮೈದಾನವನ್ನು ಕೇಂದ್ರವನ್ನಾಗಿಟ್ಟುಕೊಂಡು ಗಲಭೆ ಎಬ್ಬಿಸಿ ಅಮಾಯಕರ ಹೆಣಗಳನ್ನು ಉರುಳಿಸಿದರು. ನಂತರ ಉಮಾಭಾರತಿ, ಮೋಹನ್ ಭಾಗವತ್, ಪ್ರವೀಣ್ ತೊಗಾಡಿಯಗಳಂತಹ ರಕ್ತಪಿಪಾಸುಗಳು ಹುಬ್ಬಳ್ಳಿಗೆ ವಕ್ಕರಿಸಿದಾಗಲೆಲ್ಲಾ ಒಂದಲ್ಲಾ ಒಂದು ಗಲಭೆಗಳನ್ನು ನಡೆಸಿ ಅಮಾಯಕರನ್ನು ಬಲಿತೆಗೆದುಕೊಂಡರು. ಇವೆಲ್ಲದರ ಪರಿಣಾಮವಾಗಿ ಪಕ್ಕದ ಮನೆಯವರಿಗೂ ಗೊತ್ತಿರದ ಪ್ರಹ್ಲಾದ್ ಜೋಶಿ, ವಿಜಯ್ ಸಂಕೇಶ್ವರ್, ಅಶೋಕ್ ಕಾಟವೆ, ಚಂದ್ರಕಾಂತ್ ಬೆಲ್ಲದ್, ಜಗದೀಶ್ ಶೆಟ್ಟರ್ ಮುಂತಾದವರು ರಾತ್ರೋರಾತ್ರಿ ಜನಪ್ರತಿನಿಧಿಗಳಾಗಿ ಮಾರ್ಪಟ್ಟರು.



ಒಂದೆಡೆ ಸದಾ ಈದ್ಗಾ, ರಾಷ್ಟ್ರಧ್ವಜ, ಗೋರಿ, ಗೋವು ಎಂದೆಲ್ಲಾ ಅರಚಿಕೊಳ್ಳುವ ಈ ನಾಯಕರು ಇನ್ನೊಂದೆಡೆ ತಮ್ಮ ಸ್ಥಾನದ ಬಲವನ್ನು ಉಪಯೋಗಿಸಿಕೊಂಡು ಆಗರ್ಭ ಶ್ರೀಮಂತರಾಗಿದ್ದಾರೆ. ಜನಪ್ರತಿನಿಧಿಗಳಾಗಿ ಹುಬ್ಬಳ್ಳಿಯ ಉದ್ಧಾರಕ್ಕೆ ಒಂದಿಷ್ಟು ಶ್ರಮಿಸಬೇಕಿದ್ದ ಜಗದೀಶ್ ಶೆಟ್ಟರ್ ರಿಯಲ್ ಎಸ್ಟೇಟ್ ದಂಧೆಯಲ್ಲಿ ಮುಳುಗಿ ಮುಕ್ಕುತ್ತಿದ್ದರೆ, ಅಶೋಕ್ ಕಾಟವೆ ಎಂಬ ಇನ್ನೊಬ್ಬ ಮಹಾಶಯ ನಕಲಿ ಲಿಕ್ಕರ್ ದಂಧೆಯಲ್ಲಿ ಮುಳುಗಿದ್ದಾನೆ. ಇನ್ನು ಬಸವ ವಿರೋಧಿ ಚಂದ್ರಕಾಂತ್ ಬೆಲ್ಲದ್ ಲಿಂಗಾಯತರ ಸಂಘ ಕಟ್ಟುವ ನೆಪದಲ್ಲಿ ಕಂಡ ಕಂಡ ಸರ್ಕಾರಿ ಜಾಗದಲ್ಲಿ 'ಶೋ ರೂಮ್' ಮಾಡಿ ಸುಲಿಯುತ್ತಿದ್ದಾನೆ.

ಒಂದಂತೂ ಸ್ಪಷ್ಟ, ಈ ಚೆಡ್ಡಿ ಶನಿಸಂತಾನಗಳು ತೊಲಗದ ಹೊರತು ಹುಬ್ಬಳ್ಳಿಗೆ ಶಾಂತಿ-ನೆಮ್ಮದಿಯೂ ಇಲ್ಲ, ಅದು ಉದ್ಧಾರವಾಗುವುದೂ ಇಲ್ಲ.

ಸುಳ್ಯ: ಸಾಹಿತ್ಯ ಸಮ್ಮೇಳನಕ್ಕೆ ಡಾ. ಶಿಶಿಲರ ಆತ್ಮರತಿಯ ಹಿಮ್ಮೇಳ!

...ಬಿಯಲು ಹೀಮೆಯನ್ನೂ ಕಾವೇರಿಯನ್ನೂ ಪ್ರತ್ಯೇಕಿಸುವುದಕ್ಕಾಗಿಯೇ ...ವರ ಮಧ್ಯೆ ವಿಶಾಲವಾಗಿ ಮಲಗಿರುವಂತೆ ಕಾಣುವ ಪುಟ್ಟ ...ದು ಸುಳ್ಯ ಹಲವೊಮ್ಮೆ ಸಾಹಿತ್ಯಕ ವಲಯದಲ್ಲಿ ತನ್ನ ಗಾತ್ರಕ್ಕಿಂತಲೂ ... ಸದ್ದು ಮಾಡುತ್ತದೆ.

ಇದೀಗ ಉಡುಪಿಯಲ್ಲಿ ಜರುಗಲಿರುವ ರಾಜ್ಯ ಕನ್ನಡ ಬ್ರಾಹ್ಮಣರ ...ತ್ಯ ಸಮ್ಮೇಳನಕ್ಕೆ ವಿರುದ್ಧವಾಗಿ ಸೌಹಾರ್ದ ಸಾಹಿತ್ಯ ಸಮ್ಮೇಳನವೂ ...ಟಿತವಾಗುತ್ತಿರುವುದು ಅಷ್ಟೊಂದು ದೊಡ್ಡ ಸುದ್ದಿಯಾಗಿಲ್ಲ, ಆದರೆ ...ಗ್ಗೆಮುಗಾಸಿಗಿಂತ ಜೀರಿಗೆ ಮೆಣಸೇ ಖಾರ ಜಾಸ್ತಿ' ಎಂಬಂತೆ ಸುಳ್ಯದ ...ಲೂಕು ಮಟ್ಟದ ಪುಟ್ಟ ಸಾಹಿತ್ಯ ಸಮ್ಮೇಳನ ಮತ್ತದರ ಅಧ್ಯಕ್ಷಗಿರಿಗೆ ...ದ ವಿವಾದಗಳು ರಾಜ್ಯಮಟ್ಟದಲ್ಲಿ ಗಮನ ಸೆಳೆಯುತ್ತಿದೆ!

ಹಾಗೆ ನೋಡಿದರೆ ಸುಳ್ಯದ ಸಾಹಿತ್ಯ-ಸಮ್ಮೇಳನಕ್ಕೂ, ಜಗಳಕ್ಕೂ ...ವ ಅವಿನಾಭಾವ ನಂಟು ಇಂದು ನಿನ್ನೆಯದಲ್ಲ, ತುದಿಯಡ್ಕದಿಂದ ...ದಾಗಿ ಉಬರಡ್ಕ, ಬಡ್ಡಡ್ಕ, ಕೌಂಡಡ್ಕ, ಕುಕ್ಕುಜಡ್ಕ, ಮೊಂಟಡ್ಕ ಅಂತೆಲ್ಲಾ ...ನ ಅಡಿಕೆ ಬೆಳೆಯಷ್ಟೇ ...ಲುಸಾಗಿರುವ ಸಾಹಿತಿ ...ಘಸಲು ಕೂಡಾ ಈ ...ಗಳಿಗೆ ಒಂದು ಕಾರಣ ...ದರೆ, ಗೌಡ V/s ...ಹ್ಮಣ ಎನ್ನುವ ಜಾತಿ ...ಷೆ ಕೂಡಾ ಇಲ್ಲಿನ ...ತ್ಯದ ಜಗಳಗಳಿಗೆ ...ರವಾಗಿದೆ.

...ಹಿಂದೊಮ್ಮೆ ಜಿಲ್ಲೆಯ ...ತ್ಯ ಪರಿಷತ್ತಿನ ನಕಾಶೆಯಲ್ಲಿರುವ ತಾಲೂಕು ಮತ್ತು ಘಟಕಗಳ ...ಧ್ಯವನ್ನು ಬ್ರಾಹ್ಮಣ ಹೆಸರುಗಳೇ ಆಕ್ರಮಿಸಿಕೊಂಡು ...ರ್ವಭೌಮತೆಯನ್ನು ಮೆರೆಯುತ್ತಿದ್ದಾಗ, ಅದಕ್ಕೊಂದು ...ವಾದವೆಂಬಂತೆ ಸುಳ್ಯದಲ್ಲಿ ಟಿ.ಜಿ. ಮೂಡೂರು ಅಧ್ಯಕ್ಷರಾಗಿದ್ದರು. ...ಒಂದು ಸಲ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆಯೊಂದರಲ್ಲಿ ...ಕೃಷ್ಣ ಪುನರೂರರನ್ನು ಸಾರ್ವಜನಿಕವಾಗಿ ಮೂಡೂರರು ತರಾಟೆಗೆ ...ಕೊಂಡು ಇರುಸುಮುರುಸು ತಂದೊಡ್ಡಿದಾಗ ಅವರನ್ನು ಕೆಳಗಿಳಿಸಿ ...ದ್ದೇ ಕೋಟೆ ವಸಂತಕುಮಾರ್‌ರನ್ನು ಅಧ್ಯಕ್ಷ ಮಾಡುವ ಪ್ರಯತ್ನ ...ದಿತ್ತು, ಇದರ ವಿರುದ್ಧ ಸುಳ್ಯದ ಬಹುಸಂಖ್ಯಾತ ಗೌಡ ಸಾಹಿತ್ಯ ...ಯ ಕೆರಳಿತ್ತು.

ಇದು ದೊಡ್ಡ ಬೇದಿರಂಪವಾಗಿ ತಣ್ಣಗಾಗುತ್ತಿರುವಾಗಲೇ ...ಭವಿಸಿದ್ದು ಹಾಲಂಬಿ ಪ್ರಕರಣ. ದ್ರಾವಿಡ ಬ್ರಾಹ್ಮಣರ ಸಂಘದ ...ರ್ಯದರ್ಶಿ ವಿ.ಬಿ. ಹೊಸಮನೆ ಹೇಳಿದರೆನ್ನಲಾದ- "ಬ್ರಾಹ್ಮಣರು ... ಬೆಳೆಸಿದ ಸಾಹಿತ್ಯ ಪರಿಷತ್ತು" ಎನ್ನುವ ಮಾತು ಮತ್ತು ಹಾಲಂಬಿ ...ಕ್ಕೆ ತಲೆದೂಗಿದ್ದರು ಎಂಬ ವಿಷಯ ರಾಜ್ಯಮಟ್ಟದ ಇಷ್ಯೂ ಆಗಿ ...ಷ್ಟು ಗಲಾಟೆಯೂ ನಡೆದಿತ್ತು.

ಇದಾದ ನಂತರ ಎ.ಕೆ. ಹಿಮಕರ ಎಂಬ ಗೌಡರ ಹೈದ ಸುಳ್ಯದ ...ತ್ಯ ಪರಿಷತ್ತಿನ ಅಧ್ಯಕ್ಷನಾಗಿ ಅವತರಿಸಿದ್ದಂತೂ 'ಬ್ರಾಹ್ಮಣ ಶ್ರೇಷ್ಠರಿಗೆ' ... ಹೊಡೆತ ನೀಡಿತ್ತು. ಸಂಪೂರ್ಣ ...ರತಾ ಆಂದೋಲನದ ಹಿನ್ನೆಲೆಯಲ್ಲಿ ...ಕರರು ನವಸಾಕ್ಷರರ ಸಾಹಿತ್ಯ ಸಮ್ಮೇಳನ ... ನಡೆಸಿದರು. ಅದರಲ್ಲಿ ಬ್ರಾಹ್ಮಣ್ಯವನ್ನು ...ಪೂರ್ಣವಾಗಿ ನಿರ್ಲಕ್ಷಿಸಲಾಗಿತ್ತು. ಈ ...ಮ್ಮೇಳನ ಗಳಿಸಿದ ಭಾರೀ ಜನಪ್ರಿಯತೆ ...ದ ಉನ್ಮತ್ತರಾದ ಹಿಮಕರ ದಲಿತರು ...ತ್ತು ಅಲ್ಪಸಂಖ್ಯಾತರನ್ನು ಮಾತ್ರ ಕರೆದು ...ಷ ಜನ' ಎಂಬ ಸಾಹಿತ್ಯ ಸಮ್ಮೇಳನವನ್ನು ...ದಲ್ಲಿ ಸಂಘಟಿಸಿದ್ದರು.

... ಈ ಸಮ್ಮೇಳನದ ಊಟದಲ್ಲೂ ಕರಾವಳಿಯ ಬಹುಜನರ ಆಹಾರ ಸಂಸ್ಕೃತಿಯ ಪ್ರತೀಕವಾಗಿ ಎಟ್ಟಿ-ಚಟ್ಟಿ, ಕಡ್ಲೆ-ಬಲ್ಯಾರುನಂತಹ ಭಕ್ಷ್ಯಗಳು ಹೈಲೈಟ್ ಆಗಿದ್ದವು. ಆದರೆ ಇದೆಲ್ಲ 'ಬ್ರಾಹ್ಮಣ ಮನುಸ್ಮೃತಿಯ' ಸಾಹಿತಿಗಳು ಸಹಿಸದಾದರು. ಪರಿಣಾಮವಾಗಿ ಈ ಸಾಹಿತ್ಯ ಸಮ್ಮೇಳನದ ವಿಶೇಷಗಳು ಹೈಲೈಟ್ ಆಗುವ ಬದಲಾಗಿ ಮಾರನೆ ದಿನದ ಪತ್ರಿಕೆಗಳಲ್ಲಿ ಪಾರ್ವತಿ ಮತ್ತು ಹಾಜಿಮಾರ ಹೆಸರು ಹಾಕಿದ್ದ ದ್ವಾರಗಳೇ ದೊಡ್ಡ ಸುದ್ದಿಯಾಗಿತ್ತು, ಇದು ನಕ್ಸಲೈಟ್‌ರ ಸಾಹಿತ್ಯ ಸಮ್ಮೇಳನ ಎಂದು ಬಂಬಿತವಾಗಿ ಹಿಮಕರರ ಮೇಲೆ ಕೇಸೂ ಬಿತ್ತು.

ಈ ನಡುವೆ ಎ.ಕೆ. ಹಿಮಕರ ಅಧ್ಯಕ್ಷಗಿರಿ ಮುಗಿದು ಸಾಹಿತ್ಯದ ಓನಾಮವೂ ಗೊತ್ತಿಲ್ಲದ ಆದರೆ ಎಲ್ಲರಿಗೂ ಸಲ್ಲುವ ಜೆಕೆ ಮಾಧವಗೌಡ ಎಂಬಾತ ಅಧ್ಯಕ್ಷ ಆದದ್ದೂ ಆಯಿತು.

ಆನಂತರದಲ್ಲಿ ಸುಳ್ಯದ ಪಯಸ್ವಿನಿ ಹೊಳೆಯಲ್ಲಿ ಸಾಕಷ್ಟು ನೀರು ಹರಿದಿದೆ. ಹಿಮಕರ ಮೇಲಿನ ಕೇಸೂ ಖುಲಾಸೆಯಾಗಿದೆ. ಎಲ್ಲಾ ಮುಗಿಯಿತು ಎನ್ನುತ್ತಿರುವಾಗಲೇ ಈಗ ಮತ್ತೆ ಹೊಸ ಜಗಳವೊಂದು ಪ್ರಾರಂಭವಾಗಿದೆ. ಒಂದು ಸಮಾಧಾನವೆಂದರೆ ಈ ಬಾರಿಯದ್ದು ಬ್ರಾಹ್ಮಣ V/s ಗೌಡರ ನಡುವಿನ ಜಾತಿ ಜಗಳ ವಲ್ಲ; ಬದಲಾಗಿ ಸಮ್ಮೇಳನಾಧ್ಯಕ್ಷ ಸ್ಥಾನಕ್ಕಾಗಿ ನಡೆದಿರುವ ವ್ಯಕ್ತಿಶ್ರೇಷ್ಠತೆಯ ಜಗಳ.


ಸುಳ್ಯ ತಾಲೂಕಿನ ಪ್ರಮುಖ ನಗರವಾಗಿರುವ ಬೆಳ್ಳಾರೆಯಲ್ಲಿ ಮುಂದಿನ ಜನವರಿಯಲ್ಲಿ ನಡೆಯಲಿರುವ ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಆಯ್ಕೆಯ ವಿಷಯ ಈಗ ವಿವಾದಕ್ಕೆ ಕಾರಣವಾಗಿದೆ. ಸಮ್ಮೇಳನಧ್ಯಕ್ಷರ ಆಯ್ಕೆ ಸಮಿತಿಯ ಸದಸ್ಯರೂ, ಸಾಹಿತ್ಯ ಪರಿಷತ್ತಿನ ನಿರ್ದೇಶಕರೂ ಆಗಿರುವ ಡಾ. ಪ್ರಭಾಕರ ಶಿಶಿಲರು ತಮ್ಮನ್ನೇ ಸಮ್ಮೇಳನಾಧ್ಯಕ್ಷರೆಂದು ಘೋಷಿಸಿಕೊಂಡಿರುವುದೇ ಪ್ರಸ್ತುತ ಸುತ್ತಿನ ಜಗಳಕ್ಕೆ ಪ್ರೇರಣೆ ನೀಡಿದೆ.

ಈ ವಿಚಾರದಲ್ಲಿ ಶಿಶಿಲರು ಮಾಡಿರುವ ಪ್ರಮಾದಗಳು ಒಂದೆರಡಲ್ಲ, ಮೊದಲನೆಯದಾಗಿ ಇಲ್ಲಿಯತನಕ ನಡೆದುಬಂದ ರೀತಿಯಂತೆ ಹಿಂದಿನ ಸಮ್ಮೇಳನದ ನಿಕಟಪೂರ್ವ ಅಧ್ಯಕ್ಷರ ಅಭಿಪ್ರಾಯವನ್ನು ಅವರು ಕೇಳಿಲ್ಲ, ಮಾತ್ರವಲ್ಲದೆ ಅವರ ಅನುಪಸ್ಥಿತಿಯಲ್ಲೇ ಸಭೆ ನಡೆಸಿ ನಿರ್ಧಾರವನ್ನು ಕೈಗೊಂಡಿದ್ದಾರೆ. ಅಷ್ಟು ಸಾಲದೆಂಬಂತೆ ಸಮ್ಮೇಳನದ ಪೂರ್ವಾಧ್ಯಕ್ಷರಾದ ರಾಮಚಂದ್ರದೇವ, ಸುಬ್ರಾಯ ಚೊಕ್ಕಾಡಿ, ಕುತ್ಯಾಳ ನಾಗಪ್ಪಗೌಡ, ಜಯಮ್ಮ ಚೆಟ್ಟಿ ಮಾಡ, ಪ್ರೊ. ಕೋಡಿ ಕುಶಾಲಪ್ಪ ಗೌಡ, ಜನಾರ್ಧನ ಎಪಣಕಟ್ಟೆ ಮುಂತಾದವರು ಜಿ.ಎಸ್. ಉಬರಡ್ಕರನ್ನು ಆಯ್ಕೆ ಮಾಡುವಂತೆ ಪತ್ರ ಮುಖೇನ ಸೂಚಿಸಿದ್ದರೂ, ಈ ಪತ್ರಕ್ಕೆ ಕವಡೆಕಾಸಿನ ಬೆಲೆ ಕೊಟ್ಟಿಲ್ಲ, ಬದಲಾಗಿ ಶಿಶಿಲರ ಭಟ್ಟಂಗಿಗಳಂತಿರುವ ದುರ್ಗಾಕುಮಾರ್ ನಾಯರ್ ಕೆರೆ ಮತ್ತು ಡಾ. ಸುಂದರ ಕೇನಾಜೆಯವರ ಹಿಕ್ಮತ್ತಿನಿಂದ ತಮ್ಮನ್ನೇ ಸಮ್ಮೇಳನಾಧ್ಯಕ್ಷ ಎಂದು ಘೋಷಿಸಿಕೊಂಡಿದ್ದಾರೆ.

ಹಾಗೆ ನೋಡಿದರೆ ಸುಳ್ಯದ ಹಿರಿಯ ಸಾಹಿತಿ ಸುಬ್ರಾಯ ಚೊಕ್ಕಾಡಿ ಕಿರಣ ಕುತ್ಯಾಳರಂಥವರ ಸಾಲಿಗೆ ಸೇರುವ ಜಿ.ಎಸ್. ಉಬರಡ್ಕ ಕಳೆದ ವರ್ಷವೇ ಸಮ್ಮೇಳನಾಧ್ಯಕ್ಷರಾಗಬೇಕಿತ್ತು, ಆದರೆ ತನ್ನ ಊರಾದ ನಾರ್ಕಾಕಯಲ್ಲಿ ಜರುಗುವ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರಾಗಲು ಒಲ್ಲದ ಸೂಕ್ಷ್ಮ ಮನಸ್ಸಿನ ಉಬರಡ್ಕ ಆ ಅವಕಾಶವನ್ನು ಮುಂದಿನ ವರ್ಷಕ್ಕೆ ಊರ್ಜಿತದಲ್ಲಿಟ್ಟಿದ್ದರು. ಆದರೆ ಬೆಳ್ಳಾರೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗುವುದೇ ತನ್ನ ಜೀವನದ ಪರಮಶ್ರೇಷ್ಠ ಗುರಿ ಎಂದು ಭಾವಿಸಿರುವ ಶಿಶಿಲರು ತನಗಿಂತ ಹಿರಿಯರಾದ ಉಬರಡ್ಕರನ್ನು ಓವರ್‌ಟೇಕ್ ಮಾಡಿ ಅಧ್ಯಕ್ಷನಾಗಲು ಹೊರಟಿದ್ದಾರೆ.

ಇದು ಜಿಲ್ಲೆಯ ಸಾಹಿತ್ಯಾಸಕ್ತರೆಲ್ಲ ಅಸಹ್ಯ ಪಡುವಂತೆ ಮಾಡಿದೆ.

■ ಪ್ರಕಾಶ್ ಪಿಂಟೋ



ಶಿಶಿಲರ ನಾನೆಂಬ ರೋಗ

[illegible]

... ಏರ್ಪಡಿಗೆ ಬಿಟ್ಟ ...

ಇವರ ಇತರ ... ಕಥಾಸಂಕಲನ ... ಕೆಲವು ಕಥೆಗಳನ್ನೇ ರೀಮೇಕ್ ಮಾಡಿ ... ಎಂಬ ... ಇನ್ನೊಂದು ಪುಸ್ತಕ ರಚಿಸುವುದು ಒಂದು. ತನ್ನ ಬರಹಗಳ ಬಗ್ಗೆ ... - ಅದರಲ್ಲೂ ... - ಕೈಯಲ್ಲಿ ವಿಮರ್ಶೆ ಬರೆಸುವುದರಲ್ಲೂ ಶಿಶಿಲರು ಬಹಳ ಸೃಜನಶೀಲರು.

ತನ್ನ ಪುಸ್ತಕದಲ್ಲಿ ... ಅಂಬೇಡ್ಕರ್ ... ಡಾ. ಶಿಶಿಲರ ... ಕೂಡಾ ... ಶಿಶಿಲರನ್ನು ... ಭಾವಿಸುತ್ತಿದ್ದ ಎಂದರೆ ಅವರು 2007ನೇ ಇಸವಿಯ 7ನೇ ತಿಂಗಳ 7ನೇ ತಾರೀಖಿನ 7 ... 7 ಪುಸ್ತಕಗಳನ್ನು 7 ಜನರಿಂದ ಬಿಡುಗಡೆ ಮಾಡಿ ಪುಕ್ಕಟೆ ಪ್ರಚಾರ ಗಿಟ್ಟಿಸಿದ್ದರು.


[illegible]

ಇದು ... ?

[illegible]

ಸಾಣೆಹಳ್ಳಿಯಲ್ಲಿ ಗಾಂಧಿ V/s ಅಂಬೇಡ್ಕರ್





ಸಾಣೆಹಳ್ಳಿಯಲ್ಲಿ ರಾಷ್ಟ್ರೀಯ ಮಟ್ಟದ ನಾಟಕೋತ್ಸವ ನಡೆಯುತ್ತಿದೆ. ನಮ್ಮ ದಿನಪತ್ರಿಕೆಗಳು ಜಿಲ್ಲಾ ವರದಿಗಳಿಗೆ ಎರಡನೇ ಪುಟದ ಅರ್ಧ ಭಾಗವನ್ನು ಮಾತ್ರ ದಯಪಾಲಿಸಿರುವುದರಿಂದ ನಮ್ಮ ಜಿಲ್ಲೆಗಳಲ್ಲಿ ಏನೇನು ನಡೆಯುತ್ತಿದೆ ಎಂಬುದು ಅಕ್ಕಪಕ್ಕದ ಜಿಲ್ಲೆಯವರಿಗೂ ತಿಳಿಯುತ್ತಿಲ್ಲ, ಅಷ್ಟರಮಟ್ಟಿಗೆ ನಮ್ಮ ಮಾಧ್ಯಮಗಳು ಕನ್ನಡಿಗರನ್ನು ಬಡಿಯಾಗಿಟ್ಟವೆ, ಇರಲಿ. ಈ ಬಾರಿಯ ನಾಟಕೋತ್ಸವದ ಕಾರ್ಯಕ್ರಮಗಳಿಗೆ ಪಂಡಿತಾರಾಧ್ಯ ಸ್ವಾಮಿಗಳು ಯಾವ ರಾಜಕಾರಣಿಗಳನ್ನೂ ಆಹ್ವಾನಿಸಿರಲಿಲ್ಲ. ಆದರೂ ಕೆಲವರು ಓಡೋಡಿ ಬಂದು ತಾವು ಹಾಲಿ ಕಲಾವಿದರೆಂಬುದನ್ನು ನೆನಪಿಸಿ ತಮ್ಮದೂ ಕೂಡ ಒಂದು ಸಂಚಾರಿ ನಾಟಕ ತಂಡವೆಂಬಂತೆ ಪುನಃ ಓಡುತ್ತಿದ್ದರು.

ಈ ಬಾರಿಯ ನಾಟಕಗಳ ಪೈಕಿ ನನಗೆ ವಿಶೇಷವಾಗಿ ಮನಕಲಕಿದ ನಾಟಕವೆಂದರೆ ಗಾಂಧಿ V/s ಅಂಬೇಡ್ಕರ್! ನನ್ನಂತಹ ಹಲವರಿಗೆ ಗಾಂಧಿ ಅರ್ಥವಾಗಿದ್ದು ಪತ್ರಿಕೆಯ ಮುಖಾಂತರ. ಗಾಂಧಿ ಚಿಂತನೆಗಾಗಿಯೇ ಲಂಕೇಶರು ಎಂಭತ್ತರ ದಶಕದಲ್ಲಿ ಒಂದು ಕಾಲಂ ಶುರು ಮಾಡಿಸಿದ್ದರು. ಆಗ ಗಾಂಧಿ ಓದುತ್ತಿರುವಾಗ ಅವರ ಚಿಂತನೆಯಲ್ಲಿ ತಾಯಿ ಹಾಲಿನ ಪೋಷಕಾಂಶಗಳು ಕಾಣುತ್ತಿದ್ದವು. ಗಾಂಧಿ ಖಂಡಿತ ಈ ಕಾಂಗ್ರೆಸ್ಸಿಗರ ಗಾಂಧಿಯಲ್ಲ, ಬದಲಾಗಿ ನಮ್ಮ ಜಗಲಿಯಲ್ಲಿ ಕುಳಿತಿದ್ದು, ಶತಾಯುಷಿಯಾಗಿ ಬದುಕಿ, ನಾವೆಲ್ಲಾ ನೆಟ್ಟಗಾದ ಮೇಲೆ ಕಾಲವಾದ ನಮ್ಮಜ್ಜನಂತೆ ಕಾಣುತ್ತಿದ್ದರು. ಈ ದೇಶದ ಉದ್ದಗಲಕ್ಕೆ ಅಲೆದ ಗಾಂಧೀಜಿ ಪ್ರತಿಹಳ್ಳಿಯ ಪ್ರತಿ ಕೇರಿಗೂ ಬಂದು ಹೋದಂತೆ ಭಾಸವಾಗುತ್ತಿತ್ತು, ಗಾಂಧೀಜಿ ದಿಲ್ಲಿಯಲ್ಲಿ ಹೇಳಿದ ಕೆಲಸ ಇಲ್ಲಿ ನಡೆದುಹೋಗುತ್ತಿದ್ದವು.

ಅಸ್ಪೃಶ್ಯತೆ ವಿರುದ್ಧ ಗಾಂಧೀಜಿ ಕೊಟ್ಟ ಕರೆಯ ದೆಸೆಯಿಂದಾಗಿ ಒಬ್ಬ ಪುರಸಭಾಧ್ಯಕ್ಷ ಹರಿಜನರ ಕೇರಿಗೆ ಹೋಗಿ, ಆಯ್ದ ಕೆಲವರನ್ನು ಹಿಡಿದು ತಂದು, ಸ್ನಾನದ ಮನೆಯಲ್ಲಿ ನಿಲ್ಲಿಸಿಕೊಂಡು ತನ್ನ ಪಾಪ ತೊಳೆದುಕೊಂಡವನಂತೆ ಅವರ ಮೈ ಉಜ್ಜಿ ತೊಳೆದು, ಹೊಸಬಟ್ಟೆ ಹೊಲಿಸಿ, ಜೊತೆಯಲ್ಲಿ ಕೂರಿಸಿಕೊಂಡು ಊಟ ಮಾಡಿಸಿ, ಕಳಿಸುತ್ತಿದ್ದರು. ಪ್ರತಿ ಸ್ವಾತಂತ್ರ್ಯೋತ್ಸವದ ದಿನವೂ ಈ ಆಚರಣೆ ನಡೆಯುತ್ತಿತ್ತು, ಅಷ್ಟೆ ಅಲ್ಲ, ಹರಿಜನ ಹುಡುಗರ ಸ್ಕೂಲು ಫೀಜು ಕಟ್ಟಿದ ಕಾರಣಕ್ಕೆ ಒಬ್ಬ ಹುಡುಗ ಓದಿ ಡಾಕ್ಟರಾಗಿ ಅಮೆರಿಕಕ್ಕೆ ಹೋದ. ಮತ್ತೊಬ್ಬ ಜಿಲ್ಲಾಧಿಕಾರಿಯಾದ. ಇನ್ನೊಬ್ಬ ಶಾಸಕನಾದ. ಇವೆಲ್ಲಾ ಗಾಂಧಿ ಕರೆಯಿಂದ ಸಂಭವಿಸಿದ ಐತಿಹಾಸಿಕ ಘಟನೆಗಳು. ಅಸ್ಪೃಶ್ಯತೆಯನ್ನು ಪಾಪ ಎಂದು ಕರೆದ ಗಾಂಧಿ, ಅಲ್ಪಸಂಖ್ಯಾತರ ಭಯ ಹೋಗಲಾಡಿಸಿ, ಮಹಿಳೆಯರಿಗೆ ಸಮಾನತೆ ಮತ್ತು ಗೌರವ ಕೊಡುವಂತೆ ಮಾಡಿದರು. ಅವರ ಸ್ವಾತಂತ್ರ್ಯ ಹೋರಾಟದಷ್ಟೇ ಈ ಮೂರು ಕಾರ್ಯಕ್ರಮಗಳೂ ಮಹತ್ವ ಪಡೆದುಕೊಂಡಿದ್ದು ಇಂದೂ ಕೂಡಾ ಸಮಾಜ ಸುಧಾರಕರು ತಮ್ಮ ಜನ್ಮ ಸಾರ್ಥಕ ಮಾಡಿಕೊಳ್ಳಲು ಮಹಿಳೆಯರ, ಅಲ್ಪಸಂಖ್ಯಾತರ ಮತ್ತು ಅಸ್ಪೃಶ್ಯತೆ ಸಮಸ್ಯೆಯನ್ನು ಕೈಗೆತ್ತಿಕೊಳ್ಳಬಹುದು. ಇಷ್ಟೆಲ್ಲಾ ಆದರೂ ಯಾಕೋ ಅವು ಗಾಂಧೀಜಿ ಕಾಲಕ್ಕಿಂತಲೂ ಜಟಿಲವಾಗುತ್ತಿರುವಂತೆ ಕಾಣುತ್ತಿವೆ.

ಆದರೆ ನಮ್ಮ ನಾಟಕದ ಜನ ಆರಿಸಿಕೊಳ್ಳುತ್ತಿರುವ ವಿಷಯಗಳು ಏನು ಗೊತ್ತೆ? ಗಾಂಧಿ V/s ಗಾಂಧಿ, ಅಂಬೇಡ್ಕರ್ V/s ಗಾಂಧಿ. ಮುಂದೆ ಕಸ್ತೂರಬಾ V/s ಗಾಂಧಿಯೂ ನಿಮ್ಮ ಮುಂದೆ ಪ್ರದರ್ಶಿತವಾಗಬಹುದು! ತೆರೆದ ಪುಸ್ತಕದಂತೆ ಹರವಿ ಬಿದ್ದಿರುವ ಗಾಂಧೀಜಿಯ ಬದುಕು ಮತ್ತು ಬರಹವನ್ನು ಬದಿಗೊತ್ತಿ ಅವರ ವೈಯಕ್ತಿಕ ಜೀವನವನ್ನು ಕೈಗೆತ್ತಿಕೊಂಡು ಚೇಷ್ಟೆ ಮಾಡುವುದು ಇತ್ತೀಚೆಗೆ ತುಂಬ ವ್ಯವಸ್ಥಿತವಾಗಿಯೇ ನಡೆಯತೊಡಗಿದೆ. ಗಾಂಧಿ ಎಲ್ಲವನ್ನು ಹೇಳಿಕೊಂಡಿದ್ದೂ ಕೂಡ ಇವತ್ತು ಉದ್ಭವಿಸಿರುವ ಉನ್ಮಾದದಲ್ಲಿ ಗಾಂಧಿಯನ್ನು ಕೆಣಕುತ್ತ ಹೊರಟವರಿಗೆ ಎಂತಹ ಉತ್ತರ ಸಿಗಬಹುದೆಂಬುದನ್ನು ನಾನು ಸಾಣೆಹಳ್ಳಿಯಲ್ಲಿ ಕಣ್ಣಾರೆ ನೋಡಿದೆ.

ಸಾಣೆಹಳ್ಳಿಯಲ್ಲಿ ಸಿ. ಬಸವಲಿಂಗಯ್ಯ ನಿರ್ದೇಶಿಸಿದ ಗಾಂಧಿ V/s ಅಂಬೇಡ್ಕರ್ ನಾಟಕ ಪ್ರಾರಂಭವಾಗುವುದಕ್ಕೆ ಮುನ್ನವೇ ಸುಮಾರು ಮೂರು ಸಾವಿರ ಜನ ಬಯಲು ರಂಗಭೂಮಿಯಲ್ಲಿ ಆಸೀನರಾಗಿದ್ದರು. ಅಷ್ಟು ಜನರಿದ್ದರೂ ಒಂದು ಸಣ್ಣ ಕೆಮ್ಮು ಕೂಡ ಕೇಳಿಸುತ್ತಿರಲಿಲ್ಲ, ನಾಟಕದ ಸ್ಟೇಜಿನ ಎದುರು ಕುರ್ಚಿಯಲ್ಲಿ ಸ್ವಾಮೀಜಿಯವರೂ ಕುಳಿತಿದ್ದರು. ನಾಟಕ ಪ್ರಾರಂಭವಾಗಿ ವಿದೂಷಕರು ಬಂದು ಅಂಬೇಡ್ಕರ್ ಮತ್ತು ಗಾಂಧಿಯ ನಡುವೆ ಚೇಷ್ಟೆಗಳನ್ನು ಶುರು ಮಾಡಿದರು. ಅಂಬೇಡ್ಕರ್ ಗಾಂಧಿಯನ್ನು ಟೀಕಿಸುವುದು, ಅದಕ್ಕೆ ಗಾಂಧೀಜಿಯ ಉತ್ತರ ಇವೆಲ್ಲಾ ನಡೆಯುವಾಗ ಯಾರೊ ಇಬ್ಬರು ಗಾಂಧಿ ಮತ್ತು ಅಂಬೇಡ್ಕರ್ ವೇಷಧಾರಿಗಳು ತಮಗೆ ತಾವೇ ಮಾತನಾಡಿಕೊಳ್ಳುತ್ತಿರುವಂತೆ ಭಾಸವಾಗುತ್ತ ತೂಕಡಿಕೆ ಬಂತು. ಇನ್ನೇನು ನಾಟಕ ಮುಗಿಯಬೇಕೆನ್ನುವಷ್ಟರಲ್ಲಿ ಹಿಂತಿರುಗಿ ನೋಡಿದೆ. ಮೂರು ಸಾವಿರ ಜನಸಂಖ್ಯೆ ಅದ್ಯಾವಾಗಲೋ ಸದ್ದಿಲ್ಲದೆ ಕರಗಿ ನೂರೈವತ್ತರ ಸಮೀಪದಲ್ಲಿತ್ತು, ಅವರೂ ಸ್ವಾಮೀಜಿ ಏನಾದರೂ ಅಂದುಕೊಂಡಾರೆಂದು ಕುಳಿತಂತಿತ್ತು, ಗಾಂಧಿ ಗೋಡ್ಸೆ ಗುಂಡಿಗೆ ಬಲಿಯಾಗಿ, ಅಂಬೇಡ್ಕರ್ ಹೂವಿನಹಾರ ತಂದು ಹಾಕುವ ಸಮಯದಲ್ಲೂ ಅಂಬೇಡ್ಕರ್ ಸಂಭಾಷಣೆ ಮುಗಿದಿರಲಿಲ್ಲ.

ಗಾಂಧೀಜಿಯ ಸಾರ್ವಜನಿಕ ಪ್ರತಿಮೆಯನ್ನು ಭಗ್ನಗೊಳಿಸಲು ಯತ್ನಿಸುತ್ತಿರುವವರಿಗೆ ಸಾಣೆಹಳ್ಳಿ ಸುತ್ತಮುತ್ತಲ ಗ್ರಾಮಸ್ಥರು ತೋರಿದ ಶಾಶ್ವತ ಮರೆಯಲು ಸಾಧ್ಯವೇ ಇಲ್ಲ, ಮತೀಯವಾದಿಗಳು ಮತ್ತು ಮಾಯಾವತಿವಾದಿಗಳು ಏನೆಲ್ಲಾ ಟೀಕೆ ಮಾಡಿದರೂ ಗಾಂಧಿ ನಮ್ಮ ಹಳ್ಳಿಗರ ಮನಸ್ಸಿನಾಳದಲ್ಲಿ ನೆಲೆಸಿರುವ ರೀತಿಯೇ ಬೇರೆ. ಅವನ ಪ್ರತಿಮೆ ಬೇರೆ ಎಂಬುದನ್ನು ... ನೋಡಿರುವ ಸಾಣೆಹಳ್ಳಿ, ಸಾಮೂಹಿಕವಾಗಿ ಕಂಡಿ!

■ ಬಿ. ಚಂದ್ರೇಗೌಡ

ಆ ಜ್ಯೋತಿಷಿ ಯಳಕಂಡು ಬಂದು ಯಕ್ಕಡದಲ್ಲಿ ವಡಿಬೇಕಲ್ಲಾ!

"ಇನ್ನೇನು ಒಂದು ವಾರದಲ್ಲಿ ತೊಲ ಉಯ್ಯಬೇಕು. ಮಡೆ ತಾಕಬೇಕು. ಆಮೇಲೆ ಕಳ ಮಾಡಬೇಕು ಎಂದು ಯೋಚಿಸುತ್ತಿದ್ದ ಕಾಳಮಾವನ ಒಳ್ಳೆ ಕೆಲಸದ ಯೋಚನಾ ಲಹರಿ ಸರಾಗವಾಗಿ ಹರಿಯುತ್ತಿರುವಾಗ ಸೀರ ಇದ್ದಕ್ಕಿದ್ದಂತೆ,

"ಅಂತೂ ಎಡೂರಪ್ಪನಿಗೂ ಒಂದು ಯೋಗ ಕೂಡಿ ಬತ್ತು" ಎಂದ.

"ಅಗ್ಳಿ ಬುಡ್ರ ಪಾಪ. ಅವುನು ವಳ್ಳೆ ಇವನೆಯ" ಎಂದ ಕಾಳಮಾವ.

"ವಳ್ಳೆ ಇವುನೆಯ ಅಂದ್ರೇನು ಮಾವ?" ಎಂದ ಉಗ್ರಿ.

"ಕಾಲದಿಂದ ಕೂಗ್ಯಾಡವುನೆ, ಕರ್ನಾಟಗನ್ನೆಲ್ಲ ನಾಯಿ ತಿರಿಗಿದಂಗೆ ತಿರಿಗ್ಯವನೆ, ಪಾಪ ಹೆಡತಿನೂ ಕಳಕಂಡವುನೆ. ಹೋಗ್ಲಿ ಬುಡತ್ಲಗೆ."

ಹಳ್ಳಿ ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಮಕ್ಕಳೀಸಲ ಅವುನಿಗೆ?" ಎಂದಳು ಜುಮ್ಮಿ.

"ಒಂದ್ಯೆದಾರಿದ್ದವೇನಪ್ಪ"

"ಅಂಗರಾಪಳೇಶನ್ನು ಗೀಪ್ರೇಶನ್ನು ಏನೂ ಮಾಡಿಸಿಗಂಡಿಲ್ಲ ಅನ್ನು?" ಎಂದ ಸೀರ.

"ಮಾಡಿಸಿಗಂಡಿರಬೇಕು ಕಣೊ. ಇಲ್ದಿದ್ರೆ ಇನ್ನು ಒಂದು ಐಕ್ಳೆದು ಹುಟ್ಟವೇನೊ. ಎಡೂರಪ್ಪ ವಳ್ಳೆ ಕ್ಯಂದೆತ್ತಿದ್ದಂಗವುನೆ" ಎಂದು ಉಗ್ರಿ ನಗಾಡಿದ.

"ಎತ್ತಿಯ ಬುಡವುನು. ಈ ವಯಸಿನಲ್ಲು ಅಂಗೆ ಕುದುಗೊಡಾಡಿದಂಗೆ ವಡ್ಯಾಡ್ತನಂಗೆಯ."

"ಅಂತು ದ್ಯಾವೇಗೌಡನ ದೈಸಿಂದ ಎಡೂರಪ್ಪನೂ ಮುಖ್ಯಮಂತ್ರಿಯಾದ" ಎಂದ ಕಾಳಮಾವ, ಎಡೂರಪ್ಪನ ಭಾಗ್ಯವನ್ನು ದ್ಯಾವೇಗೌಡರ ತಲೆಗೆ ಕಟ್ಟಲು ನೋಡಿದ.

"ಈ ಎಡೂರಪ್ಪ ಮುಖ್ಯಮಂತ್ರಿಯಾಗಿದ್ದು ದ್ಯಾವೇಗೌಡನ ಕೈಮೀರಿದ ಕ್ಯಲಸವಂತೆ ಕಣಮಾವ."

"ಇದೇನ್ನ ಇಂತ ಮಾತಾಡ್ತೀ?"

"ತಡಿಯಪ್ಪ, ಮಗ ಮುಖ್ಯಮಂತ್ರಿಯಾಗಿ ಆಡಳಿತ ಮುಗಿಸಿ ಮನಿಗೆ ಬಂದೇಟಿಗೆ ದ್ಯಾವೇಗೌಡ ವಿಧಾನಸಭೆನೆ ವಿಸರ್ಜನೆ ಮಾಡಿ ಯಲಕ್ಷನ್ ಮಾಡಿ ಅಂತ ರಾಜ್ಯಪಾಲ್ರಿಗೆ ಲೆಟ್ರು ಬರದಿದ್ದ ಗೊತ್ತೆ?"

"ಊ. ಅಂಗಂತ ನೀವೆ ಹೇಳಿದ್ರಲ್ಲ"

"ಅಂಗೆ ಲೆಟ್ರು ಬರದೋನು ಎಡೂರಪ್ಪನಿಗೆ ಅಧಿಕಾರ ಕೊಡ್ತನೆ ಅಂದ್ರೆ ಆತುಮಪೂರ್ವಕವಾಗಿ ಕೊಟ್ಟವುನೊ, ಅನಿವಾರ್ಯವಾಗಿ ಕೊಟ್ಟವುನೊ, ನೀನೆ ಹೇಳು."

"ಏನೊ, ಕೊಟ್ನಲ್ಲ ಬುಡು."

"ತೇಲಿಸಬ್ಯಾಡ ನೀನು, ಸರಿಯಾಗಿ ಮಾತಾಡು."

"ಸರಿ ಕಂಡ್ರ. ಇವತ್ನು ದ್ಯಾವೇಗೌಡ ಬ್ಯಾಡ ಅಂದ್ರೆ ಅವುನ್ತ ಏನು ಏನು ಕಿತಗಳಂಗವುರೆ? ಏನೊ ಮಾಡಿಕಂಡೋಗಿ ಅಂತ ಸುಮ್ಮನಾದ ಅಂದ್ರೆ ಏನರ್ಥ?"

"ಅದ್ಯಾಕ್ಲ ಎಡೂರಪ್ಪ ಮುಖ್ಯಮಂತ್ರಿ ಆಗದು ಬ್ಯಾಡ ಅಂತ ಯಲ್ಲಾ ಕೂಗ್ಯಾಡಿದ್ರು?" ಎಂದಳು ಜುಮ್ಮಿ.

"ನೋಡೆ, ರಾಜಕಾರಣ ಮಾಡಕ್ಕೆ ಅಂತ ಬಂದು ಲೀಡ್ರಾಗೊನಿಗೆ ಯಲ್ಲಾ ಜನಗಳು ಒಂದೇ ತರ ಕಾಣಬೇಕು. ಈ ಎಡೂರಪ್ಪ ಮತ್ತವನ ಪಾರ್ಟಿಗೆ ಸಾಬರ ಕಂಡ್ರಾಗದಿಲ್ಲ, ದಲಿತ್ರ ಕಂಡ್ರಾಗದಿಲ್ಲ, ಅದ್ಕೆ ಅಂತೋನು ಮುಖ್ಯಮಂತ್ರಿ ಆಗದು ಬ್ಯಾಡ ಅಂತ ಕೂಗಾಡಿದ್ರು" ಎಂದ ಉಗ್ರಿ.

"ಸಾಬರ ಕಂಡ್ರಾಗದಿಲ್ಲ ಅಂತ ನೀನಂತಿ. ಅವುನ್ಯಾರೋ ಮೀರಜ್ ಪಟೇಲ ಅನ್ನೋನ್ನ ತಬ್ಬಿಕಂಡು ನಿಂತಿದ್ನಂತೆ. ಇದಕೇನೇಳ್ತಿಯಾ?" ಎಂದ ಸೀರ.

"ಅದು ರಾಜಕಾರಣ ಮಾಡಕ್ಕೆ ಅಂತ ತಬ್ಬಿಕೊಂಡಿರದು ಮಾವ. ಎಡೂರಪ್ಪ ಇಲ್ಲಿಗಂಟ ಹೋರಾಡಿರದೇ ಸಾಬರ ವಿರುದ್ಧ ಗೊತ್ತೆ?"

"ಸಾಬರೇನು ಮಾಡಿದ್ರು ಅವುನಿಗೆ?"

"ಅವುರು ಅವನಿಗೇನು ಮಾಡಿಲ್ಲ ಕಣೆ. ಸಾಬರ ಬಗ್ಗೆ ಹಂಗಲ್ಲ ಹಿಂಗೆ ಅಂತ ಎಡೂರಪ್ಪನಿಗೇಳಿದ್ರೆ, ಪಾಪ ಅಂದ್ರು ಅಂದ್ನೆಯ. ಆದ್ರೆ ಅವುನ ಪಾರ್ಟಿ ಅದಲ್ಲಾ? ಅದರ ಕಾರ್ಯಕ್ರಮ ಏನಪ್ಪ ಅಂದ್ರೆ, ಅಲ್ಪಸಂಖ್ಯಾತ ಸಾಬರ ಮ್ಯಾಲೆ ಜಗಳ ಮಾಡಿ ಹಿಂದೂಗಳ್ನೆಲ್ಲ ಒಟ್ಟಾದ್ರೆ ಹಿಂದೂ ಧರಮದಂಗೆ ಬಿಜೆಪಿ ಕಡೆವರಿಗೂ ದೇಶ ಆಳಬಹುದು ಅಂತ ಸಾಬರ ದ್ವೇಷ ಮಾಡ್ತವೆ. ಬಿಜೆಪಿ ಕಾರ್ಯಕ್ರಮದಲ್ಲಿ ಅದೂ ಒಂದು. ಅಂತ ಪಾರ್ಟಿ ಲೀಡ್ರಾದ ಎಡೂರಪ್ಪನು ಅನಿವಾರ್ಯವಾಗಿ ಸಾಬರು ಕಂಡ್ರೆ ಸಿಟ್ಟು ಮಾಡ್ತನೆ" ಎಂದು ವಾದಿಸಿದ ಉಗ್ರಿ ಮಾತನ್ನು ಆಲಿಸಿದ ಕಾಳಮಾವ,



"ನೋಡ್ರ ಇಲ್ಲಿ ಅವುರ ಕಂಡ್ರಾಗೊದಿಲ್ಲ ಇವುರ ಕಂಡ್ರಾಗೊದಿಲ್ಲ ಅಂತ ಮೂರೊತ್ತು ಜಗಳ ಮಾಡಿಕೊಂಡು ಕುಂತಗಳಕ್ಯಾಗದಿಲ್ಲ. ಅಂಗೆ ಮಾಡೋ ನನಮಕ್ಕಳು ಯಾವನೂ ಉದ್ಧಾರಾಗದಿಲ್ಲ. ಇಲ್ಲಿದ ಯಲ್ಲಾರು ಅನುಭವಿಸಲೇಬೇಕು. ಸಾಬರು ನ್ಯಟ್ಟಗಿಲ್ಲ ಅಂದ್ರೆ ಅವುರ ನ್ಯಟ್ಟಗೆ ಮಾಡಿಕಬೇಕೆ ವರತು ಅವುರನ್ನೆಲ್ಲ ಪಾಕಿಸ್ತಾನಕ್ಕೆ ಹೋಡಿಸಕ್ಯಾದತ್ಲ?" ಎಂದ.

"ಅದ ಅವುರು ತಿಳಿಕಬೇಕು ಕಣಮಾವ. ಅವುರಿನ್ನೊಂದು ಪ್ಯಾನೇನದೆ ಅಂದ್ರೆ ಸಾಬರ ಹೆದ್ರಿಸಿ ತಮಗೇ ಓಟ್ನು ಮಾಡಂಗೆ ಮಡಿಕಬೇಕು. ಈ ಕಾಂಗ್ರೆಸ್ಸಿನೋರು ಮಾಡತಿದ್ರು ನೋಡು ಅಂಗೆ. ಯಾವ ಜಾತಿನೂ ಯಾ... ಪಾರ್ಟಿ ಸೊತ್ತಲ್ಲ ಅನ್ನದು ಜಾತಿಗಳೇ ತೋರಬೇಕು..." ಎಂದ ಉಗ್ರಿ.

"ಆಟೋಂತರ ಬೋದಾಡಿಕಂಡೋರು ಯಂ... ಜ್ವತೆಲಿದ್ದರ್ಲ" ಎಂದು ಜುಮ್ಮಿ ಒಂದು ಅರ್ಧ ಮಾ... ಸೆದಳು.

"ಇರ್ತರೆ ಕಣೆ. ಆ ದ್ಯಾವೇಗೌಡನ್ನ ಏನಂತ ಬೋದ... ಅವನಿಗೇನೂ ಅನ್ನಸದಿಲ್ಲ, ಅಂಗೆ ಬಿಜೆಪಿಗಳ ಬೋದ... ಅವುಕೇನೂ ಅನ್ನಿಸದಿಲ್ಲ, ಏನೂ ಅನ್ನಸದೋರಿಗೆ ಏನಂ... ಬೋದ್ರು ಬೇಜಾರಾಗದಿಲ್ಲ, ಅಧಿಕಾರ ಹಂಚಿಗಳಕ್ಕೆ ಕೊ... ಅಕ್ಕಿದ ಜೀವದಂಗಾಡ್ತರೆ."

"ನಾನು ಇಲ್ಲಿಗಂಟ ಇಂಥೋ... ನೋಡ್ಡಿಲ್ಲ ಬುಡ್ರ ಅತ್ಲಗೆ. ಈ ... ಯಾವನಾರ ನನ್ನ ನಿನ್ನೆದ್ರಿನಾ, ನಿನ್ನವು... ಅಂತ ಬೋದ್ರೆ, ಜೀವ ಹೋದ್ರು ಸ... ಅವುನ್ನ ಸುಮ್ಮನೆ ಬುಡದಿಲ್ಲ, ಆದ್ರೆ ... ದ್ಯಾವೇಗೌಡ್ನುಡಗ ಕುಮಾರಸ್ವಾಮಿನ... ಎಡೂರಪ್ಪನೂ ಬಾಯಿಗೆ ಬಂದಂ... ಬೋದಾಡಿ ರಾಜಪಾಲನ ನೋಡಕ್ಕೆ ಜ್ವತೆ... ಹೋದ್ರು ಅಂದ್ರೆ, ಇನ್ನಂತಾ ಇವು... ದ್ದರವುರು ಅಂತ" ಎಂದ ಸೀರ.

"ಕಿವಿ ಕಿತ್ತ ಮೂಗರುಕ್ರು ಕ... ಮಾವ. ಅವುರಾಡೊ ಮಾತಿಗೂ ಅರ್ಥಿಲ... ಅವುರ ಮಾಡೊ ಕ್ಯಲಸಕೂ ಸಾರ್ಥಕಿಲ... ಅಂತ ಜನ ಯಾವಾಗ್ಲಾದ್ರೂ ಒಂದಾಯ್ತರ... ಯಾವಾಗ್ಲಾದ್ರೂ ದೂರಾಯ್ತರೆ. ಅವುರ ಜಗಳ ನಿ... ಅನ್ನಕಂಡು ಯಾವನಾರ ಬುಡಸಕ್ಕೋದ ಅಂದ್ರೆ ಅವು... ಕತೆ ಮುಗುದಂಗೆಯ."

"ಆ ಪ್ರಕಾಸುಂದು ಅಂಗೆ ಆಯ್ತಲ್ಲ ಪಾಪ... ಎಡೂರಪ್ಪನೂ, ದ್ಯಾವೇಗೌಡನೂ ಬೋದಾಡದ ನೋಡಿ... ನಿಜ ಅನ್ನಕಂಡು ಅರ್ಪಿಬಿದ್ದೋದ ಅತ್ಲಗೆ" ಎಂದ ಸೀರ...

"ಏನು ಅರ್ಪಿಬಿದ್ದಿಲ್ಲ ಕಣಮಾವ. ಆಗೋದ... ಮರಿಯಾದಿ ಈಗ ಬಂದಂಗಾಗ್ಯದೆ."

"ಅದ್ಯಂಗಪ್ಪ?"

ಹಾರಿಹೋಯಿತು ಗಾಂಧಿ ಆತ್ಮ

ಗಾಂಧಿ ಯಾರ ಪೇಟೆಂಟು?

ಕಾಂಗ್ರೆಸ್‌ನವರದ್ದೋ? ಭಾಜಪ ಅವರದ್ದೋ?

ಇವರು ನಮ್ಮದು ಅಂತ, ಅವರು ಅವರದೂ ಅಂತ!

ಇವರಿಬ್ಬರಲ್ಲಿ ಯಾರಿಗೂ ಅನ್ಯಾಯ ಆಗಬಾರದು.

ಜನರಿಗೆ ಆಗಬಹುದೊ?

ಹುಚ್ಚು ಪ್ರಶ್ನೆ. ಜನ ಅಂದರೆ ಯಾರು? ಈ ರಾಜಕೀಯ ಪಕ್ಷದವರೇ ಅಲ್ಲವೆ!

ಅನ್ಯಾಯ ಅನ್ನಿಸಿದರೆ ಏನು ಮಾಡುತ್ತಾರೆ ಅವರು?



ಗಾಂಧಿ ಹಿಡಿದುಕೊಳ್ಳುತ್ತಾರೆ!

ಈಗ ಭಾಜಪಕ್ಕೆ ಅನ್ಯಾಯ ಆಗಿತ್ತು,

ಏನು ಅನ್ಯಾಯ ಅದು?

ಕಾಂಗ್ರೆಸ್ ಹಿಂಬಾಗಿಲ ಮೂಲಕ ಅಧಿಕಾರಕ್ಕೇರಲು ಪ್ರಯತ್ನಿಸಿತ್ತು! ಇವರು ಮುಂಬಾಗಿಲಿನಿಂದಲೇ ಧೀರೋದಾತ್ತವಾಗಿ ಪ್ರವೇಶಿಸಿದ್ದಾರೆ. ಹಾಗಂತ ಅವರು ಹೇಳಿಕೊಳ್ಳುತ್ತಿದ್ದಾರೆ. ಜನಾಭಿಪ್ರಾಯ ಏನೇ ಇರಬಹುದು, ಅವರು ಹಿಡಿದಿರುವ ಕಾಗೆಗೆ ಮೂರು ಕಾಲು!

ತಡೆಯಬಾರದೆ ಈ ಹಿಂಬಾಗಿಲ ಪ್ರವೇಶವನ್ನು?

ಮಾಡಿದರು 'ರಾಜಭವನ ಚಲೋ'.

ಪ್ರಾರಂಭ ಎಲ್ಲಿಂದ?

ಮತ್ತೆಲ್ಲಿಂದ, ಗಾಂಧಿ ಪ್ರತಿಮೆ ಆವರಣದಿಂದ. ಅಲ್ಲಿ ನೆರೆದರು ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ, ಇದರಿಂದ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅಡ್ಡಿಯಾಗಿರಬಹುದು. ಹಿಂಬಾಗಿಲ ಪ್ರವೇಶ ತಡೆಯಲು ಇಷ್ಟು ಸಣ್ಣ ತೊಂದರೆ ಅನುಭವಿಸಲಾರದೆ ಹೋದರೆ ಹೇಗೆ? ಪ್ರಜಾಪ್ರಭುತ್ವದ ಉಳಿವಿಗಾಗಿ ಇವೆಲ್ಲ ಅನಿವಾರ್ಯ. ವಾಹನ ಚಾಲಕರು 'ಈ ಜೋಕರ್‌ಗಳನ್ನು ಒದ್ದು ಹೊರಗೋದಿಸಿ' ಅನ್ನಬಾರದಿತ್ತು ಬಿಡಿ!

ಇದರಿಂದ ನಿಂತಿತೆ ಹಿಂಬಾಗಿಲ ಪ್ರವೇಶ ಪ್ರಯತ್ನ?

ಇಲ್ಲ!

ಕೈ ಕಟ್ಟಿ ಕುಳಿತರೆ ಉಳಿಯಬೇಕಲ್ಲ ಪ್ರಜಾಪ್ರಭುತ್ವ? ಹಿಡಿದರು– 'ಅನಿರ್ದಿಷ್ಟ ಕಾಲ ಸತ್ಯಾಗ್ರಹ'!

ಎಲ್ಲಿ?

ಮತ್ತೆಲ್ಲಿ, ಗಾಂಧಿ ಪ್ರತಿಮೆ ಆವರಣದಲ್ಲಿ!

ಅಂದರೆ ಕಾಂಗ್ರೆಸ್ ಹಿಂಬಾಗಿಲ ಪ್ರವೇಶ ಪ್ರಯತ್ನ ನಿಲ್ಲಿಸಬೇಕು, ಧರಣಿ ಕುಳಿತವರ ಹೆಣ ಬೀಳಬೇಕು ಅಂದಾಯಿತು!

ಇವುಗಳಲ್ಲಿ ಯಾವುದಾದರೂ ಒಂದು ನಡೆಯಿತೆ?

ಉಹುಂ. ಯಾರು ಉಗಿದರೋ ಏನೋ. ಒಂದೇ ರಾತ್ರಿಗೆ ಅನಿರ್ದಿಷ್ಟ ಕಾಲ ಧರಣಿ ಅಂತ್ಯಗೊಂಡಿತು.

ಕೆಲವು ಜನರ ದೃಷ್ಟಿಯಲ್ಲಿ ಜೋಕರ್ ಎನಿಸಿಕೊಂಡ ಧೀರೋದಾತ್ತ ರಾಜಕೀಯ ನಾಯಕರ ಒಂದು ಷೋ ಮುಗಿಯಿತು. ನಿದ್ರಾವಸ್ಥೆಯಲ್ಲಿದ್ದ ಕಾಂಗ್ರೆಸ್ ನಾಯಕರು ಅರೆನಿದ್ರೆಯಲ್ಲೇ ಪ್ರಾರಂಭಿಸಿದರು 'ಜನಾಂದೋಲನ ಅಭಿಯಾನ.'

ಅಲ್ಲಿದ್ದರೆ ಜನರು?

ಈ ಪ್ರಶ್ನೆ ಅಪ್ರಸ್ತುತ. ಭಾರತೀಯ ಜನತಾ ಪಕ್ಷದ 'ಅನಂತ'ಯಾತ್ರೆಗಳಲ್ಲಿ ಭಾಗವಹಿಸುವಂತೆ ಇಲ್ಲಿಯೂ ಜನರು ಭಾಗವಹಿಸಿದ್ದರು! ಅದೇ ಮುಖ, ಜನ. ಬಾವುಟ, ಘೋಷಣೆ ಬೇರೆಬೇರೆ; ಸಮಯ ಸಂದರ್ಭಕ್ಕೆ ತಕ್ಕಂಥೆ ಅವರ ಜೀವನವೂ ನಡೆಯಬೇಕಲ್ಲ! ಒಟ್ಟಿನಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಸೇರಿದ್ದರು.

ಈ ರಾಜಕಾರಣಿಗಳಿಗೆ ಒಂದು ರೋಗ. ಮೈಕು, ಜನ ಇದ್ದಲ್ಲಿ ಅದೆಂಥದ್ದೊ ಸ್ಫೂರ್ತಿ ಆವರಿಸಿಬಿಡುತ್ತೆ. ತಮ್ಮ ವಾಕ್ ಪ್ರವಾಹವನ್ನು ಅಮಾಯಕ ಜನ ಸಮೂಹದ ಮೇಲೆ ಅಮೋಘವಾಗಿ ಹರಿಸುತ್ತಾರೆ. ಭಾಜಪ, ಕಾಂಗ್ರೆಸ್ ಸಮಾವೇಶಗಳಲ್ಲಿ ನಡೆದದ್ದು ಅದೇ. ಅನಂತ್‌ಕುಮಾರ್ ಎಂಬ ಧಾರ್ಷ್ಟ್ಯ ನಾಯಕರಾದ 'ಅನಾಹುತಕಾರಿ' ಸೋನಿಯಾ ಗಾಂಧಿ ವಿರುದ್ಧ ಹರಿಹಾಯ್ದರು. ಸೋನಿಯಾ ಗಾಂಧಿ ಹೆಸರಿನ ಗಾಂಧಿ ಪದ ಭಾಜಪ ನಾಯಕರಿಗೆ ಅಪ್ರಿಯವಾದ ವಿಷಯವಾದ್ದರಿಂದಲೋ ಅಥವಾ ದೇಶದ ಅಭಿವೃದ್ಧಿಯಿ... ಅದರಲ್ಲಿ ಇದೆ ಎಂದೋ ಏನು ಕಥೆಯೋ ಆ ಪದ... ಹಿಡಿದು ಜಗ್ಗಾಡಿದರು. ತಮ್ಮ ಹೆಸರಿನಲ್ಲಿರುವ... ಗಾಂಧಿಪದ ಬಿಡುವಂತೆ ಅಪ್ಪಣೆ ಕೊಡಿಸಿದರು... ಭಾಜಪದವರಿಗೆ ಈ ಮಾತುಗಳು ಕಿವಿಗೆ ಇಂಪಾಗಿ... ತೋರಿದರೂ ಕಾಂಗ್ರೆಸ್ಸಿನವರಿಗೆ ಕಾಯ್ದ ಕಬ್ಬಿಣದ... ರಸದಂತೆ ಚುರುಗುಟ್ಟಿಸಿತು. ಡಿ.ಕೆ. ಶಿವಕುಮಾರ... ಜನಾಂದೋಲನ ಅಭಿಯಾನದಲ್ಲಿ ಅನಂತ್ ವಿರುದ... ಕಿಡಿಕಾರಿದರು. ತಮ್ಮ ಪ್ರೀತಿಯ ನಾಯಕಿಯ ಮೇಲಿನ... ಆರೋಪವನ್ನು ಸಹಿಸದ ಅವರು ಸಿಕ್ಕಿಸಿಕ್ಕಿದ ಕಡೆಯಲ್ಲೆಲ್ಲ...

ಅಣಕ

ಎಚ್.ಎಲ್. ಕೇಶವಮೂರ್ತಿ

ಅನಂತ್‌ಕುಮಾರ್ ಚೆಡ್ಡಿ ಹರಿಯಲು ಕಾರ್ಯಕರ್ತರಿಗೆ ಕರೆ ನೀಡಿದರು. ಈ ಚೆಡ್ಡಿ ಎಂಬ ವಸ್ತುವು ಪುರುಷರು ಬಳಸುವ ಅಂಡರ್‌ವೇರ್ ರೂಪದ್ದೋ ಅಥವಾ ಆರೆಸ್ಸೆಸ್... ರೂಪದ ದೊಗಳೆ ಖಾಕಿ ಚೆಡ್ಡಿಯೋ ಎಂಬುದನ್ನು ವಿವರಿಸಿಲ್ಲ. ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಎನಿಸಿದ ಉಂಡಾಡಿಗಳು ಅದು ತಮ್ಮ ವ್ಯಕ್ತಿತ್ವದ ಪ್ರತಿರೂಪವಾದ ಖಾಕಿ ಚೆಡ್ಡಿಯೆಂದೇ ಪರಿಭಾವಿಸಿದರು... ಡಿ.ಕೆ.ಶಿ. ವಿರುದ್ಧ ಪ್ರತಿಭಟನೆ ನಡೆಸಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರು. ಸಾರ್ವಜನಿಕವಾಗಿ ಕ್ಷಮೆ ಕೋರುವಂತೆ ಒತ್ತಾಯಿಸಿದರು. ಕ್ಷಮೆ ಕೋರಿದರು ಎಂದೇ ಭಾವಿಸೋಣ. ಆನಂತರವೂ ಅನಂತ್‌ಕುಮಾರ್... ಚೆಡ್ಡಿಯನ್ನು ಯಾರಾದರೂ ಹರಿದರೆ ಅದಕ್ಕೆ ಡಿ.ಕೆ.ಶಿ... ಹೊಣೆಗಾರರಲ್ಲ ಎಂದು ತಿಳಿದುಕೊಳ್ಳುವುದೋ ಹೇಗೆ ಎಂಬುದು ತಿಳಿದುಬಂದಿಲ್ಲ.

"ಅವ್ನಂಗೆ ಅಂದ್ರೆ, ಎಂ.ಪಿ. ಪ್ರಕಾಶ ಕದಿಗೂ ...ವೇಗೌಡನ ಎದುರಿಗೆ ನಿಂತನಲ್ಲ ಅಂತ ಯಲ್ಲಾ ...ಟ್ಟುಗತ ಅವುರೆ. ನಾಟಕರ್ದೋರು, ಸಿನುಮಾದೋರು, ...ಯಿತಿಗಳು, ಕಲಾವಿದರ್ನಲ್ಲ ಅಂತೂ ಪ್ರಕಾಶನು ...ಯುದಾಕಿದನಲ್ಲಾ ಅಂತ ಕೊಂದಾದ್ನ ಅವ್ರುರೆ."

"ಅದರಿಂದ ಏನು ಪ್ರಯೋಜನನೊ ಉಗ್ರಿ? ಪ್ರಕಾಶ್ ...ಘೋರು ಪವರ್ಗೆ ಬರಬೇಕಿತ್ತು" ಎಂದುಕೊಂಡು ...ಟಿಸ್ಬೆ ಬಂದ.

"ಪ್ರಕಾಶ ಪವರ್ಗೆ ಬರೊ ಟೇಮು ಇದಲ್ಲ ಕಣೊ. ...ವೇಗೌಡನ ಆಶ್ರಯದಲ್ಲಿ ಯಾವನೂ ಸರಿಯಾದ ...ದಳಿತ ಕೊಡಕ್ಕಾಗದಿಲ್ಲ. ಈಗ ಎಡೂರಪ್ಪನಿಗೆ ಅವುನು ...ಡೋ ಕಾಟ ನೊಡವಿರು."

"ಎಜ್ಜಾಟ್ಟ್ರ ಕರಟ್ ಕಣೊ. ದಿನ ಬೆಳಗಾಯ್ತು ಅಂದ್ರೆ ...ರಮುಸಿಂಗನಿಗೆ ಕೊಡಬಾರ್ದ ಕಾಟ ಕೊಟ್ಟ. ಅವುನ ...ಲಿ ಮಾಡಬಾರದ್ನ ಮಾಡಿಸ್ದ. ಅದೆ ಮಗ ಮಾಡಿದ್ದನ್ನಲ್ಲ ...ಚ್ಚಗಂಡು ಮಾತಾಡಿದ. ಈಗ ಎಡೂರಪ್ಪನ ಎಂಟನೆ ...ನಿಗೆ ಶನಿಕಾಲಿಕ್ಕಿದಂಗೆ ಹಿಕ್ಕತನೆ ನೋಡು."

"ಸೀನೇಳದ ನೋಡಿದ್ರೆ ಮುಂದಿನ ದಿನ ಭಾಳ ...ನರಂಜನೆ ಕೊಡಂಗದಲ್ಲೊ?"

"ಅದು ನಿಜ. ಆದ್ರೆ ಎಡೂರಪ್ಪ ಮುಖ್ಯಮಂತ್ರಿ ...ಆಗದಿಲ್ಲ ಅಂತ ಭವಿಷ್ಯ ಹೇಳಿದ್ದೋನ ಕರಕಂಡು ...ಂದು ಯಕ್ಕಡದಲ್ಲಿ ವದಿ ಬೇಕಲ್ಲಾ."

"ಅದ್ಯಾಕ್ಲ ಯಕ್ಕಡದಲ್ಲಿ ವದದಿ?"

"ಇನ್ನೇನಕ್ಕ ವಂತೆ. ಇವತ್ತು ...ಡೂರಪ್ಪನಿಗೇನೇಳ್ತನವುನು?"

"ಅವುನ್ಯಾರು ಗೊತ್ತೇನೊ ವಾಟಿಸ್ಸೆ? ಸಿದರಾಮಯ್ಯ ...ಲ್ದದಿಲ್ಲ ಅಂತ ಹೇಳಿದ್ನಲ್ಲ, ಆ ಮುಂಡೆ ಮಗನೆಯ ...ಗೇಳಿರನುವೆ. ಪಾಪ ಅವುನೇನು ಮಾಡ್ತನೇಳು. ಅವನ ...ಯಲಿ ಇವುರೇಳಿಸಿದ್ರು."

"ಯಾರೇಳಿಸಿದ್ರುಲಾ?"

"ಇನ್ಯಾರೇಳುಸ್ತರೆ? ಕುಮಾರಸ್ವಾಮಿನು, ಚೆಲುವರಾಯ ...ಮಿನು ಹೋಗಿ ಎಡೂರಪ್ಪನ ಜಾತಕದಲ್ಲಿ ಮುಖ್ಯಮಂತ್ರಿ ...ಗ ಇಲ್ಲ ಅಂತ ಹೇಳಿಬುಡು ಅಂತ ದುಡ್ಡ ಕೊಟ್ರು. ...ವುನೇಳಿದ. ಅದು ಸುಳ್ಳಾರ ಆಗ್ಲಿ, ನಿಜಾರ ಆಗ್ಲಿ ಆ ...ನ ಮಗನಿಗೆ ದುಡ್ಡಂತೂ ಸಿಕ್ಕಿತೊ. ಆ ಜೋತಿಸಿನೂ ...ಡಿಎಸ್‌ನೋನೆ ಆಗಿದ್ರೆ, ಯಾರೇನಾರ ಬೋದ್ರು ...ವನಿಗೇನು ಅನ್ನದಿಲ್ಲ."

"ಮಾನಗೆಟ್ಟ ನನ್ನ ಮಕ್ಕಳು ಅನ್ನು?"

"ಊ." ■

ಗಾಂಧಿ ಎಂಬ ಪದ ಚೆಡ್ಡಿಯ ಹಂತಕ್ಕೆ ಬಂದಿದೆ ...ಂದ ಹಾಗಾಯಿತು!

ಇದು ಹಾಗಿರಲಿ. ಭಾಜಪ ಧುರೀಣರು ಕಾಂಗ್ರೆಸ್ ...ಂಬಾಗಿಲ ಪ್ರಯತ್ನವನ್ನು ತಡೆಯುವಂತೆ ಕೋರಿ ...ಹಾತ್ಮಗಾಂಧಿ ಪ್ರತಿಮೆಗೆ ಹೂವಿನ ಹಾರ ಹಾಕಿ ...ೋರಿಕೊಂಡರಲ್ಲ, ತನಗೆ ಗುಂಡು ಹಾರಿಸಿದ ವಂಶಜರೇ ...ಂಚಕತನ ಮಾಡಿ, ಅಧಿಕಾರಕ್ಕಾಗಿ ಹಪಹಪಿಸುವುದನ್ನು ...ಂಡು ಆ ಗಾಂಧಿ ಎಂಬಾತನ ಆತ್ಮ ನೊಂದುಕೊಂಡಿತು. ...ಗ ಬೇಕಾದ್ದು ಸಹಜವೇ. ದೇಶಕ್ಕೆ ಸ್ವಾತಂತ್ರ್ಯ ಬಂದ ...ೊಸತರಲ್ಲಿಯೇ ಅಧಿಕಾರದ ಮಮಕಾರ ಇಲ್ಲದೆ ...ೊಂದವರ ಸಾಂತ್ವನಕ್ಕೆ ಹೋದ ಜೀವವಲ್ಲದೆ ಅದು.

ಆಮೇಲೆ ಏನು ಮಾಡಿತಪ್ಪ ಆ ಆತ್ಮ ಎಂದರೆ ...ಪ್ರತಿಮೆಯಿಂದ ಹಾರಿಹೋಯಿತು! ಈ ಆತ್ಮ ಇಲ್ಲದ ...ಾಂಧಿ ಪ್ರತಿಮೆಗೆ ಕಾಂಗ್ರೆಸ್‌ನವರು ಗೋಮೂತ್ರ, ...ಂಗಾಜಲ ಪ್ರೋಕ್ಷಿಸಿ ಭಾಜಪ ಹಾರ ಹಾಕಿ ...ಅಪವಿತ್ರಗೊಳಿಸಿದ್ದ ಪ್ರತಿಮೆಯನ್ನು ಪವಿತ್ರಗೊಳಿಸಿದರು!

ಈಗ ಪ್ರಶ್ನೆ ಏನು ಅಂದರೆ-ರಾಜಕಾರಣಿಗಳೆಂಬ ...ಈ ಜೋಕರ್‌ಗಳಿಂದ ಅಪವಿತ್ರ ಆದದ್ದು ಏನು?

ಭಾರತದ ಪ್ರಜಾಪ್ರಭುತ್ವ!?

ಪವಿತ್ರ ಸಂವಿಧಾನ!?

ಚುಟುಕು

1. ಒಂದು ತಿಂಗಳಿನಿಂದ ರಾಷ್ಟ್ರಪತಿ ಆಡಳಿತ ...ದೆಯುತ್ತಿದೆಯಲ್ಲ, ಭಾಜಪ-ಜೆಡಿಎಸ್ ಕಣ್ಣಿಗೆ ಅಭಿವೃದ್ಧಿ ...ಾರ್ಯಗಳು ಸ್ಥಗಿತಗೊಂಡಿರುವುದು ಧೃಗ್ಗೋಚರ ಆಗಿವೆ. ...ಡಿಯೂರಪ್ಪ ಅವರು ಅಭಿವೃದ್ಧಿ ಕಾರ್ಯಗಳು ನಿಂತೇ ...ೋಗಿವೆ ಎಂದು ಅಲವತ್ತು ಕೊಂಡಿದ್ದಾರೆ.

ಯಾಕೆ ಹೀಗೆ ಅವರ ಕಣ್ಣಿಗೆ ಕಾಣಿಸುತ್ತಿದೆ?

ಇಷ್ಟತ್ತು ತಿಂಗಳಿನಿಂದ ಬರುತ್ತಿದ್ದ ಆದಾಯದ ...ಊಟ ಬತ್ತಿ ಹೋಗಿದೆ.


2. ಅಧಿಕಾರಕ್ಕಾಗಿ ಯಾವತ್ತೂ ಪ್ರಯತ್ನಿಸಿಲ್ಲ, ...ಮುವುದೂ ಇಲ್ಲ ಎಂದು ಸದ್ಯ ಪ್ರೀತಿಯ ಹಲ್ಲುಪಿ ...ಅವರು ಖಡಾಖಂಡಿತವಾಗಿ ಹೇಳಿದ್ದಾರೆ.

ಹಾಗಾದರೆ ಧರ್ಮಯಾತ್ರೆ, ರಾಜಭವನ ಚಲೋ, ...ಜ್ಯಪಾಲರ, ರಾಷ್ಟ್ರಪತಿಗಳ ಎದುರು ಬೆಂಬಲಿತ ಶಾಸಕರ ...ರೇಡ್ ಇವೆಲ್ಲ ಏತಕ್ಕಾಗಿ ಹಲ್ಲುಪಿ ಗೌಡರೆ? ■



ಹಡಪದ್‌ರ ಚಿತ್ರಕಲಾ ಪ್ರದರ್ಶನವನ್ನು ವೀಕ್ಷಿಸುತ್ತಿರುವ ಪಿ.ಲಂಕೇಶ್ ಮತ್ತು ಸಾಹಿತಿ ಕ.ವೆಂ.ರಾಘವೇಂದ್ರ

ತುಂಡು ಜಾಗಕ್ಕೂ ಗತಿಯಿಲ್ಲದ ಹಡಪದ್ ಕಲಾಶಾಲೆ



ಆರ್.ಎಂ. ಹಡಪದ್‌ರವರು ಬಹಳ ಕಷ್ಟಪಟ್ಟು ಕಟ್ಟಿದ, ಬೆಳೆಸಿದ ಕೆನ್ ಸ್ಕೂಲ್ ಆಫ್ ಆರ್ಟ್ಸ್ ಇವತ್ತು ಅಸ್ತಿತ್ವವನ್ನೇ ಕಳೆದುಕೊಳ್ಳುವ ಅಪಾಯದಲ್ಲಿದೆ. ಒಂದೆಡೆ ಪ್ರತ್ಯೇಕ ಸ್ಥಳ ಕೋರಿ ಸಲ್ಲಿಸಿರುವ ಅರ್ಜಿಗಳ ಫೈಲೇ ಕಾರ್ಪೊರೇಷನ್‌ನ ಕಡತಗಳಿಂದ ಮಾಯವಾಗಿದ್ದರೆ, ಇನ್ನೊಂದೆಡೆ ಈ ಐತಿಹಾಸಿಕ ಕಲಾಶಾಲೆ ಇರುವ ಕಟ್ಟಡವನ್ನೇ ನಾಮಾವಶೇಷ ಮಾಡಿ ಹೊಸ ಕಾರ್ಪೊರೇಟ್ ಶೈಲಿಯ ಕಟ್ಟಡವನ್ನು ನಿರ್ಮಿಸಲು ಸರ್ಕಾರ ಸಜ್ಜಾಗಿ ನಿಂತಿದೆ. ಆ ಮೂಲಕ ಈ ಕಾಲಾಶಾಲೆಯನ್ನೇ ನಾಶ ಮಾಡಲು ಹುನ್ನಾರ ನಡೆಸಿದೆ. ಈ ಹಿನ್ನೆಲೆಯಲ್ಲಿ ಹಡಪದ್ ಮತ್ತವರ ಶಾಲೆಯ ಬಗ್ಗೆ ಲಂಕೇಶರು ಬರೆದ ಲೇಖನವನ್ನು ಇಲ್ಲಿ ಮತ್ತೆ ಪ್ರಕಟಿಸುತ್ತಿದ್ದೇವೆ.

ಮರೆಯುವ ಮುನ್ನ



ಪಿ. ಲಂಕೇಶ್ -ಜೂನ್ 24, 1984

ಆರ್.ಎಂ. ಹಡಪದ್ ಎಂಬ ಹೆಸರನ್ನು ನೀವು ಆಕಸ್ಮಾತ್ ಕೇಳಿರಬಹುದು. ಈತ ಚಿತ್ರಕಾರ, ಶಿಲ್ಪಿ ಮತ್ತು ಅದೆಲ್ಲಕ್ಕಿಂತ ಮುಖ್ಯವಾಗಿ ಕಲೆಯ ಅಧ್ಯಾಪಕ. ತೀರಾ ಬಡವನಾದ ಈತ ಸಂಕೋಚದ ಮನುಷ್ಯ; ರಾಜಕಾರಣಿಗಳೆದುರು ಛಾತಿಯಿಂದ ಮಾತಾಡುವುದು, ಮೆಚ್ಚಿಸುವುದು, ಅವರ ಮರ್ಜಿಯಲ್ಲಿ ಸಾಕಷ್ಟು ಕಬಳಿಸುವುದು, ಮಂತ್ರಿಗಳನ್ನು ಓಲೈಸಿ ಜಾಗ ಗಿಟ್ಟಿಸಿಕೊಳ್ಳುವುದು, ಕಲಾಶಾಲೆಯ ಹೆಸರಲ್ಲಿ ಸರ್ಕಾರದ, ಸಾರ್ವಜನಿಕರ ಬೊಕ್ಕಸಕ್ಕೆ ಕನ್ನ ಹಾಕುವುದು-ಇತ್ಯಾದಿ ಗೊತ್ತಿಲ್ಲದ ಈತ ಹದಿನಾರು ವರ್ಷದ ಹಿಂದೆ (1968 ರಲ್ಲಿ) ಬೆಂಗಳೂರಲ್ಲಿ 'ಕೆನ್ ಸ್ಕೂಲ್ ಆಫ್ ಆರ್ಟ್ಸ್' ಎಂಬ ಕಲಾಶಾಲೆ ಸ್ಥಾಪಿಸಿದರು. ಮಕ್ಕಳು ನಿಲ್ಲುವುದಕ್ಕೆ ಜಾಗವಿಲ್ಲದ ಸಣ್ಣಪುಟ್ಟ ಜೋಪಡಿಗಳಲ್ಲಿ ಕಲೆ ಕಲಿಸಿದ ಹಡಪದ್ ಕೊನೆಗೆ ಗಬ್ಬುಗಬ್ಬಾಗಿದ್ದ ಜಾಗವೊಂದನ್ನು ಗುಡಿಸಿ ಚೊಕ್ಕಮಾಡಿ ಹುಡುಗ-ಹುಡುಗಿಯರನ್ನು ಕೂರಿಸಿಕೊಂಡು ಪಾಠ ಹೇಳಿದರು. ಇದು ಶೇಷಾದ್ರಿಪುರದ ಮಾರ್ಕೆಟ್ಟಿನ ಹಿಂಭಾಗದಲ್ಲಿ, ತೀರಾ ಹೊಲಸಾದ, ಗೂಂಡಾಗಳ ತಾಣವಾದ, ವಶೀಲಿರಾಜರುಗಳ ಕೇಂದ್ರ ಸ್ಥಳವಾದ ಈ ಜಾಗದಲ್ಲಿ ಕಲಾಶಾಲೆ ಇದೆ ಎಂದು ನಂಬುವುದೂ ಕಷ್ಟ. ಇಲ್ಲಿ ಹಡಪದ್ ತಮ್ಮ ಕಲಾವಿದ ಮಿತ್ರ ಮಣಿಯೊಂದಿಗೆ ಶಾಲೆಯನ್ನು ಮುಂದುವರಿಸಲು ಕುತ್ತುಸಿರುಬಿಡುತ್ತಿರುವುದು ನಿಜ. ಅಷ್ಟೇ ನಿಜವೆಂದರೆ, ಈ ಶಾಲೆಯಿಂದ ಪಿ. ಚಂದ್ರಶೇಖರ್, ಮನೋಹರ್, ಚಂದ್ರನಾಥ್, ಶ್ಯಾಮಸುಂದರ್, ಶೀಲಾಗೌಡ, ಸಾವಿತ್ರಿ (ಈಚೆಗೆ ಮುಂಬೈನಲ್ಲಿ ಸ್ವನಗ್ನ ಚಿತ್ರ ತೋರಿ ಸುದ್ದಿ ಮಾಡಿದ ಹುಡುಗಿ), ಮರಿಶಾಮಾಚಾರ್, ವೆಂಕಟಾಚಲಪತಿ ಮುಂತಾದ ಚಿತ್ರಕಾರರು, ಶಿಲ್ಪಿಗಳು ರೂಪುಗೊಂಡದ್ದು; ಇವರಲ್ಲನೇಕರು ಕುಂಚ, ಪೆನ್ನು, ಉಳಿಯನ್ನು ಹಿಡಿವುದನ್ನು ಹಡಪದ್‌ರ ಶಾಲೆಯಲ್ಲಿ ಕಲಿತು ಒಳ್ಳೊಳ್ಳೆಯ ಕೆಲಸ, ಸ್ಕಾಲರ್‌ಷಿಪ್ ಗಿಟ್ಟಿಸಿಕೊಂಡು ಕೆನ್ ಶಾಲೆಯತ್ತ ಮತ್ತೆ ತಿರುಗಿ ನೋಡದಿರುವುದು ಅಷ್ಟೇ ನಿಜ; ಅದಕ್ಕಿಂತ ದ್ರೋಹವೆಂದರೆ, ಹಡಪದ್‌ರ ವಿರುದ್ಧ ಪಿತೂರಿಯ ಗುರುದಕ್ಷಿಣೆ ನೀಡಿದ್ದೂ ನಿಜ. ಆದರೆ ಈ ಶಿಷ್ಯರಲ್ಲಿ ಕೆಲವರು ನಿಜವಾದ ಕಲಾವಿದರೂ ಆದರು; ಇದರಿಂದ ಹಡಪದ್ ಶಾಲೆಗೆ ಖ್ಯಾತಿಯೇನೂ ಬಂದಂತಿಲ್ಲ.

ಯಾಕೆಂದರೆ, ಕಲೆಯ ದೃಷ್ಟಿಯಿಂದ ಕಾಂಗ್ರೆಸ್ಸಿಗಿಂತ ಅಷ್ಟೇನೂ ಉತ್ತಮವಲ್ಲದ ಜನತಾ ಸರ್ಕಾರದ ಹಲವು ಪುಢಾರಿಗಳು ನಂಜುಂಡರಾವ್ ಎಂಬ ಕಲಾಪುಢಾರಿಗೆ ಆರತಿ ಎತ್ತುತ್ತಿರುವುದು, ಅಶೋಕ ಹೋಟೆಲಿನ ಪಕ್ಕದಲ್ಲಿರುವ ಆತನ ಚಿತ್ರಕಲಾ ಪರಿಷತ್ತಿಗೆ ಜನತಾದ ಚಂದ್ರಪ್ರಭಾ, ಕಾಂಗ್ರೆಸ್ಸಿನ ಕೆ.ಎಸ್. ನಾಗರತ್ನಮ್ಮ ಎಂಬ ದಢೂತಿ ಮಹಿಳೆಯರು ಕುಮ್ಮಕ್ಕು ಕೊಟ್ಟು ಕಲೆಯ ಅಭ್ಯಾಸ, ಅಭಿರುಚಿ ಪೂರ್ತಿ ಧ್ವಂಸವಾಗುವಂತೆ ನೋಡಿಕೊಳ್ಳುತ್ತಿರುವುದು ಕನ್ನಡ ಜನತೆಗೆ ಗೊತ್ತಿರಲಿಕ್ಕಿಲ್ಲ.

ಈ ನಂಜುಂಡರಾವ್ ಬಗ್ಗೆ ಕೇಳಿದರೆ ಹಡಪದ್ ಏನನ್ನೂ ಹೇಳುವುದಿಲ್ಲ. ನಂಜುಂಡರಾವ್‌ಗೆ ಸರ್ಕಾರದಿಂದ ದೊರೆತ ಕೋಟ್ಯಂತರ ಬೆಲೆಯ ನೆಲವಾಗಲಿ, ಆತನಿಗೆ ಸಿಕ್ಕುತ್ತಿರುವ ಲಕ್ಷಾಂತರ ಧನಸಹಾಯವಾಗಲಿ ಈ ಕ್ಷೌರಿಕ ಕುಲದ ಹಡಪದ್‌ರಲ್ಲಿ ಅಸೂಯೆ ಹುಟ್ಟಿಸಿಲ್ಲ. ಹಡಪದ್‌ರಿಗೆ ತಮ್ಮದೇ ಆತ ತಾಪತ್ರಯಗಳು, ನೋವುಗಳು, ತಲೆಬೇನೆಗಳು ಹಲವಾರಿವೆ.

ಇವೆಲ್ಲದರ ಬಗ್ಗೆ ರಾಚಯ್ಯನವರ ಇಲಾಖೆಗೆ ಬರೆದರೆ, ಸ್ಕೂಲಿಗೆ ಸಿಕ್ಕಬೇಕಾದ ಗ್ರಾಂಟ್ಸ್ ಬಗ್ಗೆ ವಿವರಿಸಿದರೆ ಅದೊಂದು ಗೋಡೆಯಂತೆ ವರ್ತಿಸುತ್ತಿದೆ; ಜನತಾ ಪುಢಾರಿಗಳು ಕೆಲವರು ಹಡಪದ್‌ರನ್ನು ಅವರ ಸ್ಕೂಲಿನೊಂದಿಗೆ ಶೇಷಾದ್ರಿಪುರದಿಂದ ಓಡಿಸಲು ಯತ್ನಿಸುತ್ತಿದ್ದಾರೆ.

"ಹಾಗಾದರೆ ಯಾವ ಗಣ್ಯನೂ ನಿಮ್ಮ ನೆರವಿಗೆ ಬಂದಿಲ್ಲವೆ?" ಎಂದು ಕೇಳಿದೆ.


"ಅವರ ನೆರವಿನ ಬಗ್ಗೆ ಹೇಳಿದರೆ ನೀವು ನಗುತ್ತೀರಿ. ಮೊನ್ನೆ ಎಚ್.ಎಲ್. ನಾಗೇಗೌಡ್ರು ತಮ್ಮ ಜಾನಪದ ಅಕಾಡೆಮಿಗೆ ಒಂದು ಮ್ಯೂರಲ್ ಮಾಡಿಸಿಕೊಳ್ಳಲು ಬಂದ್ರು. ಮಾಡಿಕೊಟ್ಟೆ. ಅದಕ್ಕೆ ತಗುಲಿದ ಸಲಕರಣೆಗಳ ಖರ್ಚು ಕೊಟ್ರು. 'ನಿಮ್ಮ ಕಲೆಯನ್ನು ಸಂಭಾವನೆಯ ಮೂಲಕ ಅಳೆಯುವುದು ಹೇಗೆ ಸಾಧ್ಯ? ಆದ್ದರಿಂದ ನಿಮಗೊಂದು ಸನ್ಮಾನ ಮಾಡಿಸುತ್ತೇನೆ' ಎಂದು ಹೊರಟುಹೋದರು. ಅನೇಕ 'ದೊಡ್ಡವರು' ಶಾಲೆಗೆ ನೆರವಾಗುವಂತೆ ಬಂದು ತಮ್ಮ ಮತ್ತು ತಮ್ಮವರೆಲ್ಲರ ತೈಲಚಿತ್ರ ಬರೆಸಿಕೊಂಡು ಹೋಗುತ್ತಾರೆ. ಮತ್ತೆ ಇತ್ತ ಕಾಲಿಡುವುದಿಲ್ಲ. ಆದರೆ ಸಂಕೋಚ ಸ್ವಭಾವದ ಒಳ್ಳೆಯ ಮನುಷ್ಯರೊಬ್ಬರು ಮಾತ್ರ ನನ್ನ ನೆರವಿಗೆ ನಿಂತು ಸಮಾಧಾನ ತಂದಿದ್ದಾರೆ...."

"ಯಾರವರು?"

"ಗಾಂಧಿ ನಗರದ ಶಾಸಕ ನಾರಾಯಣರಾವ್. ಈ ವ್ಯಕ್ತಿಯಂಥ ಸರಳ, ಪ್ರಾಮಾಣಿಕ ಮನುಷ್ಯ ಮತ್ತು ಕಲೆಯ ಮೌಲ್ಯದ ಬಗ್ಗೆ ಗೌರವವುಳ್ಳ ರಾಜಕಾರಣಿ ನನಗಿನ್ನೂ ಕಂಡಿಲ್ಲ. ಇವರು ಕೂಡ ಸೂಕ್ಷ್ಮ ಸ್ವಭಾವದವರು; ವಿಧಾನಸೌಧಕ್ಕೆ ಹೋಗಿ ಅಧಿಕಾರಿಗಳಿಗೆ ಬೈದು ಕೆಲಸ ಮಾಡಿಕೊಡಬಲ್ಲ ನುಗ್ಗುವ ಪೈಕಿಯಲ್ಲ. ಮಂತ್ರಿಗಳನ್ನ ಕಂಡು ಜೋರು ಮಾಡುವವರಲ್ಲ" ಅನ್ನುತ್ತಾರೆ ಹಡಪದ್.

ಎಲ್ಲೆಲ್ಲೂ ತಾಂಡವವಾಡುತ್ತಿರುವ ಅವಾಂತರ, ಭ್ರಷ್ಟತೆ, ಅಪ್ರಾಮಾಣಿಕತೆಯ ನಡುವೆ ನಿಂತಿರುವ ಈ ಹಡಪದ್ ವಿಚಿತ್ರ ಮನುಷ್ಯ. ಈತ ಕೇಳುವುದು ಅಧಿಕಾರವನ್ನಲ್ಲ; ಕುದಿಕೆಗಟ್ಟಲೆ ಹೊನ್ನನ್ನಲ್ಲ, ರಾಜಭೋಗವನ್ನಲ್ಲ; ಈತ ಬಯಸುವುದು ಕೆಲಸ ಮಾಡಲು ಒಂದು ಸ್ಥಳ, ಎಲ್ಲ ಶಾಲೆಗಳಿಗೆ ಕೊಡುವಂತಹ ನೆರವು ಮಾತ್ರ. ಇದಕ್ಕೆ ಪ್ರತಿಯಾಗಿ ಹಡಪದ್ ನಮ್ಮ ಎಳೆಯ ಹುಡುಗ-ಹುಡುಗಿಯರಿಗೆ ಕೊಡಬಯಸುವುದು ಕಲೆಯ ತಂತ್ರ, ಅಭಿರುಚಿ, ರೋಮಾಂಚನವನ್ನ; ನಾವು ನೋಡುವ ಜಗತ್ತು ತನ್ನ ಮೂಲಧರ್ಮ, ಮೂಲರೂಪದೊಂದಿಗೆ ಕಲೆಯಾಗಿ ಹೊರಹೊಮ್ಮಬಲ್ಲ ಕಲಾಕುಶಲತೆಯನ್ನ.

ಕೆನ್ ಕಲಾ ಶಾಲೆಯನ್ನು ಉಳಿಸಿಕೊಳ್ಳುವುದು ಎಲ್ಲರ ಕರ್ತವ್ಯ



ಆರ್.ಎಂ. ಹಡಪದ್ ನಮ್ಮ ಕಲೆಯ ವಕ್ತಾರರು ಮಾತ್ರವಲ್ಲ ಅಕ್ಷರಿಯ ನೆಚ್ಚಿನ ಗುರುಗಳು ಕೂಡ ಆಗಿದ್ದವರು. ಹೊಸತನದ ಹೊಸ್ತಿಲಿನಲ್ಲಿದ್ದ ಕನ್ನಡ ನಾಡು 1956 ರಲ್ಲಿ ಒಟ್ಟುಗೂಡಿತು. ತಮ್ಮ ಸಾಂಸ್ಕೃತಿಕ ಪರಂಪರೆಯ ಬಗೆಗೆ ಬಹಳ ಅಭಿಮಾನವಿದ್ದರೂ ಪರಸ್ಪರ ಕಲೆತು, ಅದನ್ನು ಅರಿಯಲು ಹಾಗೂ ಅರ್ಥ ಮಾಡಿಕೊಳ್ಳಲು ಸ್ವಲ್ಪಕಾಲ ಬೇಕಾಯಿತು. ಇವರಲ್ಲಿ ಲಲಿತಾ ಕಲಾ ಕ್ಷೇತ್ರದ ಸ್ಥಿತಿ ಅಂತಹ ಆಶಾದಾಯಕವಾಗೇನೂ ಇರಲಿಲ್ಲ.

ಅದರಲ್ಲೂ ಚಿತ್ರಕಲೆಯ ಆಧುನಿಕ ಶೈಲಿ ಎಂದಕೂಡಲೇ ರೂಢಿಗಿಂತ, ಪರಿಚಿತವಾದದ್ದಕ್ಕಿಂತ ಭಿನ್ನವಾದದ್ದರಿಂದ ಅಲ್ಪಕಾಲದಲ್ಲಿ ತಿಳಿಯುವುದು, ಅನುಭವಿಸುವುದು, ಅನುಭವಿಸಿ ಮೆಚ್ಚುವುದು ಕಷ್ಟವಾಗಿತ್ತು. ವಿಮರ್ಶಕರ ಅಭಿರುಚಿ ಬೆಳೆಸಬೇಕೆಂದು ಹಡಪದ್ ಬಯಸಿದ್ದರು. ಅದರಂತೆ ಹೊಸ ದೃಷ್ಟಿಯ ಕಲಾವಿದರನ್ನು ತಯಾರು ಮಾಡಿದರು.

ಹಡಪದರ ಕಲೆಯ ಗೀಳು (1967 ರಲ್ಲಿ ಮಿಣಜಗಿ ಯವರ ಅಧ್ಯಾಪಕರ ಕಲಾ ತರಬೇತಿ ಶಾಲೆಯು ಮುಚ್ಚಿದ ತರುವಾಯ) ಅವರನ್ನು ಕಲಾ ಶಾಲೆ ತೆಗೆಯುವ ಹೊಸ ಸಾಹಸಕ್ಕೆ ನೂಕಿತು. ಗುರು ದಂಡಾವತಿ ಮಠ ಅವರ ಎಚ್ಚರಿಕೆಯ ನಡುವೆ 1968 ರಲ್ಲಿ 'ಕೆನ್' ಕಲಾ ಶಾಲೆಯನ್ನು ಪ್ರಾರಂಭಿಸಿದರು. 'ಕೆನ್' ಎಂದರೆ ಜ್ಞಾನ, ಹಡಪದರ ಆದರ್ಶಗಳ ಬಿಂಬ. ಪ್ರಾಚೀನ ಗುರುಕುಲ ಪದ್ಧತಿಯ ವೈಯಕ್ತಿಕ, ಆತ್ಮೀಯ ಗುರು-ಶಿಷ್ಯ ಸಂಬಂಧದ ಶಾಲೆಯ ಸ್ವರೂಪವಾಗಿತ್ತು ಕೆನ್.

ಪ್ರಾರಂಭದಿಂದಲೇ ಕೆನ್ ಶಾಲೆ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವೂ ಆಯಿತು. ಪ್ರಖ್ಯಾತ ಕಲಾವಿದರ ಜನ್ಮದಿನ ಆಚರಣೆಯ ನೆಪದಲ್ಲಿ ಅವರ ಕೃತಿಗಳ ಅಧ್ಯಯನ, ಚರ್ಚೆ ಮತ್ತು ವಿದ್ಯಾರ್ಥಿಗಳಿಂದಲೇ ಪ್ರತಿಕೃತಿಗಳನ್ನು ಮಾಡಿಸಿ ಕಲಾ ಪ್ರದರ್ಶನಗಳ ವ್ಯವಸ್ಥೆ ಮಾಡುವ ಪ್ರಯತ್ನ ನಡೆಯಿತು.

ಕೆನ್ ಕಲಾ ಶಾಲೆ ಪ್ರಾರಂಭವಾದದ್ದು ಕುರುಬರ ಸಂಘದ ಬಳಿ, ಗಾಂಧಿನಗರದಲ್ಲಿ, ಎರಡು ವರ್ಷದ ನಂತರ ಕಪಾಲಿ ಟಾಕೀಸಿನ ಬಳಿಗೆ ವರ್ಗ. ಒಂದೇ ವರ್ಷದಲ್ಲಿ ಸರ್ಪೆಂಟೈನ್ ರಸ್ತೆ, ಕುಮಾರ ಪಾರ್ಕ್‌ಗೆ ಬದಲಾವಣೆ. ಕಡೆಗೆ ಶೇಷಾದ್ರಿಪುರಂಗೆ ಬಂದದ್ದು 1972 ರಲ್ಲಿ, ಕಳೆದ 35 ವರ್ಷಗಳಿಂದಲೂ ಅಲ್ಲೇ (ಶೇಷಾದ್ರಿಪುರಂ) ಶಾಲೆ ನಡೆಯುತ್ತಿದೆ.

ಹಡಪದ್ ಬಹುವಾಗಿ ಕಹಿಯನ್ನೇ ಉಂಡವರು. ವರ್ಣ ವರ್ಗ ಪಕ್ಷಪಾತ, ಸಂಘರ್ಷಗಳ ಹಿನ್ನೆಲೆಯಲ್ಲೇ ಬೆಳೆದವರು. ತಮ್ಮ ಮಿತಿಯಲ್ಲೇ ಆ ಬಗ್ಗೆ ಜಾಗೃತಿ ಮೂಡಿಸುವ ಸಂಘಟನಾ ಕಾರ್ಯಗಳನ್ನು ನಡೆಸಿದವರು. ಹೈಸ್ಕೂಲಿನಲ್ಲಿದ್ದಾಗಲೇ ವಯಸ್ಕರ ಶಿಕ್ಷಣ ಕಾರ್ಯ ಮಾಡಿದವರು ಹಡಪದ್.

ಬೆಂಗಳೂರಿನ ಕೆನ್ ಕಲಾ ಶಾಲೆಗೆ ಕರ್ನಾಟಕದ ಉತ್ತರದ ತುದಿಯಿಂದಲೂ ಬಡ ವಿದ್ಯಾರ್ಥಿಗಳು ಕಲಿಯಲು ಬರುತ್ತಿದ್ದರು. ಕೆನ್ ಶಾಲೆಯಲ್ಲೇ ಅವರಿಗೆ ತಾತ್ಕಾಲಿಕ ಆಶ್ರಯ ನೀಡಿ ಪೂರಿ ಬ್ರೆಡ್ಡು ಹಂಚಿಕೊಂಡು ಬದುಕುತ್ತಾ ವಿದ್ಯಾರ್ಥಿಗಳನ್ನು ಮಕ್ಕಳಿಗಿಂತ ಹೆಚ್ಚಿನ ಆಸಕ್ತಿಯಿಂದ ಬೆಳೆಸಿದರು.

ಸಮುದಾಯ ಸಂಪರ್ಕದ ನಂತರ ಜನಜಾಗೃತಿಗೆ ಕಲಾ ಮಾಧ್ಯಮವನ್ನು ಸೃಜನಶೀಲವಾಗಿ ಹೆಚ್ಚು ಬೆಳೆಸಿದರು.

ಹಡಪದರ ವರ್ಣಚಿತ್ರ, ರೇಖಾಚಿತ್ರಗಳಲ್ಲೆಲ್ಲಾ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಪ್ರಜ್ಞೆ ರೂಪಕಾಳಜಿಗಳ ಭಾಗವಾಗಿ, ಹೇಳಿಕೆಯಾಗಿ, ಉಪದೇಶವಾಗಿ, ಪ್ರಚಾರವಾಗಿ ವ್ಯಕ್ತವಾಗಿದೆ.

ನೋವಿನಲ್ಲಿ ಧರ್ಮ ಹುಟ್ಟುತ್ತದೆ ಎನ್ನುತ್ತಿದ್ದರು ಹಡಪದ್. ಮತ ಧರ್ಮ ಸಂಬಂಧಿತ ಅವರ ಚಿಂತನೆಗಳು ಹಲವಾರು ಚಿತ್ರಗಳಲ್ಲಿ ವ್ಯಕ್ತಗೊಂಡಿವೆ. ಒಂದು ಮತೀಯ ಚೌಕಟ್ಟಿನಲ್ಲೇ ಬೆಳೆದರೂ ಆಚರಣೆಗಳನ್ನು, ನಂಬಿಕೆಗಳನ್ನು ಪ್ರಶ್ನಿಸುತ್ತಾ ಬಂದವರು. ಹಡಪದ್ ನಾಸ್ತಿಕರಾಗಿರಲಿಲ್ಲ, ಹಾಗಂತ ದೇವಸ್ಥಾನ, ಪೂಜೆ ಎಂದು ಅನುಸರಿಸಿದವರಲ್ಲ, ಯಾವ ದುಶ್ಚಟಗಳೂ ಇಲ್ಲದ ಪರಿಶುದ್ಧ ಜೀವನ, ಪ್ರೀತಿ, ನೀತಿಗಳ ರೂಪವಾಗಿದ್ದರು.

ಕಲೆಯ ಎಲ್ಲ ಪ್ರಕಾರಗಳ ಜೊತೆಗೆ ಬದುಕಿನ ಸಮಸ್ತ ಅಂಗಗಳ ಜೊತೆಗೂ ಕೂಡ ನಿಕಟ ಸಂಪರ್ಕವಿರಬೇಕೆಂಬ ಅವರ ಆಲೋಚನಾ ಕ್ರಮದ ಬಗ್ಗೆ ಅನೇಕರು ಮೂಗು ಮುರಿಯುತ್ತಿದ್ದರು. ಆದರೆ ಕಾಲ ಸರಿದಂತೆ ಅದರಿಂದ ತಮ್ಮ ವ್ಯಕ್ತಿತ್ವ ವಿಕಸನಕ್ಕೆ ಹೊಸ ಮಾರ್ಗ ಕಂಡುಕೊಂಡ ನಂತರ ಇದೇ ಹಡಪದ್ ಪರಂಪರೆಯವರಾಗಿ ಮಾರ್ಪಟ್ಟರು. ವಿಚಾರಗೋಷ್ಠಿ, ಕವಿಗೋಷ್ಠಿ, ನಾಟಕ ಪ್ರದರ್ಶನ, ಚಿತ್ರಕಲಾ ಶಿಬಿರ, ಸಂಗೀತ ಕಛೇರಿ, ಚಿತ್ರ ಪ್ರಾತ್ಯಕ್ಷಿಕೆ ಹಾಗೂ ಜ್ಞಾನಾರ್ಜನೆಗೆ ಪೂರಕವಾದ ಅವಶ್ಯಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದವರು ಹಡಪದ್.


ಯಾರಿಗೂ, ಯಾವುದಕ್ಕೂ ರಾಜಿಯಾಗದ ಇವರು ತಮ್ಮಿಚ್ಛೆಯಂತೆ ಕೊನೆವರೆಗೂ ಬದುಕಿದರು. ಅವರು ನಮ್ಮನ್ನಗಲಿ (ಇದೇ ನವೆಂಬರ್ 23 ಕ್ಕೆ) ನಾಲ್ಕು ವರ್ಷಗಳಾಗುತ್ತಿದೆ. ತಮ್ಮ ಇಡೀ ಜೀವನವನ್ನೇ ಒತ್ತೆ ಇಟ್ಟು ಪೋಷಿಸಿಕೊಂಡು ಬಂದ 'ಕೆನ್' ಇಂದು ಸ್ವಂತ ನೆಲೆಯಿಲ್ಲದೆ ಕನಲುತ್ತಿದೆ. ಎಲ್ಲಾ ಕ್ಷೇತ್ರದವರೊಂದಿಗೆ ಸಂಪರ್ಕ ಹೊಂದಿದ್ದ ಕೆನ್ ಕಲಾ ಶಾಲೆಗೆ ಉಸಿರಾಟದ ಅಭದ್ರತೆ ಒದಗಿದೆ. ಕೆನ್‌ನ ಪ್ರಯೋಜನಗಳನ್ನು ಉಂಡು ದಷ್ಟಪುಷ್ಟವಾಗಿ ಬೆಳೆದವರ ದಂಡು ಸಾವಿರವಿದ್ದರೂ ಇಂದು ಅನಾಥವಾಗಿದೆ.

ಚಿಂತನೆಯ ಗೂಡಾಗಿದ್ದ, ಅಪಾರ ಅನುಭವದ, ಎಲ್ಲರೊಂದಿಗೂ ಬೆರೆತು, ಕಲಾಲೋಕಕ್ಕೆ ತಮ್ಮನ್ನೇ ಸಮರ್ಪಿಸಿಕೊಂಡ ಹಡಪದ್‌ರ 'ಕೆನ್'ಗೊಂದು ನೆಲೆ ಒದಗಿಸುವುದು ಸರ್ಕಾರದ, ಕಲಾಭಿಮಾನಿಗಳ, ಶಿಷ್ಯರ ಕರ್ತವ್ಯವಲ್ಲವೆ....


ಈ ಮೂಲಕವಾದರೂ ಆ ಮಹಾನ್ ಚೇತನದ ಆತ್ಮಕ್ಕೆ ಶಾಂತಿ-ಗೌರವ ದೊರಕಿಸಬೇಕಿದೆ.

■ ಮಂಜುನಾಥ್ ನಿಲಸೋಗೆ

ಆರ್.ಎಂ. ಹಡಪದ್‌ರ ಕಲಾಕೃತಿಗಳು







ಮುಸ್ಲಿಮರ ಹೆಣಗಳ ಮೇಲೆ ಹಿಂದೂ ಧರ್ಮ ಕಟ್ಟಬೇಕೆ?

ನಾನು ಒಮ್ಮೆ ಮುಸ್ಲಿಮರ ವಾರಪತ್ರಿಕೆ 'ಸನ್ಮಾರ್ಗ' ಓದಿದ್ದೆ. ಅದರಲ್ಲಿ ಗುಜರಾತ್ ಕೋಮುಗಲಭೆಯಿಂದ ಮುಸ್ಲಿಮರ ಮೇಲೆ ಆದ ಹಲ್ಲೆ, ಅತ್ಯಾಚಾರ, ಕೊಲೆ, ಸಾಮೂಹಿಕ ಹತ್ಯೆ ಇಂತಹ ವಿಷಯಗಳ ಬಗ್ಗೆ ಬರೆಯಲಾಗಿತ್ತು. ಆದರೆ ನಾನು ಅದನ್ನು ನಂಬಿರಲಿಲ್ಲ. ಯಾಕೆಂದರೆ ನಾನು ಒಬ್ಬ ಹಿಂದೂ ಆಗಿದ್ದು, ಮುಸ್ಲಿಮರು ತಿರುಚಿ ಬರೆದಿರಬಹುದು ಅಂದುಕೊಂಡಿದ್ದೆ. ಆದರೆ ಮೊನ್ನೆ 'ಆಜ್‌ತಕ್' ನ್ಯೂಸ್‌ನಲ್ಲಿ ತೆಹೆಲ್ಕಾ ತಂಡದವರು ನಡೆಸಿದ ಗುಜರಾತಿನ ಸತ್ಯಾನ್ವೇಷಣೆ (ಬಾಬೂ ಭಜರಂಗಿ ಹೇಳಿದ ಮಾತು, ವಕೀಲರು ಮಾಡಿದ ಉಪಾಯ, ಮಂತ್ರಿಗಳು ಮಾಡಿದ ಸಹಾಯ ಹಾಗೂ ಆರಕ್ಷಕರು ತೋರಿಸಿದ ರಾಕ್ಷಸತನ)ಯನ್ನು ನೋಡಿ ನಾನು ಒಮ್ಮೆಗೆ ದಂಗಾದೆ. ನಾನು ಹಿಂದೂ ಧರ್ಮದವನಾಗಿದ್ದರೂ ನಾನು ಒಮ್ಮೆಗೆ ಮಾನವೀಯ ದೃಷ್ಟಿಕೋನದಿಂದ ಯೋಚಿಸಿದೆ. ಯಾಕೆಂದರೆ ಜಾತಿ, ಧರ್ಮ ಯಾವುದೇ ಆಗಲಿ ಮನುಷ್ಯತ್ವ ಮುಖ್ಯ.

ಅಕಸ್ಮಾತ್ ಅಲ್ಲಿ ನಡೆದ ಅತ್ಯಾಚಾರಗಳು, ಕೊಲೆ, ಗರ್ಭಿಣಿ ಹೆಂಗಸರ ಹೊಟ್ಟೆ ಸೀಳುವಂತದ್ದು, ಸಜೀವ ಸುಡುವಂಥದ್ದು ಈ ಎಲ್ಲಾ ಕೃತ್ಯಗಳು ನನ್ನ ಮನೆಯವರ ಮೇಲೆ ಅಥವಾ ನನ್ನ ಕುಟುಂಬದವರ ಮೇಲೆ ಆಗುತ್ತಿದ್ದರೆ? ಅಂದರೆ ಧರ್ಮದ ಹೆಸರಿನಲ್ಲಿ ಹೀಗೆ ಮತ್ತೊಂದು ಧರ್ಮದವರನ್ನು ಕೊಲ್ಲುವುದು ಸರಿಯೇ? ಹಿಂದೂ ಧರ್ಮದಲ್ಲಿ ಎಲ್ಲಿಯೂ ಮುಸ್ಲಿಮರನ್ನು ಕೊಂದು ಅವರ ಗೋರಿಯ ಮೇಲೆ ಧರ್ಮ ಕಟ್ಟಿರಿ ಅಂಥ ಹೇಳಿಲ್ಲ, ಮತ್ಯಾಕೆ ಹಿಂದೂ ಧರ್ಮ ಹೆಸರಿನಲ್ಲಿ ಇಷ್ಟೆಲ್ಲಾ ಮಾರಣಹೋಮ ನಡೆಯಿತು?

ಅಪರಾಧ ಮಾಡಿದವರಿಗೆ ಶಿಕ್ಷೆ ಕೊಡಲು ನ್ಯಾಯಾಲಯ ಸಾಕ್ಷಿ ಕೇಳುತ್ತದೆ. ಆದರೆ ತೆಹೆಲ್ಕಾ ತಂಡದವರು 'ಆಜ್‌ತಕ್' ಮೂಲಕ ಎಲ್ಲ ಮನೆ-ಮನೆಗಳಿಗೆ ಗುಜರಾತ್ ನರಮೇಧದ ಸಾಕ್ಷಿಯನ್ನು ತೋರಿಸಿಕೊಟ್ಟಿದ್ದಾರೆ. ಕೇಂದ್ರ ಸರ್ಕಾರವು ಕಣ್ಣು ಮುಚ್ಚಿಕೊಂಡಿದೆ. ಅಪರಾಧಿಗಳಿಗೆ ಶಿಕ್ಷೆಯಾಗಬೇಕಾದರೆ ದೇಶದ ಜನರು ಎಚ್ಚೆತ್ತುಕೊಳ್ಳಬೇಕು. ಹೊಟ್ಟೆಪಾಡಿಗಾಗಿ ಚಿಕ್ಕ ಕಳ್ಳತನ ಮಾಡಿದವನನ್ನು ಶಿಕ್ಷೆಗೆ ವಿಧಿಸುತ್ತಾರೆ. ಆದರೆ ಸಾವಿರ ಜನರನ್ನು ಕೊಲೆ ಮಾಡಿದ ನರಹಂತಕರಿಗೆ, ಕೊಲೆಗಡುಕರಿಗೆ, ಅತ್ಯಾಚಾರಿಗಳಿಗೆ, ಗರ್ಭಿಣಿಯ ಹೊಟ್ಟೆಯನ್ನು ಸೀಳಿದವರಿಗೆ, ಮಕ್ಕಳು ಹೆಂಗಸರೆನ್ನದೆ ಸಜೀವ ಸುಟ್ಟವರಿಗೆ ಯಾವ ಶಿಕ್ಷೆಯೂ ಆಗುವುದಿಲ್ಲವೆಂದರೆ ಇಲ್ಲಿ "ನ್ಯಾಯವಿಲ್ಲದ ರಾಜ್ಯ ಕಣ್ಣು ಮುಚ್ಚಿದ ಸರ್ಕಾರ" ಇದೆ ಎಂದರೆ ತಪ್ಪಾಗಲಾರದಲ್ಲವೇ?

-ಕೆ. ಸುಭಾಷ್

ಹೊಗಳಿಕೆ ತೆಗಳಿಕೆ

ಭಾರತ ಮತ್ತು ಅಮೆರಿಕಾ ನಡುವೆ ಏರ್ಪಟ್ಟಿರುವ ಅಣುಶಕ್ತಿ ಒಪ್ಪಂದವು ಮೇಲ್ನೋಟಕ್ಕೆ ನಮಗೆ ಅನುಕೂಲಕರವಾಗಿ ಕಂಡರೂ, ಈ ಒಪ್ಪಂದದ ದೂರಗಾಮಿ ಪರಿಣಾಮಗಳು ನಮಗೆ ಮಾರಕವಾಗಲಿದೆ. ನಮಗಿಂದು ವಿದ್ಯುತ್ತಿನ ಅವಶ್ಯಕತೆ ಅನಿವಾರ್ಯವಾಗಿದ್ದರೂ ಸಹ, ಈ ವಿದ್ಯುತ್ತಿಗಾಗಿ ನಾವು ಅಮೆರಿಕಾ ಅಥವಾ ಇನ್ಯಾವುದೇ ದೇಶದ ಗುಲಾಮರಾಗಬೇಕಾಗಿಲ್ಲ. ಈಗ ಭಾರತ ಮತ್ತು ಅಮೆರಿಕಾ ನಡುವೆ ಆಗಿರುವ ಅಣುಶಕ್ತಿ ಒಪ್ಪಂದ, ನಮ್ಮನ್ನು ಸಾಮ್ರಾಜ್ಯಶಾಹಿ ಅಮೆರಿಕಾದ ಗುಲಾಮರನ್ನಾಗಿಸುವತ್ತ ಮೊದಲ ಹೆಜ್ಜೆಯಾಗಿದೆ.

ಚೆರ್ನೋಬಿಲ್ ದುರಂತ ನಮ್ಮ ಕಣ್ಮುಂದೆಯೇ ಇದೆ. ಅಣುವಿದ್ಯುತ್ ಉತ್ಪಾದನೆ, ಪರಿಸರ ವಿರೋಧಿ ಮತ್ತು ಅತ್ಯಂತ ಅಪಾಯಕಾರಿ ಎಂಬುದನ್ನು ಮನಗಂಡಿರುವ ಅಭಿವೃದ್ಧಿ ಹೊಂದಿರುವ ಶ್ರೀಮಂತ ದೇಶಗಳು, ಈಗ ಅಣುವಿದ್ಯುತ್ ಉತ್ಪಾದನೆಯಿಂದ ಹಿಮ್ಮೆಟ್ಟುತ್ತಿವೆ. ಇಂತಹ ಅಪಾಯಕಾರಿ ಅಣುವಿದ್ಯುತ್‌ಗಾಗಿ ನಮ್ಮ ದೇಶದ ಸಾರ್ವಭೌಮತ್ವವನ್ನೇ ಒತ್ತೆಯಿಡಲು ನಮ್ಮ ರಾಜಕಾರಣಿಗಳು ತುದಿಗಾಲ ಮೇಲೆ ನಿಂತಿರುವುದು ಈ ದೇಶದ ದುರಂತ.

ಇಷ್ಟೆಲ್ಲಾ ಅನರ್ಥಗಳಿಗೆ ಕಾರಣವಾಗಿರುವ ಈ ಅಣುವಿದ್ಯುತ್ತನ್ನು ಕೊಂಡು ಬಳಸುವ ಶಕ್ತಿ ಈ ದೇಶದ ಬಡ ಜನತೆಗೆ ಇದೆಯೇ? ಅಸಂಘಟಿತ ವಲಯದ ಬಗ್ಗೆ ಕೇಂದ್ರ ಸರ್ಕಾರವೇ ರಚಿಸಿದ್ದ ಆಯೋಗವು "ಈ ದೇಶದಲ್ಲಿನ ಶೇ. 87 ರಷ್ಟು ಜನರ ಒಂದು ದಿನದ ತಲಾ ಗಳಿಕೆ ಕೇವಲ ಇಪ್ಪತ್ತು ರೂಪಾಯಿಗಳು" ಎಂದು ತಿಳಿಸಿದೆ. ಇಂತಹ ಬಡವರು ಈ ಅಣುವಿದ್ಯುತ್ತನ್ನು ಕೊಂಡು ಬಳಸಲು ಶಕ್ತರೇ? ಹಾಗಾದರೆ ಈ ಅಣುವಿದ್ಯುತ್ ಯಾರಿಗಾಗಿ? ಈ ದೇಶದ ಬಡ ಜನತೆಗಂತೂ ಖಂಡಿತಾ ಅಲ್ಲ. ಏಕೆಂದರೆ ಈಗ ಕಡುಬಡವರಿಗೆ ನೀಡಿರುವ 'ಭಾಗ್ಯಜ್ಯೋತಿ' ಯೋಜನೆಯನ್ನೇ ರದ್ದುಗೊಳಿಸುವತ್ತ ವಿದ್ಯುತ್ ಕಂಪನಿಗಳು ಕ್ರಮ ಕೈಗೊಳ್ಳುತ್ತಿವೆ. ಈ ಅಣುವಿದ್ಯುತ್ತಿನಿಂದ ಎಂ.ಎನ್.ಸಿ.ಗಳಿಗೆ ಮತ್ತು ಕೋಟ್ಯಾಧಿಪತಿ ಉದ್ದಿಮೆದಾರರಿಗೆ ಮಾತ್ರ ಲಾಭ.

ಇಂತಹ ವಿನಾಶಕಾರಿ ಒಪ್ಪಂದಕ್ಕಿಂತ, ಕೇಂದ್ರ ಸರ್ಕಾರ ಇರಾನ್-ಪಾಕಿಸ್ತಾನ-ಭಾರತ ನಡುವಿನ ಅನಿಲ ಕೊಳವೆ ಯೋಜನೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕು. ಈ ಅನಿಲ ಕೊಳವೆ ಯೋಜನೆಯಿಂದ ನಮ್ಮ ಇಂಧನ ಸಮಸ್ಯೆ ಪರಿಹಾರವಾಗುವುದರ ಜೊತೆಗೆ ನೆರೆಹೊರೆಯ ದೇಶಗಳಾದ ಇರಾನ್ ಮತ್ತು ಪಾಕಿಸ್ತಾನಗಳೊಡನೆ ಸೌಹಾರ್ದತೆಯನ್ನೂ ಸಾಧಿಸಬಹುದು. ಇರಾನ್, ಪಾಕಿಸ್ತಾನ ಮತ್ತು ಭಾರತ ದೇಶಗಳು ಸೌಹಾರ್ದತೆಯಿಂದ ಇರುವುದು ಅಮೆರಿಕಾಕ್ಕೆ ಬೇಕಾಗಿಲ್ಲವಾದ್ದರಿಂದ, ಈ ಅನಿಲ ಕೊಳವೆ ಯೋಜನೆಗೆ ತಡೆಯೊಡ್ಡುವ ಉದ್ದೇಶದಿಂದ ಈಗ ಅಮೆರಿಕಾ ಭಾರತದ ಬಗ್ಗೆ ಉದಾರವಾಗಿ ವರ್ತಿಸುತ್ತಿದೆ. ನಮ್ಮ ರಾಜಕಾರಣಿಗಳ ಜಾಣ ಕುರುಡಿಗೆ ಈ ಸತ್ಯ ಗೋಚರಿಸುವುದಿಲ್ಲ. ಅಣುವಿದ್ಯುತ್ ಎಂಬ ಜನವಿರೋಧಿ ಒಪ್ಪಂದವನ್ನು ಈ ದೇಶದ ಪ್ರಜ್ಞಾವಂತರೆಲ್ಲರೂ ಒಕ್ಕೊರಲಿನಿಂದ ವಿರೋಧಿಸಬೇಕು.


-ಎಸ್.ಎಸ್. ವೆಂಕಟೇಶ್,
ಅಧ್ಯಕ್ಷ,
ಜನ ಜಾಗೃತಿ ವೇದಿಕೆ

'ಕಂಡಹಾಗೆ'ಯಲ್ಲಿ ವಂಚಕರಿಗೆ ಕೆಲವು ಪ್ರಶ್ನೆಗಳ ಕುರಿತು: ಅಧಿಕಾರದಾಹದಿಂದ ಕುರುಡರಾದ ಮತ್ತು ಕಿವುಡರಾದವರಿಗೆ ಅವರ ವ್ಯವಹಾರಗಳು ಕಾಣುತ್ತದೆಯೇ? ಮತ್ತು ಪ್ರಶ್ನೆಗಳು ಅವರ ಕಿವಿಗಳಿಗೆ ಬೀಳುತ್ತವೆಯೇ? ರಾಜಕೀಯದ ಉದ್ದೇಶ, ಕಾಳಜಿ, ವ್ಯಾಪ್ತಿ, ದೂರದೃಷ್ಟಿ ಮತ್ತು ಆದರ್ಶಗಳನ್ನು ತಮಗೆ ಬೇಕಾದ ಹಾಗೇ ಚಿತ್ರಿಸುವ ಅವಿವೇಕಿಗಳಿಗೆ ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುವ ನೈತಿಕತೆ ಎಲ್ಲಿಂದ ಬರುತ್ತದೆ? ಗೌಡರಾಗಲಿ, ಕುಮಾರಸ್ವಾಮಿಯಾಗಲಿ ನಿಮ್ಮ ಪ್ರಶ್ನೆಗಳಿಗೆ ಉತ್ತರಿಸಲಾರರು. ಏಕೆಂದರೆ ಅವರ ದೃಷ್ಟಿಯಲ್ಲಿ ಇಂತಹ ಗಹನ ಪ್ರಶ್ನೆಗಳಿಗೆ ಉತ್ತರಿಸುವುದು ಆತ್ಮಸಾಕ್ಷಿಗೆ ದ್ರೋಹ ಎಸಗಿದಂತೆ!

ಆ ಗೇಟಿನ ಮುಂದೆ ನಿಂತಿದ್ದ ಎರಡೂ ಪಕ್ಷಗಳ ನಾಯಕರ ಅವಕಾಶವಾದಿತನಕ್ಕೆ ಯಾವ ಪದವೂ ಸರಿಯಾಗಿ ಹೊಂದಲಾರದು. ಏಕೆಂದರೆ ಎಲ್ಲವನ್ನೂ ಕಳೆದುಕೊಂಡವರಿಗೆ ಪದಗಳನ್ನು ಹುಡುಕಹೊರಟರೆ ನಮ್ಮ ವಿವೇಕವನ್ನು ಕಳೆದುಕೊಳ್ಳಬಹುದು. ಏಕೋ ತಲೆತಿರುಗುತ್ತಿದೆ!

ಅಸ್ಪಷ್ಟವಾದ ಭಾವ ಹೊಮ್ಮಿದೆ 'ಬಣ್ಣ'ದೊಂದಿಗೆ.
ಬಯಲಾದವೋ ಬಣ್ಣ ಬಯಲಾದವೋ
ದೇಶಭಕ್ತರ, ಮಣ್ಣಿನ ಮಕ್ಕಳ ಬಯಲಾಟದಲ್ಲಿ."
ಅಂದು ಹಸ್ತಾಂತರವಾಗಲಿಲ್ಲ ಎಂದು
ಹೊರಟರು ವಚನ ಪಾವಿತ್ರ್ಯತೆಯ ರಕ್ಷಣೆಗೆ
ಕೈಗೊಂಡರು ಧರ್ಮಯಾತ್ರೆಯನ್ನು
ಪುಣ್ಯಕೋಟಿ ಜನಿಸಿದ ನಾಡರಕ್ಷಣೆಗೆ!
ಪುನೀತರಾದರು ಮಠಗಳ ಪದತಲದಲ್ಲಿ
ಬೆಚ್ಚಗಾದರು ಆಕ್ರೋಶಭರಿತ ಭಾಷಣಗಳಲ್ಲಿ
ಬಯಲಾದವೋ ಬಣ್ಣ ಬಯಲಾದವೋ
ದೇಶಭಕ್ತರ, ಮಣ್ಣಿನ ಮಕ್ಕಳ ಬಯಲಾಟದಲ್ಲಿ

-ವಿದ್ಯಾಧರ ರೈ. ಎಂ.ಆರ್.,
ಮಡಿಕೇರಿ



ಅಂದು ಅಂಬರೀಷ್‌ಗೆ 'ರೆಬಲ್‌ಸ್ಟಾರ್' ಲೇಬಲ್ ದೊರಕಿಸಿಕೊಟ್ಟ 'ಅಂತ' ಚಿತ್ರದ ಕನ್ವರ್‌ಲಾಲ್ ಪಾತ್ರಕ್ಕೆ ಪುನರ್ ಜನ್ಮ ನೀಡಿ ಮತ್ತೆ ಕರೆತರುತ್ತಿದ್ದಾರೆ ಸಿಂಗ್‌ಬಾಬು. ಅಂದು ಪ್ರೇಕ್ಷಕರನ್ನು ಕಮಾಲ್ ಮಾಡಿದ್ದ ಕನ್ವರ್ ಇಂದು ಕೂಡಾ ಕನ್ನಡಿಗರ ಮನಸ್ಸನ್ನು ಕದಿಯುತ್ತಾನಾ?



ಅಂದಿನ ಕನ್ವರ್

...ಆಯೇಗಾ ಕನ್ವರ್

ಇಪ್ಪತ್ತೈದು ವರ್ಷಗಳ ನಂತರ ಅಂಬರೀಷ್ ಮತ್ತೊಮ್ಮೆ ಮೂರನೇ ಬಾರಿಗೆ ಕನ್ವರ್‌ಲಾಲ್ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಅಂದು 'ಅಂತ' ಚಿತ್ರದಲ್ಲಿನ ಈ ಪಾತ್ರದಿಂದಲೇ ಅಂಬರೀಷ್‌ಗೆ 'ರೆಬಲ್‌ಸ್ಟಾರ್' ಎಂಬ ಲೇಬಲ್ ಸಿಕ್ಕಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಆದರೆ ಈಗ ಚಿತ್ರರಂಗದಿಂದ ಬಹುಪಾಲು ಮಾಯವಾಗಿರುವ ಅಂಬರೀಷ್‌ಗೆ ಅದೇ ಪಾತ್ರ ಪುನರ್‌ಜನ್ಮ ನೀಡುತ್ತದೆಯೇ ಎಂಬ ಪ್ರಶ್ನೆ ಎದುರಾಗಿದೆ. "ನೀಡುತ್ತದೆ" ಎಂಬ ಭ್ರಮೆಯಲ್ಲಿದ್ದಾರೆ ನಿರ್ದೇಶಕ ರಾಜೇಂದ್ರಸಿಂಗ್ ಬಾಬು. ಅಂದಹಾಗೆ ಅಂದು ಕನ್ವರ್‌ಲಾಲ್ ಪಾತ್ರವನ್ನು ಅಂಬಿಗಾಗಿ ಸೃಷ್ಟಿಸಿದ್ದು ಇದೇ ...ಬು. ಇಂದು ಕಾಲು ಶತಮಾನದ ನಂತರ ಇದೇ ಬಾಬು ಮತ್ತೆ ಅದೇ ಅಂಬಿಯನ್ನು ಅದೇ ಪಾತ್ರದಲ್ಲಿ ತೊಡಗಿಸಿಕೊಂಡಿದ್ದಾರೆ.

ಅಂದು ಆ ಪಾತ್ರ ಜನಮನ ಗೆಲ್ಲಲು ಅನೇಕ ಕಾರಣಗಳಿದ್ದವು. ಭ್ರಷ್ಟ ರಾಜಕಾರಣಿಗಳನ್ನು ಧ್ವಂಸ ಮಾಡುವ ಆ ಪಾತ್ರ ...ಂದು ರೀತಿಯ ಹೊಸ ಕಲ್ಪನೆಯಾಗಿತ್ತು. ಅಷ್ಟೇ ಅಲ್ಲ, ಅಂದಿನ ಆಂಗ್ರಿ ಯಂಗ್‌ಮ್ಯಾನ್ ಇಮೇಜಿನ ನಟ ಕೂಡ ಕನ್ನಡ ...ತ್ರರಂಗಕ್ಕೆ ಬೇಕಿತ್ತು. ಇದೆಲ್ಲಕ್ಕೆ ಅಂಬರೀಷ್‌ರವರ ಅಂದಿನ ವಯಸ್ಸು ಮತ್ತು ನಟನೆ ತಕ್ಕದ್ದಾಗಿತ್ತು.

ಆದರೆ ಈಗ ಕಾಲ ಬದಲಾಗಿದೆ. ಇವತ್ತು ಸ್ವತಃ ಅಂಬಿ ...ಜಕಾರಣಿಯಾಗಿದ್ದಾರಲ್ಲದೆ, ದೆಹಲಿಯಲ್ಲಿ ಆಟಕ್ಕೂ ಇಲ್ಲ, ಲೆಕ್ಕಕ್ಕೂ ಇಲ್ಲ ...ಬಂತಹ ಕುಖ್ಯಾತಿಯನ್ನು ಬೆಳೆಸಿಕೊಂಡಿದ್ದಾರೆ. ಮಂಡ್ಯದ ಈ ಗಂಡು ...ಜಧಾನಿಯಲ್ಲಿ ಮತ್ತು ರಾಜಕಾರಣದಲ್ಲಿ ಟುಸ್ ಪಟಾಕಿ ಎಂದರೆ ...ಪ್ಪಾಗಲಾರದು. ಚಿತ್ರರಂಗದಲ್ಲೂ ಅಂಬಿಗೆ ಇವತ್ತು ಅಂತಹ ಇಮೇಜ್ ...ಲ್ಲ, ಅವರು ಅಧಿಕೃತವಾಗಿ ಘೋಷಿಸಿರದಿದ್ದರೂ ಒಂದು ರೀತಿಯಲ್ಲಿ ...ವರು ಇವತ್ತು ನಿವೃತ್ತಿ ಹೊಂದಿರುವ ನಟರಂತಾಗಿದ್ದಾರೆ.

ಇದೇ ಸಮಯಕ್ಕೆ ಚಿತ್ರರಂಗದಲ್ಲಿನ ಪರಿಸ್ಥಿತಿಯೂ ಬದಲಾಗಿದೆ. ಇವತ್ತು ...ಂದೆಡೆ ರೌಡಿಯಿಸಂ ಮತ್ತು ಇನ್ನೊಂದೆಡೆ ಲವ್ ಸ್ಟೋರಿಗಳೇ ...ಮುಖವಾಗಿವೆ. ಹಾಗೆಯೇ ಕರ್ನಾಟಕದ ಸಾಂಸ್ಕೃತಿಕ ಮತ್ತು ಸಾಮಾಜಿಕ ...ಕರಣವೂ ವಿಭಿನ್ನ ಆಯಾಮವನ್ನು ಪಡೆದಿದೆ. ಇವತ್ತು ಆಂಗ್ರಿ ...ಂಗ್ ಮ್ಯಾನ್‌ಗಿರಲಿ, ಆಂಗ್ರಿ ಓಲ್ಡ್ ಮ್ಯಾನ್‌ಗೂ ಇಲ್ಲಿ ಬೆಲೆ ...ಲ್ಲದಂತಾಗಿದೆ.


ಎಲ್ಲ ವಲಯಗಳು ಹೀಗೆ ಬದಲಾಗಿರುವ ಪರಿಸ್ಥಿತಿಯಲ್ಲಿ ...ಜೇಂದ್ರಸಿಂಗ್ ಬಾಬು ಅಂದಕಾಲತ್ತಿಲ್ ಸೃಷ್ಟಿಸಿದ್ದ ಕನ್ವರ್‌ಲಾಲ್ ...ತ್ರವನ್ನು ಮತ್ತೆ ಅಂಬಿ ಮೂಲಕ ಜನರಿಗೆ ಬಡಿಸಲು ಹೊರಟಿದ್ದಾರೆ.

ಇಲ್ಲಿ ಒಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ...ಮಾರು ಹತ್ತು ವರ್ಷಗಳ ಹಿಂದೆ ಉಪೇಂದ್ರ ತನ್ನ ...ರ್ದೇಶನದ 'ಆಪರೇಷನ್ ಅಂತ' ಚಿತ್ರದಲ್ಲಿ ...ಬರೀಷ್‌ರನ್ನು ಇದೇ ಕನ್ವರ್‌ಲಾಲ್ ಪಾತ್ರದಲ್ಲಿ ...ೋರಿಸಿದ್ದರು. ಆ ಚಿತ್ರ ತೆರೆಕಂಡಾಗ ಕನ್ವರ್‌ಲಾಲ್ ಬಗ್ಗೆ ...ಜ ಇನ್ನಿಲ್ಲದಂತೆ ನಿರುತ್ಸಾಹ ತೋರಿಸಿದ್ದರು. ಅದರ ...ರ್ಥ ಬಾಬು ಸೃಷ್ಟಿಸಿದ ಪಾತ್ರ ಹತ್ತು ವರ್ಷಗಳ ...ಂದೆಯೇ ಚಲಾವಣೆಯಲ್ಲಿಲ್ಲದ ನಾಣ್ಯವಾಗಿತ್ತು.

ಆದರೆ ಈಗ ಅದೇ ನಾಣ್ಯವನ್ನು ಚಲಾವಣೆಗೆ ...ರಲು ಬಾಬು ಮತ್ತೆ ಹೊರಟಿದ್ದಾರೆ. ಬಾಬುರಂತಹ ...ಬ್ಬ ಕ್ರಿಯಾಶೀಲ ನಿರ್ದೇಶಕ ಹೊಸ ಹೊಸ ...ತ್ರಗಳನ್ನು ಸೃಷ್ಟಿಸುವ ಬದಲು ಕಾಲು ಶತಮಾನದ ...ಂದೆ ತಾನೇ ಸೃಷ್ಟಿಸಿದ್ದ ಪಾತ್ರಕ್ಕೆ ಮತ್ತೆ ಜೋತು ...ಬಿದ್ದಿರುವುದು ಅವರ ತಲೆ ಖಾಲಿಯಾಗಿರುವುದಕ್ಕೆ ...ಕ್ಷಿ ಎಂದೇ ಅರ್ಥಮಾಡಿಕೊಳ್ಳಬಹುದು.

ಇಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾದ ...ಮತ್ತೊಂದು ಅಂಶ ಯಾವುದೆಂದರೆ ಕೆಲವು ...ತ್ರಗಳು ಮತ್ತು ಕತೆಗಳು ಕೆಲವು ...ದರ್ಭಗಳಿಗೆ ಮಾತ್ರ ಸೂಕ್ತವಾಗಿರುತ್ತವೆ. ...ವುಗಳನ್ನು ಎಲ್ಲಾ ಕಾಲಕ್ಕೂ ಪುನರ್‌ಸೃಷ್ಟಿ ಮಾಡಲು ...ದ್ಯವಿಲ್ಲ, ಮಾಡಲು ಪ್ರಯತ್ನಿಸಲೂ ಬಾರದು. ಇದಕ್ಕೆ ...ಮಗೋಪಾಲ್ ವರ್ಮ ಎಂಬ ನಿರ್ದೇಶಕ ಇತ್ತೀಚೆಗೆ ...ಲೆ' ಎಂಬ ಚಿತ್ರವನ್ನು ಮತ್ತೆ ಮಾಡಲು ಹೋಗಿ ...ಗ್ಗರಿಸಿರುವುದೇ ಒಂದು ಉತ್ತಮ ಉದಾಹರಣೆ.

ಹೀಗಿರುವಾಗ ಅಂಬಿಯ ಹೊಸ ಕನ್ವರ್‌ಲಾಲ್ ಕತೆ ...ನಾಗುತ್ತದೆ ಎಂದು ಈಗಲೇ ಭವಿಷ್ಯ ...ನುಡಿಯಬಹುದೇನೋ ಎನಿಸುತ್ತದೆ. ಅದು ಅಷ್ಟು ಹಿತಕರವಲ್ಲದ ...ಭವಿಷ್ಯ...



ಕ್ರಿಕೆಟ್-ಚಿತ್ರರಂಗ ಡಿಂಗ್‌ಡಾಂಗ್ ಲವ್!

ಕ್ರಿಕೆಟ್‌ಗೂ, ಹಿಂದಿ ಸಿನಿಮಾ ರಂಗಕ್ಕೂ ಅಂದಕಾಲತ್ತಿಲ್ ಸಂಬಂಧ. ಈ ಎರಡೂ ಕ್ಷೇತ್ರಗಳಲ್ಲಿ ಜನಪ್ರಿಯ ಆಟಗಾರರು ಮತ್ತು ನಟಿಯರು ಇರುವುದರಿಂದಲೋ ಏನೋ ಅಲ್ಲಿ ಸ್ನೇಹ, ಸಂಬಂಧ, ಮದುವೆ, ವಿರಸ.... ಎಲ್ಲ ನಡೆಯುತ್ತವೆ.

ಇದಕ್ಕೆ ಲೇಟೆಸ್ಟ್ ಉದಾಹರಣೆ ಎಂ.ಎಸ್. ಧೋನಿ ಎಂಬ ಕ್ರಿಕೆಟಿಗ ಮತ್ತು ದೀಪಿಕಾ ಪಡುಕೋಣೆ ಎಂಬ ಚಲನಚಿತ್ರ ನಟಿ. ಧೋನಿಯನ್ನು ಆಕೆ ತನ್ನ ಚೊಚ್ಚಲ ಹಿಂದಿ ಸಿನಿಮಾ 'ಓಂ ಶಾಂತಿ ಓಂ' ಪ್ರೀಮಿಯರ್‌ಗೆ ಆಹ್ವಾನಿಸಿದ್ದರಿಂದ, ಆತ ದೀಪಿಕಾಳನ್ನು ಮುಂಬೈ ನಗರದಲ್ಲಿ ಇತ್ತೀಚೆಗೆ ನಡೆದ ಭಾರತ V/s ಆಸ್ಟ್ರೇಲಿಯಾ ಕ್ರಿಕೆಟ್ ಆಟವನ್ನು ನೋಡಲು ಕರೆದಿದ್ದನಂತೆ. ಇವರಿಬ್ಬರ ನಡುವೆ ಪ್ರೇಮಾಂಕುರವಾಗಿದೆ ಎಂಬ ಮಾತು ಎಷ್ಟು ಸತ್ಯವೋ, ಅವರಿಬ್ಬರೆ ಬಲ್ಲರು. ಆ... ಇವರ ಹಾದಿಯಲ್ಲೇ ನಡೆದ ಇತರ ಜೋಡಿಗಳ ಹಲವು ಕತೆಗಳು ಇಲ್ಲಿವೆ.






ಇತ್ತೀಚೆಗೆ ಯುವರಾಜ್ ಸಿಂಗ್ ಮತ್ತು ಕಿಮ್ ಶರ್ಮಾ ಎಂಬ ತಾರೆಯ ನಡುವೆ ಸ್ನೇಹ ಬೆಳೆದಿತ್ತು. ಆದರೆ ಆತನ ತಂದೆ-ತಾಯಿಗೆ ಚಿತ್ರರಂಗದ ಹಿನ್ನೆಲೆ ಹೊಂದಿರುವ ಹುಡುಗಿ ತಮ್ಮ ಸೊಸೆಯಾಗುವುದು ಇಷ್ಟವಾಗಲಿಲ್ಲವಂತೆ. ಆ ಕಾರಣಕ್ಕೆ ಅವರಿಬ್ಬರು ಈಗ ಬೇರೆ ಆಗಿದ್ದಾರೆಂಬ ಸುದ್ದಿ ಇದೆ.



ಅದೇ ತರಹ ಜಹೀರ್ ಖಾನ್ ಮತ್ತು ಇಶಾ ಶೆರ್ವಾನಿ ನಡುವೆಯೂ ಪ್ರೇಮಾಂಕುರವಾಗಿತ್ತು. ಆದರೆ ಅತ್ತ ಆಕೆ ನಟಿಸಿದ ಕೆಲ ಸಿನಿಮಾಗಳು ತೋಪೆದ್ದರೆ, ಇತ್ತ ಕ್ರಿಕೆಟ್ ಮೈದಾನದಲ್ಲಿ ಜಹೀರ್‌ನ ವರ್ಚಸ್ಸು ಏರುತ್ತಾ ಹೋಯಿತು. ಈಗ ಇಶಾ ಶೆರ್ವಾನಿ ಎಲ್ಲಿದ್ದಾಳೆಂದು ಹಿಂದಿ ಚಿತ್ರರಂಗಕ್ಕಾಗಲಿ, ಜಹೀರ್ ಖಾನ್‌ಗಾಗಲಿ ಗೊತ್ತಿದ್ದಂತಿಲ್ಲ!



ಸೌರವ್ ಗಂಗೂಲಿ ಮತ್ತು ನಗ್ಮಾ ಎಂಬ ನಟಿಯ ಪ್ರೇಮ ಪ್ರಕರಣವು ಆತನ ಆಟ ಮತ್ತು ಮನೆ ಎರಡನ್ನೂ ಗೊಂದಲಕ್ಕೆ ದೂಡಿತ್ತು. ಒಂದೆಡೆ ಸೌರವ್‌ನ ಪತ್ನಿ ಮುನಿಸಿಕೊಂಡು ತನ್ನ ತವರಿಗೆ ಹಿಂದಿರುಗಿದ್ದರೆ, ಇನ್ನೊಂದೆಡೆ ಆತನ ಆಟದ ಶ್ರೇಷ್ಠತೆ ಕುಗ್ಗುತ್ತಾ ಹೋಯಿತು. ಆಗ ನಗ್ಮಾ ಟಿಪಿಕಲ್ ತಮಿಳು ಸಿನಿಮಾ ಶೈಲಿಯಲ್ಲಿ ತನ್ನ ಪ್ರೇಮವನ್ನು 'ತ್ಯಾಗ' ಮಾಡಿದ್ದಳು.

ಕ್ರಿಕೆಟ್ ಮತ್ತು ಬಾಲಿವುಡ್ ನಡುವಿನ ಪ್ರೇಮಗಾಥೆಗಳಲ್ಲಿ ಅಜರುದ್ದೀನ್ ಮತ್ತು ಸಂಗೀತಾ ಬಿಜಲಾನಿಯದ್ದು ಪ್ರಮುಖ. ಯಾವುದೋ ಜಾಹೀರಾತಿನ ಶೂಟಿಂಗ್ ಸಂದರ್ಭದಲ್ಲಿ ಭೇಟಿ ಆದ ಇವರಿಬ್ಬರು ಪರಸ್ಪರ ಪ್ರೇಮಿಸಿದರು. ಕೊನೆಗೆ ಅಜರ್ ತನ್ನ ಹೆಂಡತಿಗೆ ಡೈವೋರ್ಸ್ ನೀಡಿ ಸಂಗೀತಾಳನ್ನು ಮದುವೆಯಾದ.

ಆದರೆ ರವಿಶಾಸ್ತ್ರಿ ಮತ್ತು ಅಮ್ರಿತಾ ಸಿಂಗ್ ಸಂಬಂಧ ಇಂತಹ ಸುಖಾಂತ್ಯವನ್ನು ಕಾಣಲಿಲ್ಲ. ಅವರಿಬ್ಬರ ನಡುವೆ ನಿಶ್ಚಿತಾರ್ಥವಾಗಿದೆ ಎಂಬ ಸುದ್ದಿ ಆಗ ಕೇಳಿಬಂದಿದ್ದರೂ ಕೊನೆಗೆ ಅವರು ತಮ್ಮ ತಮ್ಮ ದಾರಿ ಹಿಡಿದಿದ್ದರು.

ಈ ಕ್ರಿಕೆಟ್ ಮತ್ತು ಹಿಂದಿ ಸಿನಿಮಾಗಳ ನಂಟಿಗೆ ದೇಶದ ಗಡಿಗಳನ್ನೂ ಮೀರುವ ಶಕ್ತಿ ಇದೆ ಎಂದು ತೋರಿಸಿದ್ದು ರೀನಾ ರಾಯ್ ಮತ್ತು ಪಾಕಿಸ್ತಾನದ ಕ್ರಿಕೆಟಿಗ ಮೋಹಿಸಿನ್ ಖಾನ್ ಸಂಬಂಧ. ಆಗ ಆಕೆ ಬಾಲಿವುಡ್‌ನಲ್ಲಿ ಅತ್ಯಂತ ಬೇಡಿಕೆಯಲ್ಲಿದ್ದ ನಟಿ. ಆತ ಪಾಕಿಸ್ತಾನ ತಂಡದ ಅತ್ಯುತ್ತಮ ಆಟಗಾರ. ಅವರ ಪ್ರೇಮ ಎಷ್ಟು ತೀವ್ರವಾಗಿತ್ತೆಂದರೆ ಅವರು ಮದುವೆಯಾದ ನಂತರ ಆತ ಕ್ರಿಕೆಟ್‌ಗೆ ಗುಡ್‌ಬೈ ಹೇಳಿ ನಟನಾಗಲು ಯತ್ನಿಸಿದ. ಆದರೆ ಆತನ ಮೂರೂ ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ಸೋತ ನಂತರ ಅವರಿಬ್ಬರು ಪಾಕಿಸ್ತಾನಕ್ಕೆ ವಲಸೆ ಹೋದರು. ಆಮೇಲೇನಾಯಿತೋ ಏನೋ, ರೀನಾ ತನ್ನ ಗಂಡನಿಗೆ ಸೋಡಾ ಚೀಟಿ ನೀಡಿ ಭಾರತಕ್ಕೆ ವಾಪಸಾದಳು.



ಹೀಗೆ ದೇಶ ಮಾತ್ರವಲ್ಲ, ವರ್ಣದ ಗಡಿಯನ್ನೂ ದಾಟಿದ ಮತ್ತೊಂದು ಪ್ರೇಮ ಪ್ರಕರಣ ವೆಸ್ಟ್ ಇಂಡೀಸ್‌ನ ಸುಂದರ ಆಟಗಾರ ವಿವಿಯನ್ ರಿಚರ್ಡ್ಸ್ ಮತ್ತು ನೀನಾ ಗುಪ್ತಾಳದ್ದು. ಈ ಸಂಬಂಧದ ಫಲ ಶೃತಿಯೇ ಮಸಬಾ ಎಂಬ ಪ್ರೇಮದ ಕೂಸು. ರಿಚರ್ಡ್ಸ್‌ಗೆ ಆಗಲೇ ಮದುವೆಯಾಗಿತ್ತಾದ್ದರಿಂದ ಇವರು ಎಂದೂ ಮದುವೆ ಆಗಲಿಲ್ಲ, ಆದರೆ ಇವತ್ತಿಗೂ ಸ್ನೇಹಿತರಂತಿದ್ದಾರೆ.

ಇವೆಲ್ಲಕ್ಕಿಂತ ಗಟ್ಟಿಯಾಗಿ ಉಳಿದಿರುವುದು ಪಟೌಡಿ ಮತ್ತು ಶರ್ಮಿಳಾ ಠಾಗೂರ್‌ರ ದಾಂಪತ್ಯ ಜೀವನ. ಇವತ್ತು ಅವರು ಅಜ್ಜ-ಅಜ್ಜಿಯಾಗಿದ್ದರೂ, ಹಲವಾರು ಏರುಪೇರುಗಳನ್ನು ಕಂಡಿದ್ದರೂ ಇಂದಿಗೂ ಆದರ್ಶ ದಂಪತಿಗಳಂತಿದ್ದಾರೆ.

At least, ಕ್ರಿಕೆಟ್ ಮತ್ತು ಚಿತ್ರರಂಗ ನಡುವಿನ ಪ್ರೇಮ ಸಲ್ಲಾಪಗಳಲ್ಲಿ ಒಂದಾದರೂ ದೀರ್ಘ ಕಾಲ ಉಳಿದಿದೆ.

ಅಲ್ಲಿಗೆ 'ಶುಭಂ' ಹೇಳೋಣವೇ?

RANJANE BODHANE PRACHODANE LANKESH, Kannada Weekly Price Rs. 10/- 21-11-2007 RNI No. KARKAN2005/14648 Regd.No.KA/RNP/BGS/2036/2008-1

ಡಿಫರೆಂಟ್ ರಮೇಶ್



ತಮ್ಮ ಮೂರನೇ ನಿರ್ದೇಶನದ ಚಿತ್ರಕ್ಕೆ ರಮೇಶ್ ಹಾಸ್ಯದ ಬದಲಾಗಿ ಸಸ್ಪೆನ್ಸ್ ಕಥಾವಸ್ತುವನ್ನು ಆಯ್ಕೆ ಮಾಡಿಕೊಂಡಿರುವುದು ಹಳೇ ವಿಷಯ. ಹೊಸ ವಿಷಯ ಯಾವುದೆಂದರೆ ಈ ಚಿತ್ರದಲ್ಲಿ ಅವರು ಹೊಸ ಮುಖಗಳನ್ನು ಪರಿಚಯಿಸುತ್ತಿರುವುದು.

ಉದಾಹರಣೆಗೆ ನಿರ್ದೇಶಕ ದಿನೇಶ್ ಬಾಬು ಇದೇ ಮೊದಲ ಬಾರಿಗೆ ಈ ಚಿತ್ರಕ್ಕಾಗಿ ತಮ್ಮ ಮುಖಕ್ಕೆ ಬಣ್ಣ ಹಚ್ಚಿದ್ದಾರೆ. ಹಾಗೆಯೇ ನಿರ್ದೇಶಕ ಸೀತಾರಾಂ ಕಾರಂತ್ ಕೂಡಾ ಇದರಲ್ಲಿ ಮೊದಲ ಬಾರಿಗೆ ನಟಿಸಿದ್ದಾರೆ. ಲಂಡನ್‌ನಲ್ಲಿ ರೇಡಿಯಾಲಜಿಸ್ಟ್ ಆಗಿರುವ ಡಾ. ಮಹೇಶ್ ಕುಮಾರ್ ಲೋಂಗಾ ವಿಲನ್ ಆಗಿ ನಟಿಸುವ ಮುಖಾಂತರ ಆಪರೇಷನ್ ಥೀಯೇಟರ್‌ನಿಂದ ಸಿನಿಮಾ ಥಿಯೇಟರ್‌ಗೆ ಕಾಲಿರಿಸಿದ್ದಾರೆ. ರಿಕಿಕೇಜ್ ಎಂಬ ಅನಾಮಿಕ ಸಂಗೀತ ನಿರ್ದೇಶಕರನ್ನು ಈ ಚಿತ್ರದ ಮುಖಾಂತರ ರಮೇಶ್ ಗಾಂಧಿನಗರಕ್ಕೆ ಪರಿಚಯಿಸಿದ್ದಾರೆ.

ತ್ಯಾಗರಾಜನ ಪಾತ್ರಗಳಲ್ಲೇ ಕಾಣಿಸಿಕೊಳ್ಳುತ್ತಿದ್ದ ರಮೇಶ್ ನಿರ್ದೇಶನದ ವಿಷಯದಲ್ಲಿ ಡಿಫರೆಂಟ್ ಆಗಿರುವುದು ಸಂತೋಷ.

ಗುರುಕಿರಣ್‌ರ ಹೊಸ ಹಾಬಿಗಳು



ಸಂಗೀತ ನಿರ್ದೇಶಕ ಮನೋಮೂರ್ತಿಯವರ ಬೇಡಿಕೆ ಹೆಚ್ಚಾದಂತೆ ಗುರುಕಿರಣ್ ಬೇಡಿಕೆ ಕಡಿಮೆಯಾಗಿರುವುದಂತೂ ಸತ್ಯ. ಆದರೆ ಗುರು ಸುಮ್ಮನೇ ಕೂತಿಲ್ಲ. ಈಗ ಕಸ್ತೂರಿ ಚಾನಲ್‌ನಲ್ಲಿ ಗಾಯಕ-ಗಾಯಕಿಯರ ಪ್ರತಿಭಾ ಶೋಧ ಕಾರ್ಯಕ್ರಮದಲ್ಲಿ ಬ್ಯುಸಿಯಾಗಿರುವ ಗುರು ಎರಡು ತಿಂಗಳಿಗೊಮ್ಮೆ ಅರಬ್ ದೇಶಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ಅಷ್ಟೇ ಅಲ್ಲ, ಇಲ್ಲಿದ್ದಾಗ ಕ್ಯಾಸೆಟ್ ಬಿಡುಗಡೆ ಸಮಾರಂಭಗಳಲ್ಲಿ ತನ್ನ ತಂಡವನ್ನು ಕಟ್ಟಿಕೊಂಡು ರಸಮಂಜರಿ ಕಾರ್ಯಕ್ರಮ ನೀಡುವುದೂ ಅವರ ಇತ್ತೀಚಿನ ಇನ್ನೊಂದು ಹಾಬಿಯಾಗಿದೆ.

ಮನೋಮೂರ್ತಿ ರಾಗ ಕಲ್ಯಾಣ್ ಲಹರಿ



"ಇವತ್ತು ಗಾಂಧಿನಗರದ ಎಲ್ಲರೂ ಮನೋಮೂರ್ತಿಯ ರಾಗ ಹಾಡುತ್ತಿದ್ದರೂ ಕಲ್ಯಾಣ್ ಎಂಬ ಮತ್ತೋರ್ವ ಸಂಗೀತ ನಿರ್ದೇಶಕ ಸೈಲೆಂಟಾಗಿ ತಮ್ಮದೇ ಆದ ಲಹರಿಯನ್ನು ತೇಲಿಬಿಡುತ್ತಿದ್ದಾರೆ.

ಕವಿತಾ ಲಂಕೇಶ್ ನಿರ್ದೇಶನದ 'ತನನಂ ತನನಂ' ಚಿತ್ರದ ನಂತರ ಕಲ್ಯಾಣ್‌ಗೆ ಗೀತರಚನೆ ಸಾಹಿತ್ಯಕ್ಕಿಂತ ಸಂಗೀತ ನಿರ್ದೇಶನಕ್ಕೆ ಬೇಡಿಕೆ ಬಂದುಬಿಟ್ಟಿದೆ. ಸದ್ಯಕ್ಕೆ 'ಗಂಗಾ ಕಾವೇರಿ', 'ಮಂದಾಕಿನಿ', 'ಮನಸ್ಸುಗಳ ಮಾತು ಮಧುರ', 'ಚಿಕ್ಕಮಗಳೂರು ಚಿಕ್ಕಮಲ್ಲಿಗೆ' ಸೇರಿದಂತೆ ಎಂಟು ಚಿತ್ರಗಳಿಗೆ ಕಲ್ಯಾಣ್ ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ.

ಒಂದೆಡೆ ಸಂಗೀತ ನಿರ್ದೇಶನ, ಮತ್ತೊಂದೆಡೆ ಗೀತರಚನೆ. ಈ ಎರಡೂ ದೋಣಿಗಳಲ್ಲಿ ಕಾಲಿರಿಸಿರುವ ಕಲ್ಯಾಣ್‌ಗೆ ಸಂಗೀತ ನಿರ್ದೇಶಕರಾಗಿ ಒಂದು ದೊಡ್ಡ ಬ್ರೇಕ್ ಸಿಗಬೇಕಾಗಿದೆ. "ಅಂತಹ ಬ್ರೇಕ್‌ಗಾಗಿ ಕಾಯುತ್ತಿದ್ದೇನೆ ಮಾತ್ರವಲ್ಲ ಈ ವರ್ಷ ಆ ಸಾಧನೆಯ ಗುರಿ ಮುಟ್ಟುತ್ತೇನೆ" ಎಂಬ ಆತ್ಮವಿಶ್ವಾಸದಲ್ಲಿ ಅವರಿದ್ದಾರೆ.

ಸುನಿಲ್‌ನನ್ನು ಮುಗಿಸಿದ್ದು ದಯಾಳ್



ಸುನಿಲ್ ಎಂಬ ಮುದ್ದು ಮುಖದ ನಾಯಕನಟನ ಎರಡನೇ ಇನಿಂಗ್ಸ್ ಈಗ ಆರಂಭವಾಗಿದೆ.

'ಎಕ್ಸ್‌ಕ್ಯೂಸ್ ಮಿ' ಚಿತ್ರದ ಮುಖಾಂತರ ಗಾಂಧಿನಗರದವರ ಕಣ್ಣಿಗೆ ಬಿದ್ದ ಸುನಿಲ್, 'ಪ್ರೀತಿ ಪ್ರೇಮ ಪ್ರಣಯ' ಮತ್ತು 'ಬಾ ಬಾರೋ ರಸಿಕ' ಚಿತ್ರದಲ್ಲಿ ತನ್ನ ಪ್ರತಿಭೆ ತೋರಿಸಿ ಇನ್ನಷ್ಟು ಅವಕಾಶ ಗಿಟ್ಟಿಸಿದ್ದರು. ಆದರೆ ನಾಗಣ್ಣ ನಿರ್ದೇಶನದ 'ಚಪ್ಪಾಳೆ' ಪ್ರೇಕ್ಷಕರಿಗೆ ಕೇಳಿಸಲೇ ಇಲ್ಲ. ಅದಕ್ಕಿಂತಲೂ ಮುಖ್ಯವಾಗಿ 'ಮಸಾಲಾ' ಚಿತ್ರದಲ್ಲಿ ರಾಧಿಕಾಳ ಜೊತೆ ಬಿಸಿ ಬಿಸಿ ದೃಶ್ಯಗಳಲ್ಲಿ ನಟಿಸಿದ್ದರೂ, ಛಾಯಾಸಿಂಗ್ ಜೊತೆ ನಟಿಸಿದ್ದ 'ಸಖ ಸಖಿ' ಚಿತ್ರ ಬಹಳ ನಿರೀಕ್ಷೆ ಹುಟ್ಟಿಸಿದ್ದರೂ ಅವೆರಡೂ ಸಂಪೂರ್ಣವಾಗಿ ಮುಗ್ಗರಿಸಿದ್ದವು.



ಅಂದಹಾಗೆ ಈ ಎರಡೂ ಚಿತ್ರಗಳನ್ನು ನಿರ್ದೇಶಿಸಿದ್ದು ದಯಾಳ್. ಅಂದರೆ ಸುನಿಲನ ಸಿನಿಮಾ ಬದುಕು ಅಕಾಲಿಕವಾಗಿ ಅಂತ್ಯಗೊಂಡಿದ್ದಕ್ಕೆ ಒಂದು ರೀತಿಯಲ್ಲಿ ದಯಾಳ್ ಕಾರಣ. ಏಕೆಂದರೆ ಇವೆರಡು ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಬಿದ್ದ ನಂತರ ಸುನಿಲ್‌ಗೆ ಗಾಂಧಿನಗರದಲ್ಲಿ ಕ್ಯಾರೇ ಅನ್ನುವವರೇ ಇರಲಿಲ್ಲ.

ಈಗ ಸುಮಾರು ಮೂರು ವರ್ಷಗಳ ಅಜ್ಞಾತವಾಸದ ನಂತರ ಸುನಿಲ್ 'ತಾಜ್‌ಮಹಲ್' ಎಂಬ ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇದರ ಹೆಸರೇ ಸೂಚಿಸುವಂತೆ ಇದೊಂದು ಪ್ರೇಮ ಕತೆ. ಈ 'ತಾಜ್‌ಮಹಲ್' ಸುನಿಲ್‌ನ ಇನ್ನೊಂದು ಇನ್ನಿಂಗ್ಸ್‌ಗೆ ದಾರಿ ಮಾಡಿಕೊಡುತ್ತದೆಯೇ ಎಂಬುದನ್ನು ನೋಡಬೇಕು.



'ಅವ್ವ' ಚಿತ್ರದಲ್ಲಿ ಶೃತಿ

'ಪಾನ್‌ವಾಲ'ನಾಗಿ ಶಿವಣ್ಣ



ಶಿವರಾಜ್ ಕುಮಾರ್ ನಟಿಸಲಿರುವ 'ಪರಮೇಶ ಪಾನ್‌ವಾಲ' ಎಂಬ ಚಿತ್ರ ಸದ್ಯದಲ್ಲೇ ಸೆಟ್ಟೇರಲಿದೆ. ಇದರ ಕತೆ-ಗಿತೆ ಏನೂ ಗೊತ್ತಿಲ್ಲದಿದ್ದರೂ ಇದನ್ನು ಹೆಡ್ ಆಫೀಸ್‌ನ ಫೇವರಿಟ್ ಮಹೇಶ್ ಬಾಬು ನಿರ್ದೇಶಿಸುವುದು ಗ್ಯಾರಂಟಿಯಾಗಿದೆ.

ಮಹೇಶ್ ಬಾಬು ಈಗಾಗಲೇ ಪುನೀತ್ ರಾಜ್‌ಕುಮಾರ್ ನಟಿಸಿದ್ದ 'ಆಕಾಶ್' ಮತ್ತು 'ಅರಸು' ಎಂಬ ಯಶಸ್ವಿ ಚಿತ್ರಗಳನ್ನು ನಿರ್ದೇಶಿಸಿ ತಮ್ಮ ಸಾಮರ್ಥ್ಯವನ್ನು ತೋರಿಸಿದ್ದಾರೆ. ಹೀಗಾಗಿ ಬಾಬು ಬಗ್ಗೆ ರಾಜ್‌ಕುಮಾರ್ ಮನೆಯವರಿಗೆ ಎಲ್ಲಿಲ್ಲದ ಅಕ್ಕರೆ. ಸದ್ಯಕ್ಕೆ ಮಹೇಶ್ ಬಾಬು ಪ್ರಜ್ವಲ್ ದೇವರಾಜ್ ನಟಿಸುತ್ತಿರುವ 'ಮೆರವಣಿಗೆ' ಮುಗಿಸಿದ್ದಾರೆ. ಹೀಗಾಗಿ '...ಪಾನ್‌ವಾಲ' ಸದ್ಯದಲ್ಲೇ ಸೆಟ್ಟೇರಿದರೂ ಆಶ್ಚರ್ಯವಿಲ್ಲ.

'ಈ ಬಂಧನ'ದಿಂದ ಭವಿಷ್ಯ?

ವಿಷ್ಣುವರ್ಧನ್ ವೃತ್ತಿ ಜೀವನ ಇಂದು ಅತ್ಯಂತ ಸೂಕ್ಷ್ಮವಾದ ಘಟ್ಟವನ್ನು ತಲುಪಿದೆ. ಹಿರಿಯ ನಟ ಚಿತ್ರರಂಗಕ್ಕೆ ವಿದಾಯ ಹೇಳಲು ತಯಾರಿಲ್ಲ. ಆದರೆ ಅವರು ನಟಿಸಿದ ಚಿತ್ರ ಗೆಲ್ಲುತ್ತಿಲ್ಲ. ಅದರಲ್ಲೂ ತಮ್ಮ ವೃತ್ತಿಜೀವನದ ಪ್ರಮುಖ ಪಾತ್ರ ಎಂದು ವಿಷ್ಣು ಹೇಳಿಕೊಂ 'ಮಾತಾಡ್ ಮಾತಾಡು ಮಲ್ಲಿಗೆ' ಕೂಡ ಭಯಂಕರ ಸೋಲನ್ನು ಕಂಡ ನಂತರ ನಿರ್ಮಾಪ ಅವರನ್ನು ಹಾಕಿ ಚಿತ್ರ ಮಾಡಲು ಮುಂದಾಗುತ್ತಿಲ್ಲ.

ಇಂತಹ ಸಂದರ್ಭದಲ್ಲಿ ಅವರು ನಟಿಸಿರುವ, ವಿಜಯಲಕ್ಷ್ಮಿ ಸಿಂಗ್ ನಿರ್ದೇಶಿಸಿರುವ ಬಂಧನ' ಚಿತ್ರ ಬಿಡುಗಡೆ ಆಗುತ್ತಿದೆ. ಇದು ಗೆಲ್ಲುತ್ತದೋ ಇಲ್ಲವೋ ಎಂಬುದರ ಮೇಲೆ ಅವರ ಭವಿಷ್ಯ ನಿಂತಿದೆ.



ಇಲ್ಲೊಂದು ಕಾಕತಾಳೀಯ ವಿಷಯವನ್ನು ನೆನಪಿಸಿಕೊಳ್ಳಬಹುದು. ಸುಮಾರು 25 ವರ್ಷಗಳ ಹಿಂದೆ ವಿಷ್ಣುರವರ ವೃತ್ತಿ ಜೀವನವು ಇಂತಹದ್ದೇ ಕವಲುದಾರಿಯಲ್ಲಿದ್ದಾಗ ಅಂದು ರಾಜೇಂದ್ರಸಿಂಗ್ ಬಾಬು 'ಬಂಧನ' ಮತ್ತು 'ಮುತ್ತಿನ ಹಾರ' ಎಂಬ ಚಿತ್ರಗಳನ್ನು ಮಾಡಿ ವಿಷ್ಣುರವರ ನೆರವಿಗೆ ಬಂದಿದ್ದರು. ಅಂದು ಬಾಬು ಮಾಡಿದ ಮ್ಯಾಜಿಕ್‌ನ್ನೇ ಇಂದು ಅವರ ಸಹೋದರಿ ವಿಜಯಲಕ್ಷ್ಮಿ ಸಿಂಗ್ ಮಾಡುತ್ತಾರೆಯೇ ಎಂಬುದು ಸದ್ಯದಲ್ಲೇ ನಿರ್ಧಾರವಾಗಲಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-4